ಪ್ರಚೋದನೆ

ಗೌರಿ ಲಂಕೇಶ್

ಮಾರ್ಚ್ 12, 2014 ಪುಟ 20 ರೂ. 15/-



ಸ್ಟಿರಿಟ್ಟು ಸಿಗರೇಟು ಇಸ್ಟೀಟು

ಅನಾರೋಗ್ಯದ ಅಸಲೀ ಕಥೆ

ಮಹಿಳಾ ವಿಶೇಷಾಂಕ

ವೈದೇಹಿ

ಬಾನು ಮುಷ್ತಾಕ್

ಮೀನಾ ಕಂದಸಾಮಿ

ಜ್ಯೋತಿ ಗುರುಪ್ರಸಾದ್

ಮೀನಾಕ್ಷಿ ಬಾಳಿ

ಸರಸ್ವತಿಬಾಯಿ ರಾಜವಾಡೆ

ಎಚ್.ಎಸ್. ಅನುಪಮಾ

ಅನುಸೂಯ ಕಾಂಬಳೆ

ಸಬಿಹಾ ಭೂಮಿಗೌಡ


ಗುಲಾಬಿ ಬಿಳಿಮಲೆ

ಕೆ. ಷರೀಫಾ

ಶ್ರೀ


ಮೋದಿ ಮತ್ತು ರಾಹುಲ್ ಗಾಂಧಿ ಉತ್ತರ ಕೊಡಬೇಕಾದ ಪ್ರಶ್ನೆ

ಕಾರ್ಪೊರೇಟ್ ಸಾಲಗಳ ಪುನರ್‌ರಚನೆ(CDR)ಯ ಬಿಕ್ಕಟ್ಟಿಗೆ ನಿಮ್ಮದೇನು ಪರಿಹಾರ?



ಡಾ.ವಾಸು ಎಚ್.ವಿ.

ಲೋಕಸಭಾ ಚುನಾವಣೆಯ ಬಿಸಿ ಏರುತ್ತಿರುವಾಗ ಆಶ್ಚರ್ಯವಾಗುತ್ತಿರುವ ಒಂದು ಸಂಗತಿಯಿದೆ. ತಾನು ಜನಸಾಮಾನ್ಯರ ಪರ ಎಂದು ಹೇಳಿಕೊಳ್ಳುತ್ತಿರುವ ಕಾಂಗ್ರೆಸ್ ಕಾರ್ಪೊರೇಟ್ ಸಂಸ್ಥೆಗಳ ಪರ 10 ವರ್ಷಗಳ ಕಾಲ ಕೆಲಸ ಮಾಡಿರುವುದಕ್ಕೆ ಒಂದಾದ ಮೇಲೆ ಒಂದು ಹಗರಣಗಳು ಹೊರಬೀಳುತ್ತಿವೆ. ಅದರ ಬಗ್ಗೆ ರೋಸಿಹೋಗಿರುವ ಮಧ್ಯಮ ವರ್ಗದ ಮುಂದೆ ಎರಡು ಆಯ್ಕೆಗಳಿವೆ. ಒಂದು, ತಾನು ದಕ್ಷತೆ, ಅಭಿವೃದ್ಧಿ ಮತ್ತು ದೇಶವನ್ನು ಸೂಪರ್‌ಪವರ್ ಮಾಡಲು ಹೊರಟಿದ್ದೇನೆ ಎಂದು ಹೇಳಿಕೊಳ್ಳುತ್ತಿರುವ ಬಿಜೆಪಿಯ ಮೋದಿ. ಅಂದರೆ ಬಿಜೆಪಿ ಹೇಳುತ್ತಿರುವುದು ಕಾಂಗ್ರೆಸ್ ಏನು ಮಾಡಿತ್ತೋ,



ಅದನ್ನೇ ತಾನು ಮಾನವೀಯ ಮುಖವಾಡವೂ ಇಲ್ಲದಂತೆ ಮತ್ತಷ್ಟು ದಕ್ಷತೆಯಿಂದ ಮಾಡುತ್ತೇನೆ; ಕಾರ್ಪೊರೇಟ್ ಸಂಸ್ಥೆಗಳ ನಿಷ್ಠಾವಂತ ಏಜೆಂಟಾಗಿ ಮಾಡುತ್ತೇನೆ ಎಂದು. ಆದರೂ ಅದನ್ನೊಂದು ಪರ್ಯಾಯವೆಂಬಂತೆ ಕೆಲವರು ನೋಡುತ್ತಿದ್ದಾರೆ. ಏಕೆಂದರೆ ಮೋದಿ ದೇಶೀ ಮತ್ತು ವಿದೇಶೀ ಖೂಳರಿಗೆ ದೇಶವನ್ನೇ ಮಾರಿಬಿಟ್ಟರೂ, ಅದನ್ನು ದೇಶಪ್ರೇಮ ಎಂದು ವರ್ಣಿಸಲು ಸಾಧ್ಯವಾಗುವಂತೆ ಬಿಜೆಪಿ ತನ್ನ ವ್ಯಾಕರಣ ರೂಪಿಸಿಕೊಳ್ಳುತ್ತಿದೆ. ಗುಜರಾತ್‌ನಲ್ಲಿ ನಿಂತು ಪಶ್ಚಿಮದ ಕಡೆ ನೋಡುವ ಜಗತ್ತಿನ ಅತೀ ಎತ್ತರದ ಮೂರ್ತಿಯ ಮುಖವಾಗಿ ಸರ್ದಾರ್ ಪಟೇಲರನ್ನು ಆಯ್ದುಕೊಂಡಿರುವುದು ಅದಕ್ಕೆ ಸೂಕ್ತವೆನಿಸುವಂತೆ ಮಾಡಿಕೊಳ್ಳುತ್ತಿದೆ.

ಆಮ್ ಆದ್ಮಿಯೆಂದರೆ ಮಧ್ಯಮ ವರ್ಗವೋ, ಅಂಬಾನಿ ಥರದವರನ್ನು ಹೊರತುಪಡಿಸಿದ ಭಾರೀ ದೊಡ್ಡ ಬಂಡವಾಳಿಗರೋ ಅಥವಾ 'ಜೋಪಡ್ ಪಟ್ಟಿ'ಯ ಗರೀಬರೋ ಎಂಬ ಪ್ರಶ್ನೆಗೆ, 'ಈ ಮೂರೂ ಭಿನ್ನ ಹಿತಾಸಕ್ತಿಯ ಜನರೂ ಆಮ್ ಆದ್ಮಿಗಳೇ' ಎಂಬ ಉತ್ತರವನ್ನು ಹೊಂದಿರುವ ಆಪ್ ಸಹ ಗೊಂದಲವನ್ನು ಇನ್ನೊಂದು ರೀತಿಯಲ್ಲಿ ಬಿತ್ತುತ್ತಿದೆ. ಏಕೆಂದರೆ 'ಕ್ರೋನಿ ಕ್ಯಾಪಿಟಲಿಸಂ'ಗೆ ಮಾತ್ರ ತಮ್ಮ ವಿರೋಧ, 'ಬಂಡವಾಳವಾದಕ್ಕೆ' ಅಲ್ಲ ಎಂದು ಕೇಜ್ರಿವಾಲ್ ಸ್ಪಷ್ಟಪಡಿಸಿದ್ದಾರೆ. ಬಂಡವಾಳವಾದದ ಈ ಕಾಲದ ತಾರ್ಕಿಕ ಮುಂದುವರಿಕೆಯೇ ಕ್ರೋನಿ ಕ್ಯಾಪಿಟಲಿಸಂ ಅಲ್ಲವೇ ಎನ್ನುವ ಸಹಜ ಅಭಿಪ್ರಾಯದ ಬಗ್ಗೆ ಅವರಿಗೆ ಒಪ್ಪಿಗೆಯಿಲ್ಲದೆಯೂ ಇರಬಹುದು.

ಅದೇನೇ ಇದ್ದರೂ, ಈ ದೇಶದ ಚುಕ್ಕಾಣಿ ಹಿಡಿಯಲು ರಭಸದಿಂದ ಹೊರಟಿರುವ ಯುಪಿಎ ಮತ್ತು ಎನ್‌ಡಿಎಗಳ ಉತ್ಸವಮೂರ್ತಿಗಳಿಬ್ಬರು ಮುಖ್ಯವಾಗಿ ಉತ್ತರಿಸಬೇಕಾದ ಪ್ರಶ್ನೆಯೊಂದಿದೆ. 'ಜನರಲ್' ಆದ ನಿಮ್ಮ ಬಹಿರಂಗ ಘೋಷಣೆಗಳೇನೇ ಇರಲಿ, ದೇಶದ ಒಟ್ಟಾರೆ ಆರ್ಥಿಕತೆಯ ಕುರಿತಾದ ಒಂದು ನಿರ್ದಿಷ್ಟ ಪ್ರಶ್ನೆಗೆ ನಿಮ್ಮ ಉತ್ತರ ಕೊಡಬೇಕು. ಅದು, ಕಾರ್ಪೊರೇಟ್ ಸಂಸ್ಥೆಗಳು ಮತ್ತು ಸರ್ಕಾರದ ಚೊಕ್ಕಸಕ್ಕೆ ಇರುವ ಸಂಬಂಧದ ಕುರಿತಾದ್ದು. ಈ ನಿಟ್ಟಿನಲ್ಲಿ ಈಗಾಗಲೇ ಆಮ್ ಆದ್ಮಿ ಪಕ್ಷವು ಅಂಬಾನಿಯ ತೈಲದ ಸಂಗತಿ ಇಟ್ಟುಕೊಂಡು ಪ್ರಶ್ನೆಗಳನ್ನು ಮುಂದಿಟ್ಟಿದೆ. ಇದೇ ಹಗರಣದ ಕುರಿತು ಒಂದು ವರ್ಷದ ಕೆಳಗೇ ಸಿಪಿಐನ ಗುರುದಾಸ್ ದಾಸ್‌ಗುಪ್ತಾ ಅವರು ಮೊಕದ್ದಮೆಯನ್ನು ದಾಖಲಿಸಿದ್ದರು.

ಆದರೆ ಎನ್‌ಡಿಎ ಮತ್ತು ಯುಪಿಎಯ ನೇತಾರರು ಅದರ ಬಗ್ಗೆ ಉತ್ತರ ನೀಡುವ ಗೋಜಿಗೇ ಹೋಗುತ್ತಿಲ್ಲ, ಅವರಿಗೆ ನೇರವಾಗಿ ಈ ಪ್ರಶ್ನೆಯನ್ನು ಹಾಕುವ ಅವಕಾಶವನ್ನು ಮಾಧ್ಯಮದವರೂ ಗಳಿಸಿಕೊಳ್ಳುತ್ತಿಲ್ಲ, ಹಾಗಾಗಿ ಇದನ್ನು ಹಲವು ಬಗೆಯಲ್ಲಿ ಜನರ ಮುಂದಿಡುವ ಕೆಲಸವನ್ನು ಎಲ್ಲಾ ಪ್ರಜ್ಞಾವಂತರೂ ಮಾಡಬೇಕಿದೆ. ಅಸಲೀ ಪ್ರಶ್ನೆಗಳನ್ನು ಮರೆಮಾಚಿ, ರಾಜಕೀಯ ಪಕ್ಷಗಳೂ, ಮಾಧ್ಯಮಗಳೂ ತಮ್ಮದೇ ಆದ ಒಂದು ಚೌಕಟ್ಟನ್ನು ನಿರ್ಮಿಸಿ ಅದರೊಳಗೇ ನಾವೂ ಆಟ ಆಡಬೇಕೆಂದು ಬಯಸುತ್ತವೆ. ಆ ಚೌಕಟ್ಟನ್ನು ಮುರಿಯದೇ ಹೋದರೆ ಚುನಾವಣೆಯು ನಿಜವಾದ ಅರ್ಥದಲ್ಲಿ ಚುನಾವಣೆಯಾಗದು. ಆಗ ಅದು 'ಮುಂದಿನ ಐದು ವರ್ಷಗಳಲ್ಲಿ ಆಳುವ ವರ್ಗಗಳಲ್ಲಿ ಯಾರು ನಮ್ಮನ್ನು ದೋಚಬೇಕೆಂದು ಆಯ್ದುಕೊಳ್ಳುವ ಪ್ರಹಸನವಾಗಿ (–ಕಾರ್ಲ್ ಮಾರ್ಕ್ಸ್)' ಮುಗಿದುಬಿಡುತ್ತದೆ.

ದೇಶದ ಆರ್ಥಿಕತೆಯನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ರೂಪಿಸಿಕೊಂಡಿರುವ ಭಾರೀ ಬಂಡವಾಳಿಗರು ವಸೂಲಿಯಾಗದ ಸಾಲಗಳು (NPA) ಎಂದು ಮನ್ನಾ ಮಾಡಿಸಿಕೊಳ್ಳುವ ಕುರಿತು ಹಿಂದೆ ಇದೇ ಅಂಕಣದಲ್ಲಿ ಬರೆಯಲಾಗಿತ್ತು. ಆ ಆಟಕ್ಕೆ ಮತ್ತೊಂದು ಆಯಾಮವೂ ಸೇರಿಕೊಂಡಿದೆ. ಅದರ ಹೆಸರು ಕಾರ್ಪೊರೇಟ್ ಸಾಲದ ಪುನರ್‌ರಚನೆ (CDR). ಅದು ನಮ್ಮ ಸಾರ್ವಜನಿಕ ಬ್ಯಾಂಕಿಂಗ್ ಕ್ಷೇತ್ರವನ್ನೇ ಮುಳುಗಿಸಿಬಿಡುವಷ್ಟು ಅಪಾಯಕಾರಿಯಾಗಿ ಬೆಳೆಯುತ್ತಿದೆಯೆಂದು ತಜ್ಞರು ಗಾಬರಿಯಾಗಿದ್ದಾರೆ. ಅದರ ಬಗ್ಗೆ ಯುಪಿಎ, ಎನ್‌ಡಿಎ, ತೃತೀಯ, ಚತುರ್ಥ ಇತ್ಯಾದಿ ರಂಗಗಳು ತಮ್ಮ ನಿಲುವೇನೆಂದು ಹೇಳಬೇಕೆಂದು ಈ ವಾರ ಕೇಳೋಣ ಅಲ್ಲವೇ.

ಈ ಸಿಡಿಆರ್‌ಅನ್ನು ಅರ್ಥಮಾಡಿಕೊಳ್ಳಬೇಕೆಂದರೆ ನಮ್ಮ ಬ್ಯಾಂಕಿಂಗ್ ಉದ್ದಿಮೆಯ ಕುರಿತು ಕೆಲವು ಅಂಶಗಳನ್ನು ಮೊದಲು ತಿಳಿದುಕೊಳ್ಳಬೇಕು. ಭಾರತದ ಬ್ಯಾಂಕಿಂಗ್ ಉದ್ಯಮ ಕ್ಷೇತ್ರದ ಒಟ್ಟಾರೆ ಮೌಲ್ಯ 81 ಟ್ರಿಲಿಯನ್ ಅಥವಾ 81 ಲಕ್ಷ ಕೋಟಿ ರೂಪಾಯಿಗಳು. ಹಣಕಾಸು ಮುಗ್ಗಟ್ಟನ್ನು ಎದುರಿಸುತ್ತಿರುವವರು ಮಾತ್ರ ಅನಿವಾರ್ಯವಾಗಿ ಬ್ಯಾಂಕ್‌ಗಳಿಂದ ಸಾಲ ಪಡೆಯುತ್ತಾರೆ ಎಂಬುದು ಸಾಮಾನ್ಯ ಜನರ ತಿಳಿವಳಿಕೆ. ಆದರೆ ಸಾವಿರಾರು ಕೋಟಿಗಳ ಆಸ್ತಿ ಪಾಸ್ತಿಯನ್ನೂ, ಭಾರೀ ಉದ್ಯಮಗಳ ಮಾಲಿಕತ್ವವನ್ನೂ ಹೊಂದಿರುವ ಕಾರ್ಪೊರೇಟ್ ಕಂಪನಿಗಳು ಕೂಡ ಬ್ಯಾಂಕ್‌ಗಳಿಂದ ಸಾಲ ಪಡೆಯುವುದು ಈಗ ಮಾಮೂಲಿ ಸಂಗತಿ.

ನಮ್ಮ ಆರ್ಥಿಕತೆಗೆ ವಿಭಿನ್ನ ರೀತಿಯ ಕೊಡುಗೆ ನೀಡುತ್ತಿರುವ ನಾನಾ ಉದ್ಯಮಗಳಿಗೆ ಉತ್ತೇಜನಕಾರಿ ಕ್ರಮಗಳನ್ನು ಕೈಗೊಳ್ಳಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯಗಳಲ್ಲೊಂದು. ಹೀಗೆ ದೇಶದ ಒಟ್ಟಾರೆ ಔದ್ಯಮಿಕ ಪ್ರಗತಿಯ ಹಿತದೃಷ್ಟಿಯಿಂದ ಸರ್ಕಾರಗಳು ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ ಮೂಲಕ ಕಾರ್ಪೊರೇಟ್ ಕಂಪನಿಗಳಿಗೆ ಉದಾರವಾಗಿ ಆರ್ಥಿಕ ನೆರವು ಒದಗಿಸುತ್ತಿವೆ. ಪರಿಣಾಮವಾಗಿ ಈಗಿನ ಕಾಲದಲ್ಲಿ ಬ್ಯಾಂಕ್‌ಗಳಿಂದ ಸಾಲ ಪಡೆಯದ ಕಂಪನಿಗಳನ್ನು ಪತ್ತೆ ಹಚ್ಚುವುದೇ ಕಷ್ಟ ಎನ್ನುವಷ್ಟು ವಿರಳ.

ಹೀಗೆ ಸಾಲ ಪಡೆದ ನೂರಾರು ಕಂಪನಿಗಳು ತಾವು ಪಡೆದ ಸಾಲಗಳನ್ನು ಮರುಪಾವತಿ ಮಾಡದೆ/ಮಾಡಲಾಗದೆ 'ಡಿಫಾಲ್ಟರ್'ಗಳಾಗಿ 'ನಾನ್ ಪರ್‌ಫಾರ್ಮಿಂಗ್ ಅಸೆಟ್' (NPA) ವಿಪರೀತವಾಗಿ ಏರಿಕೆಯಾಗುತ್ತಿದೆ. 2013ರ ಸೆಪ್ಟೆಂಬರ್‌ನಲ್ಲಿ ಕೊನೆಗೊಂಡ ತ್ರೈಮಾಸಿಕದ ವೇಳೆಗೆ NPAನ ಮೊತ್ತ 2,37,000 ಕೋಟಿಗಳಿಗೇರಿತ್ತು. ಈ ಮೊತ್ತ 2014ರ ಮಾರ್ಚ್‌ನಲ್ಲಿ ಅಂತ್ಯಗೊಳ್ಳುವ ಈ ಆರ್ಥಿಕ ವರ್ಷದ ವೇಳೆಗೆ 2,90,000 ಕೋಟಿಗಳ ಗಡಿ ದಾಟಲಿದೆ ಎಂದು ICRA (ಭಾರತದ ಕ್ರೆಡಿಟ್ ರೇಟಿಂಗ್ ಏಜೆನ್ಸಿ) ಸಂಸ್ಥೆ ಎಚ್ಚರಿಕೆ ನೀಡಿತ್ತು.

ಚಾಪೆಯ ಕೆಳಗಿನ ನೀರಿನಂತೆ ತಣ್ಣಗೆ ಹರಿದು ನಮ್ಮ ಆರ್ಥಿಕತೆಯನ್ನು ದುರ್ಬಲಗೊಳಿಸುತ್ತಿರುವ ಈ ಒಟ್ಟು ಬಿಕ್ಕಟ್ಟನ್ನು ಪರಿಹರಿಸಲಿಕ್ಕಾಗಿ ಬ್ಯಾಂಕುಗಳು ಹಾಗೂ ಸರ್ಕಾರ ಜಂಟಿಯಾಗಿ Corporate Debt Restructuring (CDR) ಎಂಬ ವ್ಯವಸ್ಥೆಯೊಂದನ್ನು ರೂಪಿಸಿದ್ದವು.

ಭಾರೀ ಮೊತ್ತದ ವಹಿವಾಟು ಹೊಂದಿರುವ ಬ್ಯಾಂಕಿಂಗ್ ಕ್ಷೇತ್ರ ಈಗ ಒಂದು ಗಂಭೀರವಾದ ಅಪಾಯಕ್ಕೆ ಸಿಲುಕಿದೆ. "ದಿನೇದಿನೇ ಏರುತ್ತಿರುವ ಖಾಸಗಿ ಕಂಪನಿಗಳ ವಸೂಲಿಯಾಗದ ಸಾಲಗಳು NPA ಮತ್ತು ಕಾರ್ಪೊರೇಟ್ ಕಂಪನಿಗಳ ಸಾಲ ಪುನರ್‌ರಚನೆ (CDR) ಸಮಸ್ಯೆಗಳು ಮುಂದಿನ ದಿನಗಳಲ್ಲಿ ಬ್ಯಾಂಕಿಂಗ್ ಉದ್ಯಮಕ್ಕೆ ಬಹುದೊಡ್ಡ ಹೊಡೆತ ನೀಡಲಿವೆ" ಎಂದು ಇತ್ತೀಚೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಎಚ್ಚರಿಕೆ ನೀಡಿದೆ.

Corporate Debt Restructuring (CDR) ಎಂದರೇನು?

ಆರ್ಥಿಕ ಹಿಂಜರಿತ, ಕಾರಣಾಂತರಗಳಿಂದ ಉದ್ದೇಶಿತ ಯೋಜನೆಯ ಚಾಲನೆಯಲ್ಲಿ ಆದ ವಿಳಂಬ ಅಥವಾ ಇನ್ನಿತರೆ ಅನಿರೀಕ್ಷಿತ ಕಾರಣಗಳಿಂದಾಗಿ ಸಾಲ ಮರುಪಾವತಿ ಮಾಡಲಾಗದ ಕಂಪನಿಗಳಿಗೆ ಸಾಲದ ಒತ್ತಡವನ್ನು ಕಡಿಮೆ ಮಾಡಿ ಔದ್ಯಮಿಕ ವಾತಾವರಣವನ್ನು ಉತ್ತೇಜಿಸುವ ದೃಷ್ಟಿಯಿಂದ ಬ್ಯಾಂಕುಗಳು ಹಾಗೂ ಸರ್ಕಾರ ಜಂಟಿಯಾಗಿ ರೂಪಿಸಿರುವ ವ್ಯವಸ್ಥೆಯೇ Corporate Debt Restructuring ಅಥವಾ ಕಾರ್ಪೊರೇಟ್ ಸಾಲಗಳ ಪುನರ್‌ರಚನಾ ವ್ಯವಸ್ಥೆ.

ಈ ವ್ಯವಸ್ಥೆಯಡಿ ಸಾಲ ಮರುಪಾವತಿಯ ಅವಧಿಯನ್ನು ವಿಸ್ತರಿಸುವುದು, ಬಡ್ಡಿಮನ್ನಾ ಮಾಡುವುದು, ನಿರ್ದಿಷ್ಟ ಅವಧಿಯವರೆಗೆ ಮರುಪಾವತಿ ರಜೆ ಮಂಜೂರು ಮಾಡುವುದು ಹಾಗೂ ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ವಸೂಲಿಯಾಗಬೇಕಿದ್ದ ಸಾಲದ ಮೊತ್ತವನ್ನೇ ಕಡಿತಗೊಳಿಸುವುದು - ಮುಂತಾದ ಅನುಕೂಲತೆಗಳನ್ನು ಒದಗಿಸಲಾಗುತ್ತದೆ.

ಕಳೆದ ಜೂನ್‌ವರೆಗೆ ಸುಮಾರು 415 ಕಾರ್ಪೊರೇಟ್ ಕಂಪನಿಗಳ ಒಟ್ಟು 2,50,279 ಕೋಟಿ ರೂಪಾಯಿಗಳ ಸಾಲವನ್ನು CDR ವ್ಯವಸ್ಥೆಯಡಿ ತರಲಾಗಿದೆ. ಇದರಲ್ಲಿ ಕಬ್ಬಿಣ ಮತ್ತು ಉಕ್ಕು ಕ್ಷೇತ್ರವೊಂದರ ಪಾಲು 53,543 ಕೋಟಿಗಳು! ಇತ್ತೀಚಿನ ಒಂದು ಅಂದಾಜಿನಂತೆ ಇದುವರೆಗೆ ಭಾರತೀಯ ಬ್ಯಾಂಕುಗಳು ಒಟ್ಟು 4 ಲಕ್ಷ ಕೋಟಿ ಮೊತ್ತದ ಸಾಲಗಳನ್ನು CDR ವ್ಯವಸ್ಥೆಗೆ ಬದಲಾಯಿಸಲಾಗಿದೆ ಎಂದರೆ ಇದರ ಅಗಾಧತೆ ಎಷ್ಟು ಎಂಬುದು ನಮಗೆ ಮನವರಿಕೆಯಾಗುತ್ತದೆ. ಅಷ್ಟು ಮಾತ್ರವಲ್ಲ, ತಮ್ಮ ಸಾಲವನ್ನು CDRಗೆ ವರ್ಗಾಯಿಸುವಂತೆ ಕೋರಿ ನೂರಾರು ಕಂಪನಿಗಳು ಅರ್ಜಿ ಹಿಡಿದು ಸಾಲುಗಟ್ಟಿ ನಿಂತಿವೆ. ಯಾಕೆಂದರೆ CDR ವ್ಯವಸ್ಥೆಯಡಿ ದೊರೆಯುವ ಆಕರ್ಷಕ ಸೌಲಭ್ಯಗಳ ಲಾಭ ಪಡೆಯಲು ಆರ್ಥಿಕವಾಗಿ ಸದೃಢವಾಗಿರುವ ಕಂಪನಿಗಳೂ ಕೂಡ "ಉದ್ದೇಶಪೂರ್ವಕ ಡಿಫಾಲ್ಟರ್"ಗಳಾಗಿ NPA ಪಟ್ಟಿಗೆ ಸೇರುವ ಆತಂಕ ಸೃಷ್ಟಿಸಿ, ನಂತರ CDR ಪಟ್ಟಿಗೆ ಸೇರಲು ಉತ್ಸುಕರಾಗಿ ಅರ್ಜಿ ಗುಜರಾಯಿಸಿದ್ದಾರೆಂದು ಹಲವಾರು ಸಮಿತಿಗಳ ಅಧ್ಯಯನ ವರದಿಯೇ ಹೇಳುತ್ತವೆ. ಕಳೆದ ಮೂರು ವರ್ಷಗಳಲ್ಲಿ ಕಾರ್ಪೊರೇಟ್ ಕಂಪನಿಗಳಿಗೆ ಕೊಡುತ್ತಿರುವ ಬ್ಯಾಂಕ್‌ಗಳ ಒಟ್ಟಾರೆ ಸಾಲದ ಪ್ರಮಾಣ ವಾರ್ಷಿಕ ಶೇಕಡ 20ರ ದರದಲ್ಲಿ ಏರಿಕೆ ಕಾಣುತ್ತಿದ್ದರೆ, ಇದೇ ವೇಳೆಯಲ್ಲಿ ಸಿಡಿಆರ್‌ಗೆ ಮಾರ್ಪಾಟು ಹೊಂದಿದ ಸಾಲಗಳ ಪ್ರಮಾಣ ಶೇಕಡ 40ರಷ್ಟು! ವಿಪರ್ಯಾಸ ಹೇಗಿದೆ ನೋಡಿ. NPA ಸಮಸ್ಯೆಯ ಪರಿಹಾರ ಕ್ರಮವಾಗಿ ರೂಪು ತಳೆದ CDR ವ್ಯವಸ್ಥೆಯೇ ಮತ್ತೊಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿ ಇದೀಗ ರಿಸರ್ವ್ ಬ್ಯಾಂಕ್‌ನ ನೀತಿ ನಿರೂಪಕರಿಗೆ ಗಂಭೀರ ಸವಾಲಾಗಿದೆ.

ಕೆಲವು ಉದಾಹರಣೆಗಳನ್ನು ನೋಡೋಣ.

ಗ್ಯಾಮನ್ ಇಂಡಿಯಾ ಎಂಬ ಕನ್‌ಸ್ಟ್ರಕ್ಷನ್ ಕಂಪನಿ ವಿವಿಧ ಬ್ಯಾಂಕುಗಳಿಂದ 13,500 ಕೋಟಿ ರೂಪಾಯಿ ಸಾಲ ಪಡೆದಿತ್ತು, ಈ ಕಂಪನಿ ಭಾರತದಾದ್ಯಂತ ಸುಮಾರು 60ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳನ್ನು (100 ಕೋಟಿಯಿಂದ 1000 ಕೋಟಿ ಯೋಜನಾ ವೆಚ್ಚದವು) ಏಕಕಾಲದಲ್ಲಿ ಕೈಗೆತ್ತಿಕೊಂಡಿದೆ. ಅಲ್ಲದೆ ಬಾಂಗ್ಲಾದೇಶ, ಭೂತಾನ್, ನೇಪಾಳ, ದುಬೈ, ಉತ್ತರ ಆಫ್ರಿಕಾ, ಲಿಬಿಯಾ, ಇರಾಕ್, ಓಮನ್ ಹೀಗೆ ಹತ್ತಾರು ವಿದೇಶಗಳಲ್ಲಿ ಮೂಲಸೌಕರ್ಯ ಯೋಜನೆಗಳ ಕಾಂಟ್ರಾಕ್ಟ್ ಗಿಟ್ಟಿಸಿಕೊಂಡು ಅವುಗಳು ಅನುಷ್ಠಾನದ ಹಂತದಲ್ಲಿವೆ. ನಿರ್ಮಾಣ ಕಾಮಗಾರಿ ಕ್ಷೇತ್ರವಲ್ಲದೆ ವಿದ್ಯುತ್ ಉತ್ಪಾದನೆ, ಗಣಿಗಾರಿಕೆ ಮುಂತಾದ ಕ್ಷೇತ್ರಗಳಿಗೂ ತನ್ನ ವಹಿವಾಟನ್ನು ವಿಸ್ತರಿಸಿದೆ.

ತನಗೆ ಇಚ್ಛೆ ಬಂದ ಹಾಗೆಲ್ಲಾ ವಿಸ್ತಾರಗೊಂಡ ಕಂಪೆನಿ, ಬ್ಯಾಂಕುಗಳ ಸಾಲ ಮಾತ್ರ ಹಿಂದಿರುಗಿಸಲಿಲ್ಲ, ಹಾಗಾ NPA ಪಟ್ಟಿ ಸೇರಿತು. ನಂತರ ಒತ್ತಡ ಸೃಷ್ಟಿಸಿ ಕಳೆ ಜುಲೈನಲ್ಲಿ CDR ಸೌಲಭ್ಯ ಪಡೆದುಕೊಳ್ಳುವಲ್ಲಿಯೂ ಯಶಸ್ವಿಯಾಗಿದೆ. ಈಗಾಗಲೇ CDR ವ್ಯವಸ್ಥೆಯ ಸುಮಾರು 280 ಕೋಟಿಗಳಷ್ಟು ಮೊತ್ತದ ಬಡ್ಡಿ ಮನ ಆಗಿದೆ. ಸಾಲದ ಅವಧಿ 10 ವರ್ಷಗಳವರೆಗೆ ವಿಸ್ತರಿಸಿ ಜೊತೆಗೆ ಮುಂದಿನ ಎರಡು ವರ್ಷಗಳ ಕಾ ಮರುಪಾವತಿಯಿಂದ ವಿನಾಯಿತಿ (ಮಾರಟೋರಿಯ ಅವಧಿ) ಪಡೆದುಕೊಂಡಿದೆ.

ಭಾರತ ಮಾತ್ರವಲ್ಲದೆ ಹತ್ತಾರು ವಿದೇಶಗಳಲ್ಲಿ ತನ ವಹಿವಾಟನ್ನು ವಿಸ್ತರಿಸಿ ಹಣಕಾಸು ಮುಗ್ಗಟ್ಟನ್ನು ಎದುರಿಸಿದ ಕಂಪನಿಗೆ ಬಡ ಭಾರತೀಯರ ಹಣ ಎಗ್ಗಿಲ್ಲದೆ ಹರಿದ ಪರಿ ಇದು. ಕೆದಕುತ್ತಾ ಹೋದಂತೆಲ್ಲ ಇಂಥಾ ಪ್ರಕರಣಗಳಿಗ ಲೆಕ್ಕವಿಲ್ಲ. ಸಿಡಿಆರ್ ಸಮಸ್ಯೆಯ ಮತ್ತೊಂದು ಮಗ್ಗುಲು ಇನ್ನೂ ವಿಚಿತ್ರವಾಗಿದೆ. ಇಂಡಿಯಾ ಸಿಮೆಂಟ್ಸ್ ಕಂಪನಿಯ ಉದಾಹರಣೆ ನೋಡೋಣ. ಬಿಸಿಸಿಐ ಶ್ರೀನಿವಾಸನ್ (ಹಾಲಿ ಐಸಿಸಿ ಕೂಡಾ) ಎಂಬ ಕುಖ್ಯಾತ ಸ್ಪಾಟ್‌ಫಿಕ್ಸಿಂಗ್ ಆಸಾಮಿ ಇದರ ಒಡೆಯ. ಇಂಡಿಯಾ ಸಿಮೆಂಟ್ ಕಂಪನಿಯ ಬ್ಯಾಂಕ್ ಬಾಕಿ 2003ರಲ್ಲಿ 1793 ಕೋಟಿ ರೂಪಾಯಿಗಳು. ಬ್ಯಾಂಕ್ ಬಾಕಿ ಪಾವತಿಸದೆ ಡಿಫಾಲ್ಟರ್ ಆದ ಅವಧಿಯಲ್ಲೇ ವಿಶಾಖ ಸಿಮೆಂಟ್ಸ್, ರಾಶಿ ಸಿಮೆಂಟ್ಸ್ ಮುಂತಾದ ಕಂಪನಿಗಳನ್ನು ಖರೀದಿಸಲು ಅದು ತನ್ನ




ಸಂಪನ್ಮೂಲಗಳನ್ನು ವ್ಯಯ ಮಾಡಿದೆ. 2003ರಲ್ಲಿ CDR ಸೌಲಭ್ಯ ಪಡೆದ ಕಂಪನಿಯ ಲಾಭದ ಪ್ರಮಾಣ ಏರುಗತಿಯಲ್ಲಿದೆ. ಅದರ ಹಣಕಾಸು ಸ್ಥಿತಿಗತಿ ಉತ್ತಮವಾಗಿದೆ. ಆದರೆ ನಿಯಮಾವಳಿ ಪ್ರಕಾರ CDR ವ್ಯವಸ್ಥೆಯಡಿಯಲ್ಲಿರುವ ಕಂಪನಿಗಳು ಆರ್ಥಿಕವಾಗಿ ಪುನಶ್ಚೇತನ ಪಡೆದಂತೆ ಈ ವ್ಯವಸ್ಥೆಯಿಂದ ಹೊರಬಂದು ಸಾಮಾನ್ಯ ಸಾಲಗಾರರ ನಿಯಮಾವಳಿಯಡಿ ಬರಬೇಕು. ಆದರೆ ಇಂಡಿಯಾ ಸಿಮೆಂಟ್ಸ್ ಕಂಪನಿಯ ಮಾಲಿಕರಿಗೆ ಅಂಥಾ ಯಾವ ಯೋಚನೆಯೂ ಇದ್ದಂತಿಲ್ಲ. CDR ಉಸ್ತುವಾರಿ ಕೋಶದಿಂದ ಹಲವಾರು ಬಾರಿ ಮನವಿ ಮಾಡಿದಾಗ್ಯೂ ಇಂಡಿಯಾ ಸಿಮೆಂಟ್ಸ್ ಕಂಪನಿ CDRನಿಂದ ಹೊರಬರುವ ಯಾವ ಸೂಚನೆಯನ್ನೂ ತೋರಿಸುತ್ತಿಲ್ಲವೆಂಬ ಆರೋಪ ಕೇಳಿಬಂದಿದೆ.

ಇಲ್ಲಿ ನಾವು ಗಮನಿಸಲೇಬೇಕಾದ ಮತ್ತೊಂದು ಪ್ರಮುಖ ಅಂಶವಿದೆ. CDRಗೆ ಹರಿಯುತ್ತಿರುವುದು ಬಹುತೇಕ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ ಹಣವೇ ಹೊರತು ಖಾಸಗಿ ಬ್ಯಾಂಕ್‌ಗಳ ಹಣ ನಾಮರೂಪದ್ದು. ಅಲ್ಲದೆ ಖಾಸಗಿ ಬ್ಯಾಂಕುಗಳು CDR ಪ್ರಮಾಣವನ್ನು ವರ್ಷದಿಂದ ವರ್ಷಕ್ಕೆ ತಗ್ಗಿಸುವಲ್ಲಿ ಯಶಸ್ವಿಯಾಗಿವೆ. ಆದರೆ ಸರ್ಕಾರಿ ಬ್ಯಾಂಕುಗಳ ಕತೆ ಇದಕ್ಕೆ ತದ್ವಿರುದ್ಧ. CDRನ ಇಂಥ ಅನೇಕ ಸಮಸ್ಯೆಗಳನ್ನು ಅಧ್ಯಯನ ಮಾಡಿದ ರಿಸರ್ವ್ ಬ್ಯಾಂಕ್ ನೇಮಿಸಿದ್ದ ಮಹಾಪಾತ್ರ ಸಮಿತಿ ಇದೀಗ ಕಠಿಣ ಕಾನೂನುಗಳನ್ನು ರೂಪಿಸುವಂತೆ ಶಿಫಾರಸ್ಸುಗಳನ್ನು ಮಾಡಿದೆ. ರಿಸರ್ವ್ ಬ್ಯಾಂಕ್‌ನ ಡೆಪ್ಯೂಟಿ ಗವರ್ನರ್ ಕೆ.ಸಿ.ಚಕ್ರವರ್ತಿ "CDR ಸಮಸ್ಯೆಗೆ ಆರ್ಥಿಕತೆಯ ಹಿಂಜರಿತವೇ ಕಾರಣವಾಗಿದ್ದಲ್ಲಿ ಈ ಸಮಸ್ಯೆ ಎಲ್ಲಾ ಬ್ಯಾಂಕುಗಳಲ್ಲೂ ಕಂಡುಬರಬೇಕಿತ್ತು. ಆದರೆ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳಲ್ಲೇ ಯಾಕೆ ಈ ಸಮಸ್ಯೆ ಉದ್ಭವಿಸಿದೆ?" ಎಂದು ಪ್ರಶ್ನಿಸಿದ್ದಾರೆ.

ನಾವೂ ಕೇಳಬೇಕಿದೆ. ಇದರ ಬಗ್ಗೆ ಯಾಕೆ ಮೋದಿ ಮಾತಾಡುತ್ತಿಲ್ಲ? ಅಂಬಾನಿಯ ಏಜೆಂಟರಾಗಿ ಕೆಲಸ ಮಾಡಿದ ಯುಪಿಯ ಸರ್ಕಾರದನೀತಿಯನ್ನು ಯಾಕೆ ಮೋದಿ ಪ್ರಶ್ನಿಸುತ್ತಿಲ್ಲವೋ, ಅದೇ ಕಾರಣಕ್ಕೆ ಇದರ ಕುರಿತೂ ಮಾತನಾಡುತ್ತಿಲ್ಲ. ಅದನ್ನೇ ತಾನೂ ಮತ್ತಷ್ಟು ನಿಷ್ಠೆಯಿಂದ ಮಾಡುತ್ತೇನೆ ಎಂದು ಆತನಿಗೆ ಗೊತ್ತು. ಇನ್ನು ತೃತೀಯ ರಂಗದ ನೇತಾರರಲ್ಲೊಬ್ಬರಾದ ಮುಲಾಯಂ ಸಿಂಗ್ ಯಾದವ್ ಅಂಬಾನಿ ಸೋದರರಲ್ಲೊಬ್ಬನಾದ ಅನಿಲ್ ಅಂಬಾನಿಯ ಮಿತ್ರ, ಪಾಲುದಾರ ಎಲ್ಲವೂ. ಅದರಲ್ಲಿ ಎಡಪಕ್ಷಗಳೂ ಭಾಗಿ. ಮೋದಿ, ರಾಹುಲ್ ಜೊತೆ ಇವರೆಲ್ಲರೂ ಉತ್ತರ ಕೊಡಬೇಕಾದ್ದು ನ್ಯಾಯವಲ್ಲವೇ?

ಮಹಿಳಾ ವಿಶೇಷಾಂಕ ಮತ್ತು ಅಪ್ಪಿಕೋ ಅಮ್ಮನ ವಿವಾದ



ಕಂಡಹಾಗೆ



• ಗೌರಿ ಲಂಕೇಶ್
editorl.ankesh@gmail.com

ಮುಂದಿನ ವಾರ, ಮಾರ್ಚ್ 7 ಮತ್ತು 8ರಂದು, ರಾಜ್ಯದ ಎಲ್ಲ ಮಹಿಳಾ ಸಂಘಟನೆಗಳು ಜೊತೆಗೂಡಿ ಮೈಸೂರಿನಲ್ಲಿ 'ಮಹಿಳಾ ದೌರ್ಜನ್ಯ: ಲಿಂಗತ್ವ-ಕಾನೂನು-ಪ್ರತಿರೋಧದ ನೆಲೆಗಳು' ಎಂಬ ವಿಚಾರಸಂಕಿರಣ ಮತ್ತು ಇತರೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಈ ನಿಮ್ಮ ಪತ್ರಿಕೆ ಈ ವಾರ 'ಮಹಿಳಾ ವಿಶೇಷಾಂಕ'ವನ್ನು ಹೊರತರುತ್ತಿದೆ. ಇಂತಹ ಒಂದು ವಿಶೇಷಾಂಕವನ್ನು ತರಬೇಕೆಂಬ ಯೋಚನೆ ನನಗೆ ತಡವಾಗಿ ಹೊಳೆದಿದ್ದರಿಂದ ಇದರ ಬಗ್ಗೆ ಮುನ್ನವೇ ಪ್ರಕಟಿಸಲಾಗಲಿಲ್ಲ. ಆದರೂ ಈ ಸಂಚಿಕೆಯು ನಾನು ಅಂದುಕೊಂಡಿದ್ದಕ್ಕಿಂತಲೂ ಅದ್ಭುತವಾಗಿ ಮೂಡಿಬಂದಿದೆ. ರಾಜ್ಯದ ಪ್ರಮುಖ ಲೇಖಕಿಯರಲ್ಲಿ ಹಲವಾರು ಜನ ಈ ಸಂಚಿಕೆ ಹೊರತರುವಲ್ಲಿ ನಮ್ಮ ತಂಡಕ್ಕೆ ನೆರವಾಗಿದ್ದಾರೆ. ಅವರೆಲ್ಲರಿಗೆ ನಮ್ಮ ಧನ್ಯವಾದಗಳು.

ಮಹಿಳೆಯರ ಮೇಲಾಗುತ್ತಿರುವ ಅನ್ಯಾಯ, ದೌರ್ಜನ್ಯ, ಹಕ್ಕುಗಳ ದಮನ ಇತ್ಯಾದಿಗಳ ನಡುವೆಯೂ ಮಹಿಳೆಯರು ತಮ್ಮ ಸೂಕ್ಷ್ಮತೆ ಮತ್ತು ಸೃಜನಶೀಲತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಮಹಿಳೆಯರ ಇಂತಹ ಶಕ್ತಿಯನ್ನು ತೋರುವ ಈ ಸಂಚಿಕೆಯನ್ನು ರೂಪಿಸುತ್ತಿರುವಾಗಲೇ ಜಗತ್ತಿನಾದ್ಯಂತ ಹೆಸರು ಮಾಡಿರುವ ಮಹಿಳೆಯೋರ್ವಳ ಸುತ್ತ ದಟ್ಟ ಆರೋಪಗಳು ಕೇಳಿಬಂದಿವೆ. ಆದರೆ ನಮ್ಮ ದೇಶದ ಯಾವ ಪ್ರಮುಖ ಮಾಧ್ಯಮಗಳೂ ಅದರತ್ತ ಗಮನ ಹರಿಸಿಲ್ಲ. ಯಾಕೆಂದರೆ ಆ ಮಹಿಳೆ 'ಅಪ್ಪಿಕೋ' ಕುಖ್ಯಾತಿಯ ಅಮ್ಮ ಅಲಿಯಾಸ್ ಮಾತಾ ಅಮೃತಾನಂದಮಯಿ!

ಇತ್ತೀಚೆಗೆ ಅಪ್ಪಿಕೋ ಅಮ್ಮನ ಮಾಜಿ ಶಿಷ್ಯೆಯೊಬ್ಬಳು ಒಂದು ಪುಸ್ತಕವನ್ನು ಬರೆದಿದ್ದು ಅದೀಗ ಇಂಟರ್‌ನೆಟ್‌ನಲ್ಲಿರುವ ಸಾಮಾಜಿಕ ತಾಣಗಳಲ್ಲಿ ದೊಡ್ಡ ಚರ್ಚೆಯ ಕೇಂದ್ರಬಿಂದುವಾಗಿದೆ. ಕೇರಳದಲ್ಲಂತೂ ಅದರ ಸುತ್ತ ವಾದವಿವಾದಗಳು ನಡೆಯುತ್ತಿದೆ. ಗೈಲ್ ಟ್ರೆಡ್‌ವೆಲ್ ಎಂಬ ಆಸ್ಟ್ರೇಲಿಯಾದ ಮಹಿಳೆ 'ಹೋಲಿ ಹೆಲ್: ಎ ಮೆಮುವಾ ಆಫ್ ಫೇತ್, ಡಿವೋಶನ್ ಅಂಡ್ ಪ್ಯೂರ್ ಮ್ಯಾಡ್ನೆಸ್' ಎಂಬ ಪುಸ್ತಕವನ್ನು ಬರೆದಿದ್ದು ಅಪ್ಪಿಕೋ ಅಮ್ಮನ 'ಭಕ್ತ ಸಾಮ್ರಾಜ್ಯ'ದಲ್ಲಿ ಅವ್ಯವಹಾರಗಳು, ಅನೈತಿಕ ಸಂಬಂಧಗಳು ನಡೆಯುತ್ತಿವೆ ಎಂದು ಆರೋಪಿಸಿದ್ದಾಳೆ.

ಕೇರಳದ ಬಡ ಮೀನುಗಾರರ ಕುಟುಂಬವೊಂದರಲ್ಲಿ ಜನಿಸಿದ ಅಮೃತಾನಂದಮಯಿ ಹೆಚ್ಚು ಓದಿಲ್ಲ. ಮಲೆಯಾಳಂ ಬಿಟ್ಟು ಬೇರೆ ಭಾಷೆ ಗೊತ್ತಿಲ್ಲ. ಪಾಂಡಿತ್ಯವಂತೂ ಈಕೆಯ ಹತ್ತಿರ ಸುಳಿದಿಲ್ಲ. ಆದರೂ ಈಕೆ ಇವತ್ತು ಕೋಟ್ಯಾಂತರ ರೂಪಾಯಿಗಳ ಆಸ್ತಿಯ ಒಡತಿ. ಮೆಡಿಕಲ್, ಇಂಜಿನಿಯರಿಂಗ್, ಫಾರ್ಮಸಿ, ಕಂಪ್ಯೂಟರ್ ಸೈನ್ಸ್, ಮ್ಯಾನೇಜ್‌ಮೆಂಟ್ ಇತ್ಯಾದಿ ಕಾಲೇಜುಗಳ ಮಾಲಕಿ. ಜಗತ್ತಿನಾದ್ಯಂತ ಹತ್ತಾರು ಕಡೆ ವಿದ್ಯಾಸಂಸ್ಥೆಗಳನ್ನೂ, ಆಶ್ರಮಗಳನ್ನೂ ಹೊಂದಿರುವ ಮಹಿಳೆ. ಇದೆಲ್ಲಾ ಸಾಧ್ಯವಾಗಿದ್ದು ಒಂದೇ ಒಂದು ಕಾರಣಕ್ಕೆ: ಆಕೆ ತನ್ನ 'ಭಕ್ತ'ರನ್ನು ಅಪ್ಪಿಕೊಂಡು ಮುಖಗಳನ್ನು ಮುದ್ದಿಸುವಂತೆ ಕೆನ್ನೆಗಳನ್ನು ಮುದ್ದಿಸುವುದರಿಂದ! ದೇವರು ಮತ್ತು ಆಧ್ಯಾತ್ಮದ ಹೆಸರಿನಲ್ಲಿ ಎಂತಹ ಮಂಕು ಎರಚಿದರೂ ಅದನ್ನು ಕೊಂಡಾಡುವ ಜನರಿರುವ ಎಲ್ಲೆಡೆ [illegible] ಅಪ್ಪಿಕೋ ಅಮ್ಮನ ಅಂತರರಾಷ್ಟ್ರೀಯ [illegible] ಸಾಕ್ಷಿ!

ಈ ಅಪ್ಪಿಕೋ ಅಮ್ಮ ತಾನು ಕಾಳಿಯ ಆಧುನಿಕ ಅವತಾರ ಎಂದೂ, ದೇವತೆ ಎಂದೂ ಕೇಳುತ್ತಾಳೆ. ತನ್ನ ವಿರೋಧಿಗಳನ್ನು ಅಸದೃಶ ಶಕ್ತಿಗಳು ನಿವಾರಿಸುತ್ತವೆ ಎಂದು ಎಚ್ಚರಿಸುತ್ತಾಳೆ. ತನ್ನ ಭಕ್ತರಿಗೆ ತನ್ನನ್ನು ಹೋಲುವ ಮೆತ್ತೆಯಿಂದ ತುಂಬಿರುವ ಬೊಂಬೆಗಳನ್ನು ಮಾರಿ, ತನ್ನ ದುಃಖ ಮತ್ತು ದುಮ್ಮಾನವನ್ನೆಲ್ಲ ಆ ಬೊಂಬೆಗಳಿಗೆ ಹೇಳಿದರೆ ತನಗೆ ಕೇಳಿಸುತ್ತೆ ತಾನು ಎಲ್ಲೇ ಇದ್ದರೂ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ ಎನ್ನುತ್ತಾಳೆ.

ವಿದೇಶಗಳಲ್ಲಿ ಈಕೆಗೆ ಅದೆಂತಹ ಮೂಢ ಭಕ್ತರಿದ್ದಾರೆಂದರೆ ಈಕೆ ಉಪಯೋಗಿಸಿ ಬಿಟ್ಟಿರುವ



ಹಲ್ಲುಜ್ಜುವ ಬ್ರಷ್ ಅನ್ನೂ, ಈಕೆ ತೊಟ್ಟು ತೊರೆದಿರುವ ಸೀರೆಯ ತುಂಡುಗಳನ್ನು, ಈಕೆ ಆಶೀರ್ವದಿಸಿರುವ ನೀರನ್ನು, ಈಕೆಯ ದೈವೀಶಕ್ತಿಯ ಬಗ್ಗೆ ರಂಜಿತವಾಗಿ ಭಕ್ತರು ಬರೆದಿರುವ ಪುಸ್ತಕಗಳನ್ನು, ಈಕೆಯನ್ನು ಹೋಲುವ ಬೊಂಬೆಗಳನ್ನು ಮತ್ತು ಫೋಟೋಗಳನ್ನು ಮುಗಿಬಿದ್ದು ಕೊಂಡುಕೊಳ್ಳುತ್ತಾರೆ. ಒಂದು ಅಂದಾಜಿನ ಪ್ರಕಾರ ಈಕೆ ಒಮ್ಮೆ ಯಾವುದೋ ಫಾರಿನ್ ದೇಶವನ್ನು ಸುತ್ತಿ ಬಂದರೆ ಅದರಿಂದ ಆಕೆಗೆ ಬರುವ ಆದಾಯವೇ ಮೂರ್ನಾಲ್ಕು ಮಿಲಿಯನ್ ಡಾಲರ್‌ಗಳು!

ಕೆಲವೇ ಕೆಲವು ವರ್ಷಗಳಲ್ಲಿ ಈಕೆಯ ಭಕ್ತ ಸಾಮ್ರಾಜ್ಯ ಎಷ್ಟು ಪ್ರಭಾವವನ್ನು ಬೆಳೆಸಿಕೊಂಡಿದೆ ಎಂದರೆ ಈಗ ತಮಿಳುನಾಡು, ಕೇರಳ ಮತ್ತು ನಮ್ಮ ಕರ್ನಾಟಕದಲ್ಲೂ ಆಕೆಯ ಸಂಸ್ಥೆಗಳು ತಲೆ ಎತ್ತಿವೆ. 2001ರಲ್ಲಿ ಎಸ್.ಎಂ.ಕೃಷ್ಣರ ಕಾಂಗ್ರೆಸ್ ಸರ್ಕಾರ ವಸತಿ ಕಾಲೋನಿ ಮತ್ತು ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಲು ಬೆಂಗಳೂರಿನಲ್ಲಿ ಈ ಅಪ್ಪಿಕೋ ಅಮ್ಮನಿಗೆ 22.5 ಎಕರೆಗಳನ್ನು ಪುಕ್ಕಟೆಯಾಗಿ ನೀಡಿತ್ತು. ಅದಕ್ಕೆ ಪ್ರತಿಯಾಗಿ ಈ ಅಪ್ಪಿಕೋ ಅಮ್ಮ ಕರ್ನಾಟಕದ ಒಂದಿಷ್ಟು ಬಡ ವಿಧವೆಯರಿಗೆ ಮಾಸಾಶನ ಕೊಡುವುದಾಗಿ ಹೇಳಿದ್ದಳು. ಆಕೆ ಎಷ್ಟು ಜನ ವಿಧವೆಯರಿಗೆ ಮಾಸಾಶನ ಕೊಡುತ್ತಿದ್ದಾಳೆ ಎಂಬುದು ಯಾರಿಗೂ ಗೊತ್ತಿಲ್ಲ. ಆದರೆ ಆಕೆಯ ಅಮೃತ ವಿಶ್ವವಿದ್ಯಾಲಯ ಇಲ್ಲಿ ತಲೆ ಎತ್ತಿರುವುದು ಮಾತ್ರ ದಿಟ!

ಹಾಗೆಯೇ 2011ರಲ್ಲಿ ಯಡ್ಡಿಯ ಬಿಜೆಪಿ ಸರ್ಕಾರ ಬೆಂಗಳೂರಿನ ಕೆಂಗೇರಿ ಉಪನಗರ ಹತ್ತಿರವಿರುವ ಕಣ್ಮಿಣಿಕೆ ಗ್ರಾಮದ ಬರೋಬ್ಬರಿ 25 ಎಕರೆ ಗೋಮಾಳ ಜಮೀನನ್ನು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಪ್ರಾರಂಭಿಸಲು ಅಪ್ಪಿಕೋ ಅಮ್ಮನಿಗೆ ನೀಡಿತ್ತು. ಅದಕ್ಕೆ ಕಾರಣ ಆಕೆ 2011ರ ನೆರೆಯಲ್ಲಿ ಉತ್ತರ ಕರ್ನಾಟಕದ ಲಕ್ಷಾಂತರ ಜನರು ಸೂರು ಕಳೆದುಕೊಂಡಾಗ ರಾಯಚೂರಿನ ದೊಂಗ್ರಾಮಾಪುರ ಎಂಬಲ್ಲಿ ನೂರು ಮನೆಗಳನ್ನು ಕಟ್ಟಿಕೊಡುವ ಮೂಲಕ 'ಅಪಾರ ಜನಸೇವೆ'ಯನ್ನು ಮಾಡಿದ್ದು. ರಾಯಚೂರಿನ ಹಳ್ಳಿಯಲ್ಲಿ ಗಾಳಿ ಬಂದರೆ ಸೂರು ಹಾರಿಹೋಗುವ, ಮಳೆ ಬಂದರೆ ಕುಸಿಯುವ ನೂರು ಮನೆಗಳನ್ನು ಕಟ್ಟಿಸಿದ್ದಕ್ಕೆ ಪ್ರತಿಫಲವಾಗಿ ರಾಜಧಾನಿಯ ಹತ್ತಿರ 25 ಎಕರೆಗಳನ್ನು ಪಡೆಯುತ್ತಾಳೆಂದರೆ ಈ ಅಪ್ಪಿಕೋ ಅಮ್ಮನ ಆರ್ಥಿಕ ಮತ್ತು ರಾಜಕೀಯ ತಾಕತ್ತು ಎಂತಹದ್ದು ಎಂದು ಲೆಕ್ಕ ಹಾಕಬಹುದು.

ಇನ್ನು ವಿಚಾರವಾದಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ಹೊಂದಿರುವ, ಹಲವು ದಶಕಗಳ ಕಾಲ ಕಮ್ಯೂನಿಸ್ಟ್ ಪಕ್ಷಗಳನ್ನು ಅಧಿಕಾರಕ್ಕೆ ಗೆಲ್ಲಿಸಿದ್ದ ಕೇರಳದಲ್ಲೂ ಈಕೆಯ ಪ್ರಭಾವ ಈಗ ದೈತ್ಯಾಕಾರವಾಗಿ ಬೆಳೆದಿದೆ. ಅದೂ ಯಾವ ಮಟ್ಟಕ್ಕೆ ಎಂದರೆ ಸ್ವತಃ ನಾಸ್ತಿಕರಾದ ಕಮ್ಯೂನಿಸ್ಟ್ ಪಕ್ಷದ ನಾಯಕರೂ ಈಕೆಯನ್ನು ಬೆಂಬಲಿಸುವಷ್ಟು. ಅದಕ್ಕೊಂದು ಉದಾಹರಣೆಯನ್ನು ಕೊಡಬಹುದು. ಕೇರಳದಲ್ಲಿ ಸಿಪಿಎಂ ಪಕ್ಷದ ಮಾಲೀಕತ್ವದಲ್ಲಿ 'ದೇಶಾಭಿಮಾನಿ' ಎಂಬ ದೈನಿಕ ಪತ್ರಿಕೆ ಪ್ರಕಟವಾಗುತ್ತದೆ. ಆ ಪತ್ರಿಕೆಯು 2002ರಲ್ಲಿ ಈಕೆಯ ಆಶ್ರಮದ ಸುತ್ತ ಹಲವು ನಿಗೂಢ ಸಾವುಗಳು ಸಂಭವಿಸಿವೆ ಎಂದೂ, ಅವುಗಳನ್ನು ಕುರಿತು ಸೂಕ್ತ ತನಿಖೆ ಆಗಬೇಕೆಂದೂ ಒಂದು ವರದಿಯನ್ನು ಪ್ರಕಟಿಸಿತು. ಆಗ ಅಪ್ಪಿಕೋ ಅಮ್ಮ ಕೇರಳದಲ್ಲಿ ಅಧಿಕಾರದಲ್ಲಿದ್ದ ಕಮ್ಯೂನಿಸ್ಟ್ ಸರ್ಕಾರದ ಮೇಲೆ ಅದೆಂತಹ ಒತ್ತಡ ತಂದಳೆಂಬುದು ಇವತ್ತಿಗೂ ನಿಗೂಢವಾಗಿದೆ. ಆದರೆ ಆ ವರದಿ ಪ್ರಕಟಗೊಂಡ ಕೆಲವೇ ದಿನಗಳ ನಂತರ 'ದೇಶಾಭಿಮಾನಿ' ಒಂದು ಸ್ಪಷ್ಟೀಕರಣವನ್ನು ಪ್ರಕಟಿಸಿತು. ಆ ಸ್ಪಷ್ಟೀಕರಣದಲ್ಲಿ 'ನಾವು ಪ್ರಕಟಿಸಿದ ವರದಿ ಸತ್ಯವಾಗಿರಲಿಲ್ಲ. ಮಾತಾ ಅಮೃತಾನಂದಮಯಿ ಅವರ ಆಶ್ರಮದಲ್ಲಿ ಯಾವ ನಿಗೂಢ ಸಾವುಗಳೂ ಆಗಿಲ್ಲ' ಎಂದಿತ್ತು.

ಅಷ್ಟೇ ಅಲ್ಲ, ಕೇರಳ ರಾಜ್ಯದ ವಿಚಾರವಾದಿಗಳ ಸಂಘಟನೆಯ ಮುಖ್ಯಸ್ಥ ಶ್ರೀನಿ ಪಟ್ಟಾಥಂ ಎಂಬುವವರು 1985ರಲ್ಲೇ ಅಪ್ಪಿಕೋ ಅಮ್ಮನಿಗೆ ಯಾವ ದೈವೀಶಕ್ತಿಯೂ ಇಲ್ಲ, ಆಕೆ ಮಾಡುವ ಪವಾಡಗಳೆಲ್ಲ ನಕಲಿ ಎಂದು ವಿವರಿಸಿ ಬರೆದಿದ್ದ ಪುಸ್ತಕದ ವಿರುದ್ಧವೂ ಕಮ್ಯೂನಿಸ್ಟರ ಸರ್ಕಾರ ಕ್ರಮ ಕೈಗೊಂಡಿತ್ತು!

ಈಗ ಗೈಲ್ ಎಂಬ ಅಪ್ಪಿಕೋ ಅಮ್ಮನ ಮಾಜಿ ಶಿಷ್ಯೆ ಬರೆದಿರುವ ಪುಸ್ತಕದ ಸುತ್ತಲೂ ಇಂತಹದ್ದೇ ಕ್ರಮಗಳು ಜರುಗುತ್ತಿವೆ. ಗೈಲ್ ಇನ್ನೂ 19-20 ವರ್ಷ ವಯಸ್ಸಾಗಿದ್ದಾಗಲೇ 80ರ ದಶಕದ ಆರಂಭದಲ್ಲಿ ಈ ಅಮ್ಮನ ಪ್ರಭಾವಕ್ಕೆ ಬಿದ್ದು ಆಕೆಯ ಆಶ್ರಮವನ್ನು ಸೇರಿಕೊಂಡಿದ್ದಳು. ಮಾತ್ರವಲ್ಲ, 20 ವರ್ಷಗಳ ಕಾಲ ಅಪ್ಪಿಕೋ ಅಮ್ಮನ ಆಪ್ತ ಸಹಾಯಕಿಯಾಗೇ ಸೇವೆ ಸಲ್ಲಿಸಿದ್ದಳು. ಇದರಿಂದಾಗಿ ಅಮ್ಮನ ಸುತ್ತ ಏನೇನು ನಡೆಯುತ್ತಿದೆ ಎಂದು ಗೈಲ್‌ಗೆ ಗೊತ್ತಾಯಿತಲ್ಲದೆ ಅಮ್ಮನಿಂದಾಗಿ ತಾನು ನಿರೀಕ್ಷಿಸುತ್ತಿರುವ 'ಮೋಕ್ಷ' ಸಿಗುವುದಿಲ್ಲ ಎಂದೂ ಅರ್ಥವಾಯ್ತು. ಹಲವು ವರ್ಷಗಳ ಹಿಂದೆ ಅಮ್ಮನ ಆಶ್ರಮದಿಂದ ತಪ್ಪಿಸಿಕೊಂಡು ತನ್ನ ದೇಶಕ್ಕೆ ಹೋದ ಗೈಲ್ ಈಗ ಅಮ್ಮನ ಸುತ್ತ ತಾನು ಕಣ್ಣಾರೆ ಕಂಡಿದ್ದನ್ನೆಲ್ಲ ತನ್ನ ಪುಸ್ತಕದಲ್ಲಿ ವಿವರಿಸಿದ್ದಾಳೆ.

ಅಮ್ಮನ ಜೊತೆಗಿರುವ ಸರ್ವಸಂಗಪರಿತ್ಯಾಗಿಗಳಾದ ಸನ್ಯಾಸಿಗಳು ವಿದೇಶಗಳಿಂದ ಬರುವಾಗ ಚಿನ್ನಾಭರಣಗಳನ್ನು ಬಚ್ಚಿಟ್ಟುಕೊಂಡು ಕಸ್ಟಮ್ಸ್ ಅಧಿಕಾರಿಗಳನ್ನು ಯಾಮಾರಿಸುತ್ತಿದ್ದಾರೆಂದೂ, ಸ್ವತಃ ತಾನೇ ಚೀಲಗಟ್ಟಳೆ ಚಿನ್ನ ಮತ್ತು ಹಣವನ್ನು ಅಮ್ಮನ ಕುಟುಂಬಕ್ಕೆ ಕದ್ದುಮುಚ್ಚಿ ಸಾಗಿಸಿದ್ದೆ ಎಂದೂ, ಚಿಕ್ಕಪುಟ್ಟದ್ದಕ್ಕೆಲ್ಲ ರೋಷಗೊಳ್ಳುತ್ತಿದ್ದ ಅಮ್ಮ ತನ್ನ ಮೇಲೆ ಬಿದ್ದು ದೈಹಿಕವಾಗಿ ಸದೆಬಡಿಯುತ್ತಿದ್ದಳೆಂದೂ, ಅಮ್ಮನಿಗೆ ಆಪ್ತನಾಗಿರುವ ಸನ್ಯಾಸಿಯೊಬ್ಬ ತನ್ನ ಮೇಲೆ ವರ್ಷಗಟ್ಟಳೆ ಅತ್ಯಾಚಾರವೆಸಗಿದ ಎಂದೂ, ಸ್ವತಃ ಅಮ್ಮ ತಾನು ಸನ್ಯಾಸಿನಿ ಎಂದು ಘೋಷಿಸಿಕೊಂಡಿದ್ದರೂ ಹಲವರ ಜೊತೆ ಸಂಬಂಧ ಇಟ್ಟುಕೊಂಡಿದ್ದಾಳೆಂದೂ ಆರೋಪಿಸಿದ್ದಾಳೆ.

ಇಂತಹ ಆರೋಪಗಳು ಸ್ವಘೋಷಿತ ದೈವ ಮಾನವರ ವಿರುದ್ಧ ಕೇಳಿಬಂದಿರುವುದು ಇದೇ ಮೊದಲಲ್ಲ. ಇಂತಹ ಆರೋಪಗಳು ಸಾಯಿಬಾಬಾನ ಬಗ್ಗೆಯೂ ಕೇಳಿಬಂದಿದ್ದವು. ಈಗ ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದಾಳಿ ಮಾಡಿದ ಆರೋಪದ ಮೇಲೆ ಗುಜರಾತಿನಲ್ಲಿ ಪ್ರಭಾವಿಯಾಗಿದ್ದ ಅಸಾರಾಮ್ ಬಾಪು ಎಂಬ ಮತ್ತೋರ್ವ ಕೋಟ್ಯಾಧಿಪತಿ ದೈವಮಾನವ ಜೈಲಿನಲ್ಲಿದ್ದಾನೆ. ಈಗ ಅಪ್ಪಿಕೋ ಅಮ್ಮನ ಸರದಿಯಷ್ಟೇ.

ವಿಚಿತ್ರವೆಂದರೆ ಗೈಲ್ ಬರೆದಿರುವ ಈ ಪುಸ್ತಕದ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳು ಮತ್ತು ಕೇರಳದ ಮಾಧ್ಯಮಗಳು ತುಟಿಪಿಟಿಕ್ಕೆನ್ನದೆ ಸುಮ್ಮನಿರುವುದು. ಈಗ ಆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದು ಅಮ್ಮನ ರಕ್ಷಣೆಗೆ ಟೊಂಕಕಟ್ಟಿ ನಿಂತಿದೆ. ಪರಿಣಾಮವಾಗಿ ಈ ಪುಸ್ತಕದ ಬಗ್ಗೆ ಫೇಸ್‌ಬುಕ್‌ನಲ್ಲಿ ಸುದ್ದಿ ಹಬ್ಬಿಸಿದ್ದ ಹಲವರ ವಿರುದ್ಧ ಕಾನೂನು ಕ್ರಮ ತೆಗೆದುಕೊಂಡಿದೆ. ಇನ್ನು ಕೇರಳದ ಕಮ್ಯೂನಿಸ್ಟರೂ ಅಮ್ಮನ ಪರ ವಹಿಸಿದ್ದಾರೆ. ಹಾಗೆಯೇ ಕೇರಳದಲ್ಲಿ ಸಾಕ್ಷರತೆ ಹೆಚ್ಚಿನ ಪ್ರಮಾಣದಲ್ಲಿದ್ದು ಒಟ್ಟು ಜನಸಂಖ್ಯೆಯ ಶೇ. 80 ಜನ ಪತ್ರಿಕೆಗಳನ್ನು ಖರೀದಿಸುತ್ತಾರೆ. ಹಾಗೆಯೇ ಆ ರಾಜ್ಯದಲ್ಲೀಗ ಹತ್ತಕ್ಕಿಂತಲೂ ಹೆಚ್ಚಿನ ಟಿವಿ ಚಾನೆಲ್‌ಗಳಿವೆ. ಆದರೆ ಗೈಲ್ ಪುಸ್ತಕದ ಬಗ್ಗೆ ಒಂದು ಪತ್ರಿಕೆಯನ್ನು ಹೊರತುಪಡಿಸಿ ಮಿಕ್ಕೆಲ್ಲ ಪತ್ರಿಕೆಗಳು ಒಂದು ಪದವನ್ನೂ ಪ್ರಕಟಿಸಿಲ್ಲ; ಯಾವ ಚಾನೆಲ್ಲೂ ಇದರ ಬಗ್ಗೆ ಸುದ್ದಿಯನ್ನಾಗಲಿ, ಚರ್ಚೆಯನ್ನಾಗಲಿ ನಡೆಸಿಲ್ಲ. ಇದಕ್ಕೆ ಕಾರಣ ಅಮ್ಮನ ಸಹಸ್ರಾರು ಭಕ್ತರ ಬೆಂಬಲವನ್ನು ಕಳೆದುಕೊಳ್ಳುತ್ತೇವೆಂಬ ಆತಂಕ ರಾಜಕೀಯ ಪಕ್ಷಗಳಿಗೆ ಮತ್ತು ಮಾಧ್ಯಮಗಳಿಗೆ!

ಅಪ್ಪಿಕೋ ಅಮ್ಮನಂತಹ ಕಪಟ 'ದೈವ ಮಾನವರು' ಈ ದೇಶಕ್ಕೆ ಒಂದು ಶಾಪವಲ್ಲದೆ ಇನ್ನೇನು?

ಲಂಕೇಶ್ ಜನ್ಮೋತ್ಸವ ಮತ್ತು ವಿಶೇಷ ಸಂಚಿಕೆ

ಮುಂದಿನ ವಾರ ಪಿ. ಲಂಕೇಶರ 79ನೇ ಜನ್ಮೋತ್ಸವ ಮತ್ತು ಪತ್ರಿಕೆಯ ವಾರ್ಷಿಕೋತ್ಸವದ ಅಂಗವಾಗಿ ರಾಯಚೂರಿನಲ್ಲಿ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದ್ದೇವೆ. ಕಾರ್ಯಕ್ರಮದ ವಿವರಗಳನ್ನು ಈ ಸಂಚಿಕೆಯ 20ನೇ ಪುಟದಲ್ಲಿ ಪ್ರಕಟಿಸಿದ್ದೇವೆ.

ಇದರ ಜೊತೆಗೆ ಮುಂದಿನ ವಾರ 'ಹೈದರಾಬಾದ್ ಕರ್ನಾಟಕ' ಕುರಿತಂತೆ ವಿಶೇಷ ಸಂಚಿಕೆಯನ್ನು ಪ್ರಕಟಿಸುತ್ತಿದ್ದೇವೆ.

ಇವೆಲ್ಲಕ್ಕೂ ನಮ್ಮ ಓದುಗರ, ಮಿತ್ರರ, ಬಳಗದವರ ಸಹಕಾರ ಇರಲೆಂದು ಆಶಿಸುತ್ತೇವೆ.

ಐಕ್ಯತೆ: ಮಹಿಳಾ ಮಾರ್ಗದ ತುರ್ತು

ಮಹಿಳಾ ವಿಶೇಷಾಂಕ



ಪ್ರೇಮ ಈ ಜಗತ್ತನ್ನು ಸೃಷ್ಟಿಸಿದೆ. ಆದರೆ ಆಳುತ್ತಿರು ವುದು ಹಿಂಸೆಯೆ? ಹೀಗೊಂದು ಅನುಮಾನ ಸೂಕ್ಷ್ಮ ಮನುಸುಗಳನ್ನು ಕಾಡುವಂತೆ ವರ್ತಮಾನದ ಸನ್ನಿವೇಶವಿದೆ. ಹಿಂಸೆ ಎಷ್ಟು ಹಾಸುಹೊಕ್ಕಾಗಿದೆ ಎಂದರೆ ಹಿಂಸೆ ಹಿಂಸೆಯೆಂದೇ ಅನ್ನಿಸದಷ್ಟು ಮಾನವ ಮನಸು ಜಡ್ಡುಗಟ್ಟಿದೆ. ಗೋಚರ-ಅಗೋಚರ ಸ್ವರೂಪಗಳ ಹಿಂಸೆ ನಮ್ಮ ಮಿದುಳನ್ನಾಳುತ್ತಿರುವಾಗ ಜಾತಿ/ಧರ್ಮ/ರಾಷ್ಟ್ರ/ಭಾಷೆಗಳ ಮೇಲಿನ ಸಿಟ್ಟನ್ನು ಪುರುಷ ಜಗತ್ತು ಹೆಣ್ಣಿನ ಮೇಲೆ ತೀರಿಸಿಕೊಳ್ಳುವುದು ದಿನಕಳೆದಂತೆ ಹೆಚ್ಚಾಗುತ್ತಿದೆ. ವೈಯಕ್ತಿಕ ದೌರ್ಬಲ್ಯವಿರಲಿ, ಬದಲಾಗುತ್ತಿರುವ ಸಮಾಜದ ಆದ್ಯತೆಗಳಿರಲಿ, ಮಾರುಕಟ್ಟೆಯ ಬೆಳವಣಿಗೆಯಿರಲಿ, ವಿಜ್ಞಾನ- ತಂತ್ರಜ್ಞಾನದ ಓಟವಿರಲಿ - ಎಲ್ಲವೂ ಮಹಿಳಾ ಘನತೆಯನ್ನು ಲೆಕ್ಕಕ್ಕೇ ತೆಗೆದುಕೊಳ್ಳದೇ ಸ್ವಾತಂತ್ರ್ಯಹರಣದ ಉಪಕರಣಗಳಾಗಿರುವ ವಿಪರ್ಯಾಸ ಆಧುನಿಕ ಸಮಾಜದ್ದಾಗಿದೆ.

ಮಹಿಳೆಯ ಮೇಲೆ ದೌರ್ಜನ್ಯ ಎಸಗುವುದರಲ್ಲಿ ಕೇವಲ ವ್ಯಕ್ತಿಗಳಷ್ಟೇ ಅಲ್ಲ, ವ್ಯವಸ್ಥೆಯೂ ಶಾಮೀಲಾಗಿದೆ. ಲಿಂಗತಾರತಮ್ಯದ ಆತ್ಯಂತಿಕ ದುಷ್ಟತನವಾದ ಹೆಣ್ಣು ಭ್ರೂಣಹತ್ಯೆ ಮತ್ತು ಅದು ಸೃಷ್ಟಿಸಿರುವ ಲಿಂಗಾನುಪಾತ ಇಳಿಕೆ ಹಲವು ಸಮಸ್ಯೆಗಳನ್ನು ಸೃಷ್ಟಿಸಿದೆ. ಏರುತ್ತಿರುವ ಲೈಂಗಿಕ ದೌರ್ಜನ್ಯದ ಪ್ರಮಾಣ ಮತ್ತದರ ಸ್ವರೂಪ ದಿಗಿಲುಗೊಳಿಸುವಂತಿದೆ. ಅಧಿಕಾರ ವಂಚನೆ; ಕುಲಗೌರವ- ಪರಂಪರೆ- ಸಂಸ್ಕೃತಿಯ ಹೆಸರಿನ ದೌರ್ಜನ್ಯಗಳು; ಕುಟುಂಬಯೋಜನೆ ಹಕ್ಕುಗಳ ನಿರಾಕರಣೆ; ಬಲವಂತದ ವೇಶ್ಯಾವಾಟಿಕೆಗೆ ದೂಡುವುದು; ಮಾನವ ಕಳ್ಳಸಾಗಾಣಿಕೆ ಮತ್ತು ಲೈಂಗಿಕ ಗುಲಾಮರಂತೆ ನಡೆಸಿಕೊಳ್ಳುವುದು; ಮಾಟಗಾತಿ, ವ್ಯಭಿಚಾರಿಯ ಪಟ್ಟ ಕಟ್ಟಿ ಕೊಲ್ಲುವುದು - ಇವೆಲ್ಲ ಸಮಾಜದ ಲಿಂಗ ನಿರ್ಮಿತಿಯಿಂದಲೇ ಹುಟ್ಟಿಕೊಂಡ ದೌರ್ಜನ್ಯಗಳು. ಇದು ಇಲ್ಲಿಗೇ ನಿಲ್ಲುವುದಿಲ್ಲ; ಚಕಮಕಿ ನಡೆಯುವ ಗಡಿಭಾಗಗಳು, ನಾಗರಿಕ ಅಶಾಂತಿಯಿರುವ ಪ್ರದೇಶಗಳಲ್ಲಿ ರಕ್ಷಣಾ ಪಡೆಗಳಿಗೆ ನೀಡಲಾಗಿರುವ ವಿಶೇಷ ಅಧಿಕಾರವೂ ಸೇರಿದಂತೆ ನಾಗರಿಕರನ್ನು ಕಾಯುವ ವ್ಯವಸ್ಥೆಯೂ ಮಹಿಳಾ ದೌರ್ಜನ್ಯದ ಪಾಲುದಾರನಾಗಿದೆ.

ಹೀಗಿರುತ್ತ ಮತ್ತೊಂದು ಮಹಿಳಾ ದಿನಾಚರಣೆ ಬರುತ್ತಿದೆ. ಯಾಕಾದರೂ ಈ ಮಾನವಕುಲ ಇಂಥ ಲಿಂಗತಾರತಮ್ಯ ರೂಢಿಸಿಕೊಂಡಿತು? ಕೇವಲ ಮಾನವರಂತೆ ಗಂಡುಹೆಣ್ಣು ಜೊತೆ ಸಾಗಬೇಕಾದರೆ ಏನು ಮಾಡಬೇಕು? ಎಂಬ ಪ್ರಶ್ನೆಗಳು ಸುಳಿದುಹೋಗುತ್ತವೆ.

ಮಹಿಳಾ ದೌರ್ಜನ್ಯ: ಅಂತರರಾಷ್ಟ್ರೀಯ ಪಿಡುಗು

ವಿಶ್ವಾದ್ಯಂತ ಕ್ಯಾನ್ಸರಿಗಿಂತ ಹೆಚ್ಚು ಮಹಿಳೆಯರ ಮರಣ ದೌರ್ಜನ್ಯದಿಂದ ಸಂಭವಿಸುತ್ತಿದೆ. ಅದಕ್ಕೆ ಚಾರಿತ್ರಿಕ ಕಾರಣ ಎಂದಿನಿಂದಲೂ ಇರುವ ಲಿಂಗತಾರತಮ್ಯವೇ. ಪುರುಷಪ್ರಧಾನ ಸಮಾಜ ಸೃಷ್ಟಿಸಿದ ಅಸಮಾನ ಬಯಲಿನಲ್ಲಿ ನಿರಂತರ ಅಧಿಕಾರ ಹಂಚಿಕೆಯ ಮೋಸಕ್ಕೊಳಗಾದವಳು ಹೆಣ್ಣು. ದೌರ್ಜನ್ಯದ ಉದ್ದೇಶ ಹೆಣ್ಣನ್ನು ಸದಾ ಶರಣಾಗತ ಮನಸ್ಥಿತಿಯಲ್ಲಿಡುವುದಾಗಿದೆ. ಅವಳನ್ನು ಆಸ್ತಿಯೆಂದು ಪರಿಗಣಿಸಿ ಹಾಗೂ ಒಂದು ನಿರ್ದಿಷ್ಟ ಪಾತ್ರವನ್ನು ಆರೋಪಿಸಿ ವಿಧಿಸಲಾದ ನೀತಿನಿಯಮಾವಳಿಗಳೂ ದೌರ್ಜನ್ಯದ ಕಾರಣವಾಗಿವೆ.

ಪ್ರಪಂಚದ ಯಾವುದೇ ಭಾಗ, ಯಾವುದೇ ದೇಶ, ಯಾವುದೇ ಸಂಸ್ಕೃತಿಯೂ ಹೆಣ್ಣನ್ನು ನ್ಯಾಯಯುತವಾಗಿ ನಡೆಸಿಕೊಂಡಿಲ್ಲ. ಸನಾತನ ಭಾರತದ ಮಾತು ಬಿಡಿ, 19ನೇ ಶತಮಾನದ ಕೊನೆ ಭಾಗದ ತನಕ ಅಮೆರಿಕ, ಇಂಗ್ಲೆಂಡ್ ಸೇರಿದಂತೆ ಬಹುತೇಕ ದೇಶಗಳು ಹೆಂಗಸು ಕರ್ತವ್ಯದ ಗೆರೆ ದಾಟದಂತೆ ಅವಳಿಗೆ 'ಸ್ವಲ್ಪ' ಶಿಕ್ಷೆ ಕೊಡುವ ಹಕ್ಕು ಗಂಡಸಿಗಿದೆ ಎಂಬ ಕಾನೂನನ್ನು ಎತ್ತಿ ಹಿಡಿದಿದ್ದವು. ರಾಜಕೀಯ ಅಧಿಕಾರ ಮತ್ತು ಹೆಣ್ಣು ವಿರುದ್ಧ ಪದಗಳಾಗಿದ್ದವು.

ಇವಕ್ಕೆಲ್ಲ ಮಹಿಳೆಯ ಪ್ರತಿರೋಧ ಇರಲಿಲ್ಲವೇ? ಇದ್ದರೆ ಯಾವ ಸ್ವರೂಪದ್ದಾಗಿತ್ತು?

ವೈಯಕ್ತಿಕ ನೆಲೆಯ ಹಾಗೂ ಧಾರ್ಮಿಕ ನೆಲೆಯ ಸುಧಾರಣಾ ಪ್ರಯತ್ನಗಳು ಅಲ್ಲಲ್ಲಿ ಸಂಭವಿಸಿದರೂ ಸಂಘಟಿತ ಹೋರಾಟ ಕಂಡುಕೊಳ್ಳಲು ಮಹಿಳಾ ಸಮೂಹ 19ನೇ ಶತಮಾನದ ತನಕ ಕಾಯಬೇಕಾಯಿತು. 19ನೇ ಶತಮಾನದ ಉತ್ತರಾರ್ಧ ಹಾಗೂ 20ನೇ ಶತಮಾನದ ಮೊದಲ ಭಾಗದಲ್ಲಿ ಮಹಿಳೆಯರ ಸಂಘಟಿತ ದನಿ ಕೇಳಿಬಂತು. ಆದರೂ ಮೊದಲ ಮಹಿಳಾ ಚಳವಳಿಯು ಸಮಾನ ಅವಕಾಶ, ಸಮಾನ ವೇತನ, ಸಮಾನ ನಾಗರಿಕ ಹಕ್ಕುಗಳಿಗಾಗಿಯೇ ಹೋರಾಟ ನಡೆಸಿತು. ಮೊದಲಿಗೆ ಮಹಿಳೆಯರ ಮೇಲಿನ ಹಿಂಸೆಯನ್ನು ಆರೋಗ್ಯ ಸಮಸ್ಯೆ ಎಂಬಂತೆ ನೋಡಲಾಗುತ್ತಿತ್ತು. ಎರಡು ಮಹಾಯುದ್ಧಗಳ ನಂತರ 1960-70ರ ದಶಕದ ಮಹಿಳಾ ಬರಹ-ಚಳವಳಿಗಳು ಕೊಂಚ ತೀವ್ರಗಾಮಿ ಸ್ವರೂಪ ಪಡೆದುಕೊಂಡವು. ಅವು ಆ ಕಾಲದಲ್ಲಿ ನಡೆದ ಉಳಿದ ಪ್ರಗತಿಪರ ಚಳವಳಿಗಳ ಪ್ರಭಾವ ಮತ್ತು ಒತ್ತಾಸೆ ಪಡೆದಿದ್ದವು. ಮನೆಯ ಒಳಗೆ ಮತ್ತು ಹೊರಗೆ ಸಮಾನ ಗೌರವ; ಪ್ರಜನನ ಮತ್ತಿತರೆ ಹಕ್ಕುಗಳಿಗಾಗಿ ಪ್ರತಿಪಾದಿಸಿ ಹೋರಾಡುತ್ತ ವಿಮೋಚನೆಯ ಮಾತುಗಳನ್ನಾಡಿದವು. 1990ರಿಂದೀಚೆಗೆ ಮಹಿಳಾ ದೌರ್ಜನ್ಯವನ್ನು ಮಾನವ ಹಕ್ಕು ಉಲ್ಲಂಘನೆ ಎಂದು ಗುರುತಿಸಲಾಯಿತು. ತಾಂತ್ರಿಕ ಪರಿಣತಿಯ ಹಾಗೂ ಜಾಗತೀಕರಣಗೊಂಡ ವಿಶ್ವದಲ್ಲಿ ಮೂರನೇ ಅಲೆಯ ಮಹಿಳಾ ಚಳವಳಿ ಲಿಂಗ ಅಸ್ಮಿತೆಯ ರಾಜಕಾರಣ, ದೇಹ ರಾಜಕಾರಣ ಹಾಗೂ ದೌರ್ಜನ್ಯವನ್ನು ಗುರುತಿಸಿತು. ಜೊತೆಗೆ ವರ್ಗ, ಲಿಂಗ, ಜನಾಂಗ ಹಾಗೂ ವಯೋಮಾನ ಆಧಾರಿತ ದೌರ್ಜನ್ಯಗಳನ್ನು, ಹೆಣ್ಣಿನ ವಿರುದ್ಧ ಚಾಲ್ತಿಯಲ್ಲಿರುವ ಹೊಸಬಗೆಯ ಯುದ್ಧನೀತಿಗಳನ್ನು ಗುರುತಿಸಿ ಗಡಿಗೆರೆಗಳಿಂದ ಮಹಿಳೆಯನ್ನು ಕಟ್ಟಿಹಾಕದಂತೆ ಮಹಿಳಾ ಸಮಸ್ಯೆಗಳನ್ನು ಅಂತರರಾಷ್ಟ್ರೀಕರಣಗೊಳಿಸುತ್ತ ಬಂತು. ಸೋದರಿತ್ವದ

> ಜಾಗೃತಗೊಂಡ ಮಹಿಳೆ ತನ್ನನ್ನು ತಾನು ಸಮಸ್ಯೆಯಾಗಿ ಗ್ರಹಿಸಿಕೊಳ್ಳದೇ ಇಡೀ ವಿಶ್ವದ ವಿದ್ಯಮಾನಗಳ ಭಾಗವಾಗಿ ತನ್ನತನವನ್ನು ಗುರುತಿಸಿಕೊಳ್ಳಬೇಕು. ಪ್ರಭುತ್ವದ ಮೇಲೆ ಒತ್ತಡ ಹಾಕುವ ನೈತಿಕಶಕ್ತಿಯಾಗಬೇಕು. ಧಾರ್ಮಿಕ ಮೂಲಭೂತವಾದ, ಮಾರುಕಟ್ಟೆ ಮತ್ತು ಕೋಮುವಾದಿ ರಾಜಕಾರಣದ ದಾಳವಾಗದಂತೆ ಎಚ್ಚರ ಕಾಯ್ದುಕೊಳ್ಳಬೇಕು. ವಿಫಲಗೊಂಡ ನ್ಯಾಯವ್ಯವಸ್ಥೆಯನ್ನು ಹಾಗೂ ಮಲಿನಗೊಂಡ ರಾಜಕಾರಣವನ್ನು ಸರಿಪಡಿಸಬೇಕಲ್ಲದೆ, ನಿಷ್ಪಕ್ಷಪಾತ ನ್ಯಾಯ ಹಾಗೂ ಶಿಕ್ಷಾ ವ್ಯವಸ್ಥೆಗೆ ನಾಂದಿ ಹಾಡಬೇಕು. ಇವೆಲ್ಲವೂ ಆದ್ಯತೆಯ ಮೇಲೆ ಸಾಧ್ಯವಾಗುವುದು ಮಹಿಳಾ ಸಂಘಟನೆಗಳ ಐಕ್ಯತೆಯಿಂದ ಮಾತ್ರ.

ಮಾತನಾಡತೊಡಗಿತು. ಜೊತೆಜೊತೆಗೆ ಹೆಚ್ಚುತ್ತಿರುವ ಅತ್ಯಾಚಾರ ಪ್ರಕರಣಗಳು, ಪ್ರಭುತ್ವ ಮತ್ತು ಸಾಮಾಜಿಕ ಹಿಂಸೆಯ ಬದಲಾದ ಸ್ವರೂಪಗಳನ್ನೂ ಅದು ಪ್ರಶ್ನಿಸುತ್ತಿದೆ. ನಂಬಿಕೆ-ಆಚರಣೆಗಳನ್ನು, ಮೂಲ ಕುಟುಂಬ ವ್ಯವಸ್ಥೆಯಲ್ಲೇ ಅಡಗಿರುವ ಲಿಂಗತಾರತಮ್ಯವನ್ನು ಗುರುತಿಸಿ ಪ್ರಶ್ನಿಸುತ್ತದೆ.

ರಾಜಕೀಯ ಪಕ್ಷಗಳು ಹಾಗೂ ಮುಖ್ಯವಾಹಿನಿ ರಾಜಕಾರಣವು ಮಹಿಳೆಯ ಸ್ಥಾನಮಾನ ಹೆಚ್ಚಿಸುವುದನ್ನು ತಮ್ಮ ಆದ್ಯತೆಯನ್ನಾಗಿ ಎಂದೂ ಮಾಡಿಕೊಳ್ಳಲಿಲ್ಲ. ರಾಜಕಾರಣದ ಬಯಲು ಪುರುಷ ಪ್ರಧಾನವಾಗಿರುವ ಕಾರಣದಿಂದ ಸರ್ಕಾರೇತರ ಸಂಘ-ಸಂಸ್ಥೆಗಳಾಗಿ ಮಹಿಳಾ ಸಂಘಟನೆಗಳು ಕೆಲಸ ಮಾಡುವ ಅನಿವಾರ್ಯತೆ ಸೃಷ್ಟಿಯಾಯಿತು. ಹೀಗೆ ಸ್ವಾಯತ್ತ ಸಂಘಟನೆಗಳು ಪ್ರತಿ ಅಲೆಯ ಮಹಿಳಾ ಚಳವಳಿಯ ಹೊತ್ತಿನಲ್ಲೂ ಹುಟ್ಟಿಕೊಂಡವು. ತಮ್ಮ ಆದ್ಯತೆಗಳನ್ನು ಗುರುತಿಸಿಕೊಂಡು ಕೆಲಸ ಮಾಡತೊಡಗಿದವು. ಸ್ಥಳೀಯವಾಗಿ ಮಹಿಳಾ ಜಾಗೃತಿ/ಸಂಘಟನೆಗೆ ಯತ್ನಿಸುವುದು ಹಾಗೂ ತನ್ಮೂಲಕ ಸಮಾಜ ಮಹಿಳಾ ಸ್ನೇಹಿಯಾಗುವಂತಹ ಸಾಂಸ್ಥಿಕ ಬದಲಾವಣೆಗೆ ಒತ್ತಡ ತರುವುದು ಅಂಥ ಸಂಘಟನೆಗಳ ಉದ್ದೇಶ. ಸ್ಪಷ್ಟವಾದ ಆದರೆ ನೇರ ಮತ್ತು ಗಟ್ಟಿಯಾದ ಧ್ವನಿಯಲ್ಲಿ ಅವು ಹಕ್ಕೊತ್ತಾಯ ತರತೊಡಗಿದವು. ಗಡಿಯ ಹಂಗು ತೊರೆದ ಸಂಘಟನೆಗಳಿರುವಂತೆಯೇ ಒಂದೊಂದು ಪ್ರದೇಶಕ್ಕೆ, ಒಂದೊಂದು ಗುರಿಗೆ ತಮ್ಮನ್ನು ಸೀಮಿತಗೊಳಿಸಿಕೊಂಡ ಅಸಂಖ್ಯ ಸಂಘಟನೆಗಳೂ ಹುಟ್ಟಿದವು.

ಎಲ್ಲರ ಉದ್ದೇಶ ಒಂದೇ: ಮಹಿಳಾ ಸಮಾನತೆ, ಸಮಾನ ಗೌರವ ಹಾಗೂ ದೌರ್ಜನ್ಯ ತಡೆ.


ಕರ್ನಾಟಕದಲ್ಲಿ ನಡೆದ ಎಲ್ಲ ಚಳವಳಿಗಳಲ್ಲಿ ಮಹಿಳೆಯರೂ ಮುನ್ನೆಲೆಗೆ ಬಂದರು. ಮಹಿಳಾ ಚಳವಳಿ ಸ್ಪಷ್ಟವಾಗಿ, ವಿಸ್ತ್ರತ ನೆಲೆಯಲ್ಲಿ ಬಹುಕಾಲ ನಿಲ್ಲಲಾಗಲಿಲ್ಲ ಎನ್ನುವುದಕ್ಕೆ ಹಲವು ಕಾರಣಗಳಿದ್ದರೂ ರೈತಸಂಘ, ದಲಿತ ಸಂಘರ್ಷ ಸಮಿತಿ, ಬಂಡಾಯ ಸಂಘಟನೆ, ಎಡಪಂಥೀಯ ಸಂಘಟನೆಗಳ ಮಹಿಳಾ ಘಟಕಗಳಲ್ಲಿ ಆಯಾ ಸೈದ್ಧಾಂತಿಕ-ವಲಯ ಚೌಕಟ್ಟಿನಲ್ಲೇ ಹಲವು ಮಹಿಳೆಯರು ಕ್ರಿಯಾಶೀಲವಾಗಿ ತೊಡಗಿಕೊಂಡರು. ಉತ್ತರ ಕರ್ನಾಟಕದ ಗುಲ್ಬರ್ಗಾದಲ್ಲಿ ಕೆ. ನೀಲಾ ಮತ್ತು ಮೀನಾಕ್ಷಿ ಬಾಳಿ ತಂಡವು ಅಸಂಘಟಿತ ಮಹಿಳಾ ಕಾರ್ಮಿಕರೂ ಸೇರಿದಂತೆ ಹಲವು ಮಹಿಳಾ ವಿಷಯಗಳನ್ನು ಮುಂಚೂಣಿಯಲ್ಲಿಟ್ಟುಕೊಂಡು ದಶಕಗಳಿಂದ ಹೋರಾಡುತ್ತಿದೆ. ಹೊಸಪೇಟೆಯ ಭಾಗ್ಯ ಮಂಜುಳಾ ಮತ್ತಿತರರು ದೇವದಾಸಿ ಪದ್ಧತಿ ವಿರುದ್ಧ ಜಾಗೃತಿ ಮೂಡಿಸುತ್ತಿದ್ದಾರೆ. ಮಂಗಳೂರಿನ ದೀಡ್ಸ್, ಮಹಿಳಾ ಸಂಪರ್ಕ ಜಾಲ, ಕೆಕೆಎಸ್ಸಿ ಮತ್ತಿತರ ಸಂಘಟನೆಗಳು ಮಹಿಳೆಯರ ಮೇಲಿನ ವಿವಿಧ ತೆರನ ಹಿಂಸೆಗಳನ್ನು ದಿಟ್ಟವಾಗಿ ಎದುರಿಸುತ್ತಿವೆ. ಬೆಂಗಳೂರಿನ ವಿಮೋಚನಾ ಸಂಸ್ಥೆ ಕೌಟುಂಬಿಕ ದೌರ್ಜನ್ಯ ಕುರಿತು ಕೆಲಸ ಮಾಡುತ್ತಿದೆ. ಮೈಸೂರಿನ ಒಡನಾಡಿ, ಶಕ್ತಿಧಾಮಗಳು ಪರಿತ್ಯಕ್ತೆಯರ ಪರವಾಗಿ ಕೆಲಸ ಮಾಡುತ್ತಿವೆ. ಮಾನಸ ಬಳಗ, ಸಮಾನತಾ ಮಹಿಳಾ ವೇದಿಕೆ, ಸಮತಾ ವೇದಿಕೆ, ಭಾರತೀಯ ಮಹಿಳಾ ಒಕ್ಕೂಟ, ಕರ್ನಾಟಕ ಮಹಿಳಾ ಒಕ್ಕೂಟ ಇತ್ಯಾದಿಯಾಗಿ ಹಲವಾರು ಸಂಘಟನೆಗಳು ಮಹಿಳಾ ಪರ ಉದ್ದೇಶವಿಟ್ಟುಕೊಂಡು ಸ್ವಾಯತ್ತ ಸಂಘಟನೆಯಾಗಿಯೋ, ಸರ್ಕಾರೇತರ ಸಂಸ್ಥೆಯಾಗಿಯೋ ವೇದಿಕೆಗಳಾಗಿಯೋ ಕೆಲಸ ಮಾಡುತ್ತಿವೆ. ಜೊತೆಗೆ ಕಾರ್ಮಿಕ ವಲಯದ ಮಹಿಳೆಯರಿಗಾಗಿಯೂ ಸಂಘಟನೆಗಳಿವೆ. ಇವು ಕೆಲವು ಉದಾಹರಣೆಗಳಷ್ಟೇ. ಇವೆಲ್ಲವೂ ಸ್ಥಳೀಯವಾಗಿ ಹೋರಾಡುತ್ತಿವೆ. ಒಂದು ನಿರ್ದಿಷ್ಟ ತಾತ್ವಿಕತೆ/ಗುರಿಯನ್ನಿಟ್ಟುಕೊಂಡು ಹೋರಾಡುತ್ತಿವೆ ಹಾಗೂ ಜನಜಾಗೃತಿಗೂ ಶ್ರಮಿಸುತ್ತಿವೆ. ಸಾಮಾಜಿಕವಾಗಿ, ಸ್ಥಳೀಯವಾಗಿ ಮಹಿಳೆಯನ್ನು ಗ್ರಹಿಸುವ ಹಾಗೂ ದೌರ್ಜನ್ಯ ತಡೆಗೆ ಸಮಾಜ ಮುಂದಾಗಲೆಂಬ ಆಶಯವನ್ನಿಟ್ಟುಕೊಂಡೇ ಎಲ್ಲವೂ ಕೆಲಸ ಮಾಡುತ್ತಿವೆ.

ಆದರೆ ಮಹಿಳೆಯರ ಸಂಘಟನೆ-ಹೋರಾಟಗಳನ್ನು, ಸಂಘಟಿತ ಪ್ರಯತ್ನಗಳನ್ನು ಸಮಾಜ ಗುರುತಿಸಲಿಲ್ಲ ಎನ್ನುವುದನ್ನೂ ನಾವು ಗಮನಿಸಬೇಕು. ಸಂಘಟಿತ ಪ್ರಯತ್ನಗಳು ಅಗೋಚರವಾಗುಳಿದರೇನು, ಅದರ ಪ್ರತಿಫಲವನ್ನು ದೌರ್ಜನ್ಯ ವಿರೋಧಿ ಕಾನೂನು, ಮೀಸಲಾತಿ, ಪ್ರಾತಿನಿಧ್ಯ, ಬದಲಾದ ನ್ಯಾಯದ ಪರಿಕಲ್ಪನೆಗಳಲ್ಲಿ ಕಾಣಬಹುದಾಗಿದೆ. ಇವತ್ತು ಮಹಿಳಾ ಸಂಘಟನೆಗಳಷ್ಟೇ ಅಲ್ಲ, ಮಾನವ ಪರ ಮನಸುಗಳೆಲ್ಲ ಮಹಿಳಾ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರೆ; ಮಹಿಳಾ ಹಕ್ಕುಗಳ ಮಾತು ಕೇಳಿಬರುತ್ತಿದ್ದು, ಮಹಿಳಾ ದೌರ್ಜನ್ಯವು ಮಾನವ ಹಕ್ಕು ಉಲ್ಲಂಘನೆ ಎಂದು ಪರಿಗಣಿಸಲ್ಪಡುತ್ತಿದ್ದರೆ ಅದರ ಹಿಂದೆ ಸಮಾಜ ಗುರುತಿಸದ ಮಹಿಳಾ ಹೋರಾಟದ ಹೆಜ್ಜೆಗಳಿವೆ.

ಐಕ್ಯತೆಯತ್ತ..

ಜಾಗೃತಗೊಂಡ ಮಹಿಳೆ ತನ್ನನ್ನು ತಾನು ಸಮಸ್ಯೆಯಾಗಿ ಗ್ರಹಿಸಿಕೊಳ್ಳದೇ ಇಡೀ ವಿಶ್ವದ ವಿದ್ಯಮಾನಗಳ ಭಾಗವಾಗಿ ತನ್ನತನವನ್ನು ಗುರುತಿಸಿಕೊಳ್ಳಬೇಕು. ಪ್ರಭುತ್ವದ ಮೇಲೆ ಒತ್ತಡ ಹಾಕುವ ನೈತಿಕ ಶಕ್ತಿಯಾಗಬೇಕು. ಧಾರ್ಮಿಕ ಮೂಲಭೂತವಾದ, ಮಾರುಕಟ್ಟೆ ಮತ್ತು ಕೋಮುವಾದಿ ರಾಜಕಾರಣದ ದಾಳವಾಗದಂತೆ ಎಚ್ಚರ ಕಾಯ್ದುಕೊಳ್ಳಬೇಕು. ವಿಫಲಗೊಂಡ ನ್ಯಾಯವ್ಯವಸ್ಥೆಯನ್ನು ಹಾಗೂ ಮಲಿನಗೊಂಡ ರಾಜಕಾರಣವನ್ನು ಸರಿಪಡಿಸಬೇಕಲ್ಲದೆ, ನಿಷ್ಪಕ್ಷಪಾತ ನ್ಯಾಯ ಹಾಗೂ ಶಿಕ್ಷಾ ವ್ಯವಸ್ಥೆಗೆ ನಾಂದಿ ಹಾಡಬೇಕು. ಹೆಣ್ಣನ್ನು ಕುರಿತ ಆರೋಗ್ಯಕರ ಮನೋಭಾವನೆ ಬೆಳೆಸುವುದು, ಮಾನವ ಜೀವಿಯಾಗಿ ಆಕೆಯನ್ನು ಹಾಗೂ ಆಕೆಯ ಮಡಿಮೆಯನ್ನು ಗೌರವಿಸುವುದು; ಮಹಿಳೆಯರನ್ನು ಶೋಷಿಸುವ, ಹಿಂಸಿಸುವ, ಕೀಳಾಗಿ ಕಾಣುವ ಎಲ್ಲಾ ಮೂಢಾಚರಣೆಗಳನ್ನು ನಿಷೇಧಿಸುವುದು- ಇವೆಲ್ಲವೂ ಆದ್ಯತೆಯ ಮೇಲೆ ಸಾಧ್ಯವಾಗುವುದು ಮಹಿಳಾ ಸಂಘಟನೆಗಳ ಐಕ್ಯತೆಯಿಂದ ಮಾತ್ರ. ನಾಗರಿಕ ಸಮಾಜ, ಮಾರುಕಟ್ಟೆ, ಮಾಧ್ಯಮ, ಸಂಘಟನೆಗಳು, ಸರ್ಕಾರ, ಯುವ ಸಮೂಹ ಎಲ್ಲರೂ ಲಿಂಗಸೂಕ್ಷ್ಮತೆ ಹೊಂದುವಂತೆ, ದೌರ್ಜನ್ಯದ ವಿರುದ್ಧ ದನಿಯೆತ್ತುವಂತೆ ಮಾಡಬೇಕಾದರೆ ಎಲ್ಲ ಮಹಿಳಾ ಸಂಘಟನೆಗಳು ಒಂದುಗೂಡಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಈ ಕಾರಣಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಂಡು ಹಂಚಿಹೋಗಿರುವ ಮಹಿಳೆಯರು, ಮಹಿಳಾಪರ ಮನಸುಗಳು ಒಂದೆಡೆ ಕಲೆಯಬೇಕು; ಪರಸ್ಪರ ಸಂಪರ್ಕ ಜಾಲ ಏರ್ಪಡಬೇಕು; ಅವಶ್ಯ ಬಿದ್ದರೆ ದೊಡ್ಡ ಸಂಖ್ಯೆಯಲ್ಲಿ ಹಾಗೂ ವಿಸ್ತೃತ ಮಟ್ಟದಲ್ಲಿ ಮಹಿಳೆಯರು ಒಟ್ಟುಗೂಡಬಲ್ಲರೆಂಬ ಸಂದೇಶ ರಾಜಕೀಯ ಪಕ್ಷಗಳಿಗೂ ಹಾಗೂ ಪುರುಷ ಪ್ರಧಾನ ಮನಸ್ಸುಗಳಿಗೂ ರವಾನೆಯಾಗಬೇಕು ಎಂಬ ಉದ್ದೇಶದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಾದ ಮಾರ್ಚ್ 8ರಂದು ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಅಸ್ತಿತ್ವಕ್ಕೆ ಬಂದಿತು. ವಿವಿಧ ಸಂಘಟನೆಗಳ ಜಾಲವಾಗಿ ರೂಪುಗೊಂಡು ಕಳೆದ ವರ್ಷ ಮಂಗಳೂರಿನಲ್ಲಿ ಸಮಾವೇಶ, ಹಕ್ಕೊತ್ತಾಯ ಜಾಥಾ ನಡೆಸಿತು. ಅದೇರೀತಿ ಈ ವರ್ಷ ಮೈಸೂರಿನಲ್ಲಿ ಅಲ್ಲಿನ ಸಂಘಟನೆಗಳ ನೇತೃತ್ವದಲ್ಲಿ ಎರಡು ದಿನಗಳ ಸಮಾವೇಶವನ್ನು ಸಂಘಟಿಸಲಾಗಿದೆ. ನಾಡಿನ ಹಲವಾರು ಪ್ರಗತಿಪರ ಮತ್ತು ಮಹಿಳಾ ಸಂಘಟನೆಗಳು ಮೈಸೂರಿನಲ್ಲಿ ಒಟ್ಟಿಗೆ ಆಚರಿಸುತ್ತಿರುವ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸೋದರಿತ್ವ/ಮಾನವತೆಯ ಐಕ್ಯ ಸಂಕೇತವಾಗಿದೆ. ಬರುವ ದಿನಗಳಲ್ಲಿ ಒಕ್ಕೂಟವನ್ನು ಸಂಘಟನೆ ಗಳ ಜಾಲವಾಗಿ ಅರ್ಥಪೂರ್ಣವಾಗಿ ಕಟ್ಟಲು ಎಲ್ಲ ಆರೋಗ್ಯಕರ ಮನಸುಗಳ ಸಹಭಾಗಿತ್ವವನ್ನು ಒಕ್ಕೂಟವು ಬಯಸುತ್ತದೆ.




● ಡಾ.ಎಚ್.ಎಸ್.ಅನುಪಮಾ



ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ: ಹಿನ್ನೆಲೆ

ಮಹಿಳಾ ಆತ್ಮಸಮ್ಮಾನವನ್ನು ಉಳಿಸಿಕೊಳ್ಳಲು, ಬದುಕಿಗೆ ಸಮಾನ ಅವಕಾಶ ಮತ್ತು ಅನುಕೂಲಗಳನ್ನು ಅಧಿಕಾರದಿಂದ ಕೇಳುವ, ಲಿಂಗ ಸಮಾನತೆಯ ಹಾಗೂ ಸಮಾನತೆಯ ಬದುಕಿನಲ್ಲಿ ವಿಶ್ವಾಸವಿಟ್ಟ ರಾಜಕಾರಣ ಮಹಿಳೆಯರದು. ಲಿಂಗತ್ವ ಸೂಕ್ಷ್ಮತೆಯನ್ನು ಜನಮಾನಸದಲ್ಲಿ ಒಡಮೂಡಿಸುವುದೇ ನಮಗಿರುವ ಪರಿಹಾರ. ಆ ದಿಕ್ಕಿನಲ್ಲಿ ಕೆಲಸ ಶೀಘ್ರವಾಗಿ ಮತ್ತು ಪರಿಣಾಮಕಾರಿಯಾಗಿ ಆಗಬೇಕಿದೆ.



ಮಹಿಳೆಯರ ಮೇಲೆ ದೌರ್ಜನ್ಯಗಳು ನಿರಂತರ ನಡೆಯುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಈ ಕುರಿತ ವರದಿಗಳನ್ನು ದಿನವೂ ಪತ್ರಿಕೆಗಳಲ್ಲಿ ಓದಿ ಓದಿ, ಇಲ್ಲವೇ ಸುತ್ತಮುತ್ತಲಲ್ಲಿ ನಡೆಯುತ್ತಿರುವುದನ್ನು ಗಮನಿಸಿ, ಹಲವರು ಎಷ್ಟು ಜಡ್ಡುಗಟ್ಟಿ ಹೋಗಿದ್ದಾರೆಂದರೆ ತಮ್ಮ ಸಂವೇದನಾಶೀಲತೆಯನ್ನು ಕಳೆದುಕೊಂಡುಬಿಟ್ಟಿದ್ದಾರೆ. ಇನ್ನೊಂದೆಡೆ, ಮಹಿಳಾ ದೌರ್ಜನ್ಯದ ವಾಸ್ತವವನ್ನು ಒಪ್ಪಿಕೊಂಡರೂ ಅದಕ್ಕೆ ಪ್ರತಿರೋಧ ನೀಡುವುದು ಇನ್ಯಾರೋ ಮಾಡಬೇಕಾದ ಕೆಲಸ ಎಂದು ತಣ್ಣಗೆ ಉಳಿತಿರುವವರ ಗುಂಪಿದೆ. ಮಧ್ಯಮವರ್ಗದ ಸುಶಿಕ್ಷಿತ ಮಹಿಳೆಯರಲ್ಲಿ ಹಲವರಿಗೆ ಇಂದಿಗೂ 'ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ' ಎಂಬ ಪದ ಅಪಥ್ಯವೆನಿಸಿದೆ. 'ನಾವು ಸದಾ ಧನಾತ್ಮಕವಾಗಿ ನೋಡಬೇಕು, ಋಣಾತ್ಮಕವಾಗಿ ಅಲ್ಲ' ಎನ್ನುವ ಮೂಲಕ ಅವರು ಸಮಸ್ಯೆಗೆ ಮುಖಾಮುಖಿಯಾಗಲು ಹಿಂದೇಟು ಹಾಕುತ್ತಿರುವುದು ಕಂಡುಬರುತ್ತದೆ.

ಇಂತಹ ಸನ್ನಿವೇಶದಲ್ಲಿ 2012ರ ಡಿಸೆಂಬರ್‌ನಲ್ಲಿ ನಾವು ಒಂದಿಷ್ಟು ಗೆಳತಿಯರು ಮಹಿಳೆಯರ ಮೇಲೆ ನಿರಂತರ ನಡೆಯುತ್ತಿರುವ ದೌರ್ಜನ್ಯಗಳಿಗೆ ಏನಾದರೂ ಮಾಡಬೇಕು ಎಂದು ಪರಿತಪಿಸುತ್ತಿದ್ದೆವು. ಆದರೆ ಅದರ ಸ್ವರೂಪದ ಬಗ್ಗೆ ನಮಗೇ ಖಚಿತತೆ ಇರಲಿಲ್ಲ. ಕರಾವಳಿಯ ವಿದ್ಯಮಾನಗಳು ನಮಗೆ ಮೂಗುಬ್ಬಸ ತರಿಸುತ್ತಿದ್ದವು; ಅಸುರಕ್ಷತೆಯ ಭಾವದಿಂದ ಅವು ನಮ್ಮನ್ನು ಅಸ್ವಸ್ಥಗೊಳಿಸುತ್ತಿದ್ದವು. ಸುರಕ್ಷಿತ ತಾಣದಲ್ಲಿ ಇದ್ದೇವೆಂದು ತಮ್ಮನ್ನು ನಾವು ನಂಬಿಸಿಕೊಳ್ಳಲೂ ಆಗದಂಥ ಸ್ಥಿತಿ ಉಂಟಾಗಿತ್ತು. ಆಗ 'ನಮ್ಮ ಪ್ರತಿರೋಧ ಸಣ್ಣದೋ ದೊಡ್ಡದೋ ಎಂಬುದು ಅಮುಖ್ಯ; ಜೀವಂತ ಇದ್ದೇವೆ ಮತ್ತು ನಡೆಯುತ್ತಿರುವ ವಿದ್ಯಮಾನಗಳಿಗೆ ನಮ್ಮ ಪ್ರತಿರೋಧ ಇದೆ' ಎಂದು ಸ್ಪಷ್ಟವಾಗಿ ನುಡಿಯುವ ತುಡಿತ ಮಾತ್ರ ನಮ್ಮದಾಗಿತ್ತು. ಮಂಗಳೂರಿನ 'ಡೀಡ್ಸ್' ಸಂಸ್ಥೆಯಲ್ಲಿ ಹೀಗೆ ಆರಂಭವಾದ ಸಭೆ 'ಮಹಿಳಾ ದೌರ್ಜನ್ಯ ವಿರೋಧೀ ವೇದಿಕೆ'ಯ ರೂಪ ತಾಳಿತು. ಅದೇತಾನೇ ಜರುಗಿದ್ದ ಕರಾವಳಿಯ ಹೋಂಸ್ಟೇ ದಾಳಿ ಪ್ರಕರಣವನ್ನು ಕೈಗೆತ್ತಿಕೊಂಡು, ಸತ್ಯಶೋಧನೆಗೆ ತಂಡವಾಗಿ ಹೊರಟದ್ದಾಯ್ತು. ಈ ಪ್ರಕ್ರಿಯೆ, ವಿಷಯದ ಗೋಚರ ಮುಖದಾಚೆಗಿನ ಅಗೋಚರ ಮುಖದ ಸತ್ಯದರ್ಶನಕ್ಕೆ ಅನುವು ಮಾಡಿಕೊಟ್ಟಿತು. ಪಿಯುಸಿಎಲ್ ಮತ್ತು ಎಎಲ್‌ಎಫ್ ಕಾರ್ಯಕರ್ತರ ಸಕಾಲಿಕ ಬೆಂಬಲದಿಂದ ಒಂದು ಘಟನೆ ಮತ್ತು ವಿಚಾರವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ವಿಧಾನವನ್ನು ಕಲಿಸಿತು ಹಾಗೂ ಅದು ನೀಡುವ ತೃಪ್ತಿಯನ್ನೂ ನಮ್ಮಲ್ಲಿ ತುಂಬಿತು.

ಮಹಿಳೆಯರ ಮೇಲೆ ದಿನೇದಿನೇ ಹೆಚ್ಚುತ್ತಿರುವ ಹಿಂಸೆ, ಕ್ರೌರ್ಯಗಳನ್ನು ಹಾಗೂ ಧರ್ಮ, ಜಾತಿ, ಸಂಸ್ಕೃತಿಯ ಹೆಸರಿನಲ್ಲಿ ಮಹಿಳೆಯ ಚಲನವಲನ, ಸ್ವಾತಂತ್ರ್ಯ, ಅವಕಾಶಗಳನ್ನು ಹತ್ತಿಕ್ಕುವ... ಸಮನಿಸುವ ವಿದ್ಯಮಾನಗಳನ್ನು ವೇದಿಕೆಯು ಚರ್ಚೆಗೆ ಎತ್ತಿಕೊಂಡಿತು. ಆ ವೇಳೆಗೆ ಡು.ಸರಸ್ವತಿ ಎಂಬ ಕನಸುಗಾರ್ತಿ 2013ರ ಮಾರ್ಚ್ 8ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕರಾವಳಿಯಲ್ಲಿ ನಡೆಸುವ ಕನಸನ್ನು ನಮ್ಮಲ್ಲಿ ಬಿತ್ತಿದಳು; ಕರ್ನಾಟಕದ ಮಹಿಳಾಪರ ಸಂಘಟನೆಗಳನ್ನು, ಅದರ ಎಲ್ಲ ಪದಾಧಿಕಾರಿಗಳನ್ನು ಸಂಪರ್ಕಿಸಿ, ನಮ್ಮ ಪ್ರತಿರೋಧದ ಸ್ವರೂಪಕ್ಕೆ ಗಟ್ಟಿತನ, ವ್ಯಾಪಕತೆ ಮತ್ತು ಗುರುತ್ವವನ್ನು ತರುವ ಕೆಲಸವನ್ನು ಡು.ಸರಸ್ವತಿ ಮತ್ತು ಎಚ್.ಎಸ್.ಅನುಪಮಾ ಅವರು ಮಾಡಿದರು. 'ಬೇರೆಯವರ ಉಸಾಬರಿ ನಮಗ್ಯಾಕೆ' ಎಂಬಂತೆ ತಣ್ಣಗೆ ದೂರ ಉಳಿಯುತ್ತಿದ್ದ ಕರಾವಳಿಯಲ್ಲಿ ವಿರ್ಲಿನ್ ಮಾರ್ಟಿಸ್ ಅವರ ನೇತೃತ್ವದಲ್ಲಿ ಹತ್ತಾರು ಮಹಿಳಾ ಸಂಘಟನೆಗಳು ಅಭಿಪ್ರಾಯಭೇದ ಮರೆತು ಒಂದು ಛಾವಣಿಯಡಿ ಒಗ್ಗೂಡಿದ್ದು ಚಾರಿತ್ರಿಕವಾಗಿ ಮುಖ್ಯವಾದ ಸಂಗತಿ. ವಿಶೇಷವೆಂದರೆ 'ಹನಿಗೂಡಿದರೆ ಹಳ್ಳ' ಎಂಬಂತೆ ಮಹಿಳಾ ದೌರ್ಜನ್ಯ ವಿರೋಧೀ ವೇದಿಕೆಗೆ ಜನಬಲ, ಧನಬಲ ಮತ್ತು ಚಿಂತನಾಬಲ ಕೂಡಿಬಂದಿತು ಮತ್ತು ಕಂಡ ಕನಸನ್ನು ನನಸಾಗಿಸಿದ ಸಂಭ್ರಮ ನಮ್ಮದಾಯಿತು.

ಜನಪರ ಹೋರಾಟಗಳಿಗೆ ನಮ್ಮ ವಿಚಾರಗಳಲ್ಲಿ ನಂಬಿಕೆ ಇಟ್ಟ ಜನರ ವಂತಿಗೆಯಿಂದಲೇ ಹಣಸಂಗ್ರಹ ಮಾಡಬೇಕು ಎಂಬ ನಿಲುವು ವೇದಿಕೆಯದಾಗಿತ್ತು. ಒಂದು ಭಾನುವಾರದಂದು ಡಾ.ಅನುಪಮಾ ಅವರು ಕರಾವಳಿಯ ಒಂದಿಷ್ಟು ಕಾರ್ಯಕರ್ತೆಯರನ್ನು ಕೂಡಿಸಿಕೊಂಡು ಹಣ ಸಂಗ್ರಹಕ್ಕೆ ಅನುವಾದರು. ಮೀನಿನ ಮಾರುಕಟ್ಟೆ, ತರಕಾರಿ ಮಾರುಕಟ್ಟೆ, ಬಸ್ ನಿಲ್ದಾಣ, ಅಂಗಡಿ ಸಾಲುಗಳು ಹೀಗೆ ಬೀದಿ ಬದಿಯ ವ್ಯಾಪಾರಿಗಳಿಂದ ಹೈಟೆಕ್ ಜನರ ಮುಂದೆ ಕೈಚಾಚಿ... ಎಂದು ಹೋಗಲು ನಮ್ಮಲ್ಲಿ ಹಲವರಿಗೆ ಮುಜುಗರವಿದ್ದವು. ಸ್ವಲ್ಪಹೊತ್ತಿನಲ್ಲೇ ಮೈಚಳಿ ಮುರಿದು ವಿದ್ಯಾರ್ಥಿಗಳಾದಿಯಾಗಿ ವೇದಿಕೆಯ ಹಿರಿ-ಕಿರಿಯ ಸದಸ್ಯರು ಬೀದಿ ಬದಿಯ ಹಣಸಂಗ್ರಹದಲ್ಲಿ ಪಾಲ್ಗೊಂಡರು. ಆಗಲೇ ಜನಸಾಮಾನ್ಯರೂ ಕರಾವಳಿಯಲ್ಲಿ ಇಂಥ ಒಂದು ಪ್ರತಿರೋಧದ ಅಗತ್ಯವನ್ನು ಮನಗಂಡದ್ದು ನಮ್ಮ ಅರಿವಿಗೆ ಬಂದಿತು. ಕೆಲವರಿಂದ ಉಪದೇಶವೂ ನಮಗೆ ಬಿಟ್ಟಿಯಾಗಿ ಸಿಕ್ಕಿತು. ಒಟ್ಟಿನಲ್ಲಿ ನಮ್ಮ ಅಹಂ ಅನ್ನು ನಿರಸನಗೊಳಿಸಿಕೊಂಡು, ಬೀದಿಗಿಳಿದು ಕಲಿತ ಅನುಭವ ಹಲವರಿಗೆ ದೀರ್ಘಕಾಲ ಮನದಲ್ಲಿ ಹಸಿರಾಗಿರುವಂಥದ್ದು. ಶೈಕ್ಷಣಿಕ ವಲಯ ಮತ್ತು ಕಾರ್ಯಕರ್ತೆ/ಹೋರಾಟಗಾರ್ತಿಯರ ಸಮ್ಮಿಳನದ ಒಂದು ಮಾದರಿಯೂ ಆದಾಗಿತ್ತು.

2013ರ ಮಾರ್ಚ್ 6, 7 ಮತ್ತು 8 ಹೀಗೆ ಮೂರು ದಿನಗಳ ಕಾಲ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮೊದಲ ದಿನ ಮಹಿಳಾಪರ ವಿಷಯಗಳ ಚಿತ್ರಪ್ರದರ್ಶನ ಮತ್ತು ಸಂವಾದ ಹಾಗೂ ಸಂಜೆ ಕಪ್ಪು ಉಡುಗೆಯಲ್ಲಿ ಮಂಗಳೂರಿನ ಪ್ರಧಾನ ರಸ್ತೆಯಲ್ಲಿ ಪ್ರತಿಭಟನೆ ಜರುಗಿದರೆ, 7ರಂದು ಮಂಗಳೂರು ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರದಲ್ಲಿ 'ಮಹಿಳೆಯ ಮೇಲಿನ ದೌರ್ಜನ್ಯಗಳು: ಕಾರಣಗಳು ಮತ್ತು ಆಯಾಮಗಳು' ಕುರಿತು ಗಂಭೀರವಾದ ವಿಚಾರಸಂಕಿರಣ ನಡೆಯಿತು. ಮರಾಠಿ ದಲಿತ ಲೇಖಕಿ ಊರ್ಮಿಳಾ ಪವಾರ್ ಅದರ ಉದ್ಘಾಟನೆಯನ್ನು ನೆರವೇರಿಸಿದರು.

ಮಾರ್ಚ್ 8, 2013ರ ಬೃಹತ್ ಜಾಥಾ ಮತ್ತು ಬಹಿರಂಗ ಸಭೆಯಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು, ಲೇಖಕ-ಲೇಖಕಿಯರು, ಹೋರಾಟಗಾರರು, ಬಹುಮುಖ್ಯವಾಗಿ ಸಾರ್ವಜನಿಕರು ಸ್ಪಂದಿಸಿದ ಬಗೆ ವಿಶೇಷವಾಗಿತ್ತು. ಅದು ಯುವಜನತೆಯನ್ನು ಜಾತಿ, ಧರ್ಮದ ಹೆಸರಿನಲ್ಲಿ ಆಟ್ಟಾಡಿಸಿ ಹೊಡೆಯುತ್ತಿದ್ದ, ಅವರ ಖಾಸಗಿ ಬದುಕನ್ನು ನಿರ್ದೇಶಿಸಲು ಮತ್ತು ನಿಯಂತ್ರಿಸಲು ಯತ್ನಿಸುತ್ತಿದ್ದ ಕ್ರೌರ್ಯದ ವಿರುದ್ಧದ ದನಿಯಾಗಿತ್ತದು; ದೆಹಲಿಯ ಅನಾಮಿಕಾಳ ದುರಂತ, ಧರ್ಮಸ್ಥಳದ ಸೌಜನ್ಯಳ ದುರಂತ ಮತ್ತು ಹೇಳಹೆಸರಿಲ್ಲದ ನೂರಾರು ದಮನಿತ/ಶೋಷಿತ ಮಹಿಳೆಯರ ಪರವಾದ ಧ್ವನಿಯಾಗಿತ್ತದು; ಬಲಪಂಥೀಯ ಚಿಂತನಾಧಾರೆಯವರಿಗೆ 'ಕರಾವಳಿಯನ್ನು ನಿಮ್ಮ ಆಡುಂಬೊಲವಾಗಿ ಮಾಡಿಕೊಳ್ಳಲು ನಾವು ಬಿಡಲಾರೆವು' ಎಂಬ ಸಂದೇಶವಾಗಿತ್ತದು. ಅದರ ತರುವಾಯ ನಡೆದ ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರತಿರೋಧದ ಪರಿಣಾಮವನ್ನು ಇನ್ನಷ್ಟು ಋಜುಗೊಳಿಸಿತು.

ಭಾಂವ್ರಿದೇವಿಯ ಆಗಮನ ಅಂದಿನ ಕಾರ್ಯಕ್ರಮಕ್ಕೆ ಕಿರೀಟಪ್ರಾಯವೆನಿಸಿತ್ತು. ಬಾಲ್ಯವಿವಾಹವನ್ನು ತಡೆದ ಅಪರಾಧಕ್ಕೆ ಆಕೆ ಮೇಲ್ಜಾತಿಯ ಪುರುಷರಿಂದ ಅನುಭವಿಸಿದ ಶಿಕ್ಷೆ ಮತ್ತು ನ್ಯಾಯಾಲಯದಲ್ಲಿ ನ್ಯಾಯಕ್ಕಾಗಿ ಆಕೆ ನಡೆಸಿದ ಹೋರಾಟದ ಹಾದಿಯ ಕರಾಳತೆ, ಕ್ರೌರ್ಯಗಳ ಅಗ್ನಿಕುಂಡವನ್ನು ಹಾದು ಭಾಂವ್ರಿ ದೇವಿ ಗೆದ್ದು ನಿಂತವಳು; "ನನ್ನ ಸೋಲಿಸಲು ಸಾಧ್ಯವಿಲ್ಲ" ಎಂದು ಜಗತ್ತಿಗೆ ತೋರಿದವಳು; ಅಂತೆಯೇ ಎಲ್ಲರೊಳಗೆ ಎಚ್ಚರದ ದೀಪವನ್ನು ಬೆಳಗಿದವಳು. 'ಚಾರ್ ದಿನ್ ಕಾ ಸಹೇಲಿ ಸಹೇಲಿ ನಹೀ, ಜೀವನ್ ಭರ್ ಸಾಥ್ ದೇನೇಕಾ ವಾದಾ ಕರೋ' (ನಾಲ್ಕು ದಿನಗಳ ಗೆಳತಿ ನಿಜವಾದ ಗೆಳತಿಯಲ್ಲ; ಜೀವನದುದ್ದಕ್ಕೂ ಜೊತೆನೀಡುವ ಪ್ರಮಾಣ ಮಾಡು) ಇದು ಅವಳು ಬೃಹತ್ ಜಾಥಾವನ್ನು ಉದ್ಘಾಟಿಸುತ್ತ ಹೇಳಿದ ಮಾತು!

ಬೃಹತ್ ಸಮಾವೇಶದಲ್ಲಿ ನಾಲ್ಕು ಸಾವಿರಕ್ಕೂ ಅಧಿಕ ನಾಗರಿಕರು ಸೇರಿದ್ದು ಒಂದು ನೆನಪುಳಿಯುವ ಸನ್ನಿವೇಶ. "ಪ್ರೀತಿಯ ಗಾಳಿ ಬೀಸುತಿದೆ ಹಟ್ಟಿ ಮೊಹಲ್ಲಾಗಳ ನಡುವೆ....", "ಕಾಲ ಈಗ, ಕಾಲ ಈಗ ಬಂದೇ ಬಂದಿತು..." ಮುಂತಾದ ಅನೇಕ ಹೋರಾಟದ ಗೀತೆಗಳು ಸಮಾವೇಶದ ಆಶಯವನ್ನು ಸಮರ್ಥವಾಗಿ ಜನರಿಗೆ ಮುಟ್ಟಿಸಿದವು.


ಮಾರ್ಚ್ 8, 2013ರ ಕಾರ್ಯಕ್ರಮದ ಬಳಿಕ ಕರ್ನಾಟಕದ ವಿವಿಧೆಡೆಗಳಿಂದ ಬಂದ ಹಲವರು ಸಭೆ ಸೇರಿ, ಮಹಿಳಾ ದೌರ್ಜನ್ಯ ವಿರೋಧೀ ವೇದಿಕೆಯನ್ನು ವಿಸ್ತರಿಸುವ ಬಗ್ಗೆ ಚರ್ಚಿಸಿದರು. ಅದರ ಫಲವಾಗಿ 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧೀ ಒಕ್ಕೂಟ' ಸ್ಥಾಪನೆಗೊಂಡಿತು. ಕಳೆದೊಂದು ವರ್ಷದಲ್ಲಿ ಈ ವೇದಿಕೆಯು ರಾಜಕೀಯ, ಸಾಮಾಜಿಕ ಮತ್ತು ಸಾಹಿತ್ಯಿಕ ವಿದ್ಯಮಾನಗಳಿಗೆ ತನ್ನ ಪ್ರತಿಕ್ರಿಯೆಯನ್ನು ತೋರುತ್ತಲೇ ಬಂದಿದೆ. ಮಹಿಳಾ ಪ್ರಾತಿನಿಧ್ಯದ ಕುರಿತು ಮುಖ್ಯಮಂತ್ರಿಯವರಿಗೆ ಬರೆದ ಪತ್ರ; ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಡಿಕೇರಿಯಲ್ಲಿ ಜರುಗಿದಾಗ, ಅಲ್ಲೂ ಮಹಿಳಾ ಪ್ರಾತಿನಿಧ್ಯ ಸೊರಗಿದ್ದನ್ನು ಪ್ರಶ್ನಿಸಿದ್ದು ಅಂತಹ ಒಂದೆರಡು ನಿದರ್ಶನಗಳು. ಸಾಹಿತ್ಯ ಸಮ್ಮೇಳನ ಹೇಗಿರಬೇಕು ಎಂಬ ಬಗ್ಗೆಯೂ ಒಕ್ಕೂಟ ಕಾಲಕಾಲಕ್ಕೆ ಸಮಾಜಕ್ಕೆ ಎಚ್ಚರಿಕೆಯ ಗಂಟೆಯನ್ನು ಮೊಳಗಿಸಿದೆ.

ಒಂದು ವರ್ಷ ಉರುಳಿಯೇ ಬಿಟ್ಟಿತು. ಮಹಿಳೆಯರ ಮೇಲಿನ ಹಿಂಸೆಗಳು, ಕ್ರೌರ್ಯಗಳು, ದೌರ್ಜನ್ಯಗಳು ಕೊನೆಯಾಗಿಲ್ಲ; ಅದರ ಬದಲು ಹೆಚ್ಚೆಚ್ಚು ಪ್ರಕರಣಗಳು ದಾಖಲಾಗುತ್ತಲೇ ಇವೆ. ಕಳೆದೊಂದು ವರ್ಷದಲ್ಲಿ ಪ್ರಖರವಾಗಿ ಗೋಚರಿಸುವ ಬದಲಾವಣೆ ಎಂದರೆ, ಮಹಿಳೆ ತನ್ನ ಮೇಲೆ ನಡೆದ ದೌರ್ಜನ್ಯವನ್ನು ಹೇಳುವ ಧೈರ್ಯ ಮಾಡುತ್ತಿದ್ದಾಳೆ; ತಲೆತಗ್ಗಿಸಬೇಕಾದವಳು ತಾನಲ್ಲ ಎಂಬುದರಲ್ಲಿ ವಿಶ್ವಾಸ ತಾಳಿದ್ದಾಳೆ; ನ್ಯಾಯಾಲಯ, ಪೊಲೀಸ್ ಠಾಣೆಯ ಮೆಟ್ಟಿಲೇರಲು ಹಿಂಜರಿಯುತ್ತಿಲ್ಲ. ಮಾಧ್ಯಮ ಗಳೂ ಸ್ವಲ್ಪ ಮಹಿಳಾ ಸಂವೇದಿಯಾಗಿ ಕಾರ್ಯನಿರ್ವ ಹಿಸುತ್ತಿವೆ. ಇವುಗಳ ಪರಿಣಾಮವಾಗಿ ಹೆಚ್ಚು ಮಹಿಳಾ ದೌರ್ಜನ್ಯ ಪ್ರಕರಣಗಳು ಬೆಳಕಿಗೆ ಬರುತ್ತಿವೆ.

ವ್ಯವಸ್ಥೆಯನ್ನು ಪ್ರಾಮಾಣಿಕವಾಗಿ, ಪ್ರಖರವಾಗಿ ಮತ್ತು ನೈತಿಕ ನೆಲೆಯಿಂದ ಪ್ರಶ್ನಿಸುವ ಕೆಲಸವನ್ನು ಮಹಿಳೆಯರು ಮಾಡುತ್ತಿದ್ದಾರೆ. ಆದರ ಇಂಥ ಪ್ರಾಮಾಣಿಕ ನೈತಿಕ ಪ್ರಶ್ನೆಗಳನ್ನು ಎದುರಿಸುವ ಶಕ್ತಿಯಿಲ್ಲದ ಅಥವಾ ಅವುಗಳಿಗೆ ಮುಖಾಮುಖಿಯಾಗುವ ಧೈರ್ಯ ಇಲ್ಲದ ಅಧಿಕಾರಸ್ಥರಿಗೆ, ಧನವಂತರಿಗೆ ಹಾಗೂ ಸ್ಥಾಪಿತ ಹಿತಾಸಕ್ತಿಯನ್ನು ಕಾಪಾಡುವವರಿಗೆ ಈ ವಿದ್ಯಮಾನಗಳು ನುಂಗಲಾರದ ತುತ್ತು ಎನಿಸಿವೆ. ಸದಾ ಇನ್ನೊಂದು ಗುಂಪಿಗೆ ಆದೇಶಿಸಿಕೊಂಡು ಬಂದ, ಅನುಕೂಲಕರ ಜಾಗದಲ್ಲೇ ಠಿಕಾಣಿ ಹೂಡಿದ್ದ ಆ ಗುಂಪುಗಳು ಇಂದು ಬಲಾದ ತಮ್ಮ ಸ್ಥಿತಿಗೆ ಇರಿಸುಮುರಿಸು ಹೊಂದಿವೆ. ಇದರ ಪರಿಣಾಮವಾಗಿ ದನಿ ಎತ್ತಿದ, ಎತ್ತಬಯಸಿದ, ನ್ಯಾಯದ ಪರವಾಗಿ ನಿಂತ ಮಹಿಳೆಯರನ್ನು ಹತ್ತಿಕ್ಕುವ ವ್ಯವಸ್ಥಿತ ಷಡ್ಯಂತ್ರ ನಡೆಯುತ್ತಿದೆ. ತಮಿಳುನಾಡಿನ ಕ್ಯಾಪ್ಟನ್ ಲತಾ ಶರ್ಮಾ ಪ್ರಕರಣ ಅಂತಹ ಒಂದು ನಿದರ್ಶನ ಮಾತ್ರ. ತನ್ನ ಕಣ್ಣೆದುರು ಓರ್ವ ಮಹಿಳೆಯ ಮೇಲೆ ನಡೆದ ಅತ್ಯಾಚಾರವನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದುದು ಹಾಗೂ ನೊಂದ ಮಹಿಳೆಯ ಪರವಾಗಿ ನ್ಯಾಯ ಕೇಳಿದ್ದೇ ಲತಾ ಶರ್ಮಾ ಮಾಡಿದ ಮಹಾಪರಾಧವೆನಿಸಿ, ಅವಳ ಮೇಲೆ ಶಿಸ್ತುಕ್ರಮವನ್ನು ಸೇನೆ ಕೈಗೊಂಡಿತು. ಕೊನೆಗೂ 17 ವರ್ಷಗಳ ದೀರ್ಘ ಕಾನೂನು ಹೋರಾಟದ ಬಳಿಕ ಆಕೆ ಮತ್ತೆ ತನ್ನ ಉದ್ಯೋಗ ಮತ್ತು ಸಮ್ಮಾನವನ್ನು ಪಡೆದಿರುವುದು ನಮಗೆ ಮಾದರಿಯಾಗಬೇಕಿದೆ. ರೂಪನ್ ಬಜಾಜ್, ಭಾಂವ್ರಿದೇವಿ ಇವರೆಲ್ಲ ಮಹಿಳಾ ಆತ್ಮಸಮ್ಮಾನಕ್ಕಾಗಿ, ನ್ಯಾಯಕ್ಕಾಗಿ ನಡೆಸಿದ ದೀರ್ಘ ಹೋರಾಟಗಳೂ ಮಹಿಳಾ ಚರಿತ್ರೆಯ ಪ್ರಮುಖ ಮೈಲುಗಲ್ಲುಗಳು.

ಇತ್ತೀಚೆಗೆ ಅತ್ಯಾಚಾರ, ಗುಂಪು ಅತ್ಯಾಚಾರ ಪ್ರಕರಣಗಳಲ್ಲಿ ಅಪ್ರಾಪ್ತ ವಯಸ್ಕ ಯುವಕರ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕಾರಿ ಸಂಗತಿ. ಈ ಕುರಿತ ಕಾನೂನುಗಳ ಸ್ವರೂಪದ ಬಗ್ಗೆ ಚರ್ಚೆ ಈಗ ಎದ್ದಿದೆ. ಒಂದೊಂದು ಅತ್ಯಾಚಾರ ಪ್ರಕರಣವೂ ಎದುರಿಟ್ಟಿರುವ ಬಿಕ್ಕಟ್ಟುಗಳಿಂದ ತನಿಖಾ ವಿಧಾನಗಳಲ್ಲಿ ಬದಲಾವಣೆಗಳು ಆಗತೊಡಗಿವೆ. ಇದರ ಜೊತೆಜೊತೆಗೆ ಅಪರಾಧಿಗಳಿಗೆ ನೀಡಬೇಕಾದ ಶಿಕ್ಷೆಯ ಕುರಿತು ಮಹಿಳಾ ನೆಲೆಯ ಚರ್ಚೆ ಹೊಸ ಜಾಡು ಹಿಡಿದಿದೆ. ಅಪರಾಧಿಗಳಿಗೆ ಮರಣದಂಡನೆಯೋ, ನಪುಂಸಕತ್ವವೋ ಶಿಕ್ಷೆಯಾಗಲಾರದು. ಅದರಾಚೆಗಿನ ಸಾಧ್ಯತೆಗಳು ಮತ್ತು ಸವಾಲುಗಳ ಕುರಿತು ಗಮನಹರಿಸುವ ಅಗತ್ಯವಿದೆ. 'ನ್ಯಾಯದ ಪರಿಕಲ್ಪನೆ'ಯನ್ನು ಮಹಿಳಾ ಹೋರಾಟದ ವಲಯಗಳು ಭಿನ್ನ ಮಾದರಿಗಳಲ್ಲಿ ಚಲಾವಣೆಗೆ ತರುತ್ತಿವೆ. 'ಮಹಿಳಾ ನ್ಯಾಯಾಲಯ'ದಂಥ ಪರಿಕಲ್ಪನೆ ಅವುಗಳಲ್ಲಿ ಒಂದು ಭಾಗ ಮಾತ್ರ. 'ಗುಲಾಬಿ ಗ್ಯಾಂಗ್' ಇನ್ನೊಂದು ಮಾದರಿ. ಪ್ರತಿ ಮಹಿಳಾ ಗುಂಪೂ ತನ್ನದೇ ಆದ ನ್ಯಾಯದ ಪರಿಕಲ್ಪನೆಯನ್ನು ಹೊಂದಲು ಸಾಧ್ಯವಿದೆ. ಸೇಡಿನ ರಾಜಕಾರಣವನ್ನು ಕೈಬಿಟ್ಟ; ಮಹಿಳಾ ಆತ್ಮಸಮ್ಮಾನವನ್ನು ಉಳಿಸಿಕೊಳ್ಳಲು, ಬದುಕಿಗೆ ಸಮಾನ ಅವಕಾಶ ಮತ್ತು ಅನುಕೂಲಗಳನ್ನು ಅಧಿಕಾರದಿಂದ ಕೇಳುವ, ಲಿಂಗ ಸಮಾನತೆಯ ಹಾಗೂ ಸಮಾನತೆಯ ಬದುಕಿನಲ್ಲಿ ವಿಶ್ವಾಸವಿಟ್ಟ ರಾಜಕಾರಣ ಮಹಿಳೆಯರದು. ಲಿಂಗತ್ವ ಸೂಕ್ಷ್ಮತೆಯನ್ನು ಜನಮಾನಸದಲ್ಲಿ ಒಡಮೂಡಿಸುವುದೇ ನಮಗಿರುವ ಪರಿಹಾರ. ಆ ದಿಕ್ಕಿನಲ್ಲಿ ಕೆಲಸ ಶೀಘ್ರವಾಗಿ ಮತ್ತು ಪರಿಣಾಮಕಾರಿಯಾಗಿ ಆಗಬೇಕಿದೆ.

ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಈ ವರ್ಷ ಮೈಸೂರಿನಲ್ಲಿ ಎಲ್ಲ ಮಹಿಳಾಪರ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ನಡೆಸಲು ಉದ್ದೇಶಿಸಿದೆ. ಮೇಲಿನ ವಿಚಾರಗಳ ಕುರಿತ ಗಂಭೀರ ಚರ್ಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಮಾರ್ಚ್ 7, 2014ರಂದು ಹಮ್ಮಿಕೊಂಡಿರುವ ವಿಚಾರಸಂಕಿರಣವು ವೇದಿಕೆಯನ್ನು ನಿರ್ಮಿಸಲಿದೆ. ಅಂದೇ ಸಂಜೆ ಕಪ್ಪುಡುಗೆಯಲ್ಲಿ ಪ್ರತಿಭಟನೆಯೂ ನಡೆಯಲಿದೆ. 8ರಂದು ಬೆಳಿಗ್ಗೆ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಮಾವೇಶ ಜರುಗಲಿದೆ. ಎಲ್ಲರೂ ಮತ್ತೆ ಭೇಟಿಯಾಗುವ, ಮಾಹಿತಿ ವಿನಿಮಯ ಮಾಡಿಕೊಳ್ಳುವ, ಮಹಿಳಾಪರ ಸಮಾಜವನ್ನು ಕಟ್ಟಲು ಹೊಸಹೊಸ ಮಾರ್ಗೋಪಾಯಗಳನ್ನು ಆವಿಷ್ಕರಿಸಿಕೊಳ್ಳುವ ದಿನವಾಗಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ನಡೆಸೋಣ. ನಿಮಗಿದೋ ಪ್ರೀತಿಯ ಸ್ವಾಗತ.



● ಡಾ.ಸಬಿಹಾ ಭೂಮೀಗೌಡ

ಮೈಸೂರಿನಲ್ಲಿ ಮಹಿಳೆಯರ ಐಕ್ಯತೆ



ಆತ್ಮೀಯರೇ,

ನಮ್ಮ ಸಮಾಜದಲ್ಲಿ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಹಿನ್ನಲೆಯಲ್ಲಿ ಅದನ್ನು ವಿರೋಧಿಸುವ ಮತ್ತು ಪ್ರತಿಭಟಿಸುವ ತುರ್ತು ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಮಾನವ ಕುಲದ ಆಶಯವಾಗಿರುವ ಸ್ವಸ್ಥ ಸಮಾಜದ ನಿರ್ಮಾಣದಲ್ಲಿ ಮಹಿಳೆಯರನ್ನೂ ಸಮಾನ ಭಾಗೀದಾರರನ್ನಾಗಿ ಮಾಡಿಕೊಳ್ಳಬೇಕೆಂಬ ಅರಿವನ್ನು ಸಮಾಜ ಪಡೆಯಬೇಕಿದೆ. ಮುಂಬರಲಿರುವ ಲೋಕಸಭಾ ಚುನಾವಣೆಗೆ ಎಲ್ಲ ರಾಜಕೀಯ ಪಕ್ಷಗಳು ಸಜ್ಜಾಗುತ್ತಿವೆ. ಸುಳ್ಳು ಆಶ್ವಾಸನೆಗಳು, ಪೊಳ್ಳು ಭರವಸೆಗಳ ವಾಕ್ಚಾತುರ್ಯ ಪ್ರದರ್ಶನಕ್ಕೆ ತಾಲೀಮು ಶುರುವಾಗಿದೆ. ಎಲ್ಲ ರಾಜಕೀಯ ಪಕ್ಷ/ಸಿದ್ಧಾಂತಗಳೂ ಮಹಿಳಾ ವಿಷಯಕ್ಕೆ ಕೇವಲ ಮಾತಿನಲ್ಲಷ್ಟೇ ಮನ್ನಣೆ ನೀಡುತ್ತಿವೆ. ಹೈಟೆಕ್ ಅಭಿವೃದ್ಧಿ ಮಂತ್ರ, ಜಾತಿ ಮತ್ತು ಕೋಮುವಾದಿ ರಾಜಕಾರಣದ ಗುಪ್ತ ಅಜೆಂಡಾಗಳನ್ನು ಮಹಿಳೆ ಮನಗಾಣಬೇಕಿದೆ. ಜೊತೆಗೆ ಎಂತಹುದೇ ದುರಂತದ ಸಂದರ್ಭದಲ್ಲಿಯೂ ಮಹಿಳೆಯರು ಪ್ರತಿರೋಧಿಸುವ ಶಕ್ತಿ ಕಳೆದುಕೊಳ್ಳದೇ ಒಗ್ಗಟ್ಟಾಗಿ ಇರುವುದು ಅತಿ ಅವಶ್ಯವಾಗಿದೆ.

ಈ ನಿಟ್ಟಿನಲ್ಲಿ ಸಮಾನ ಮನಸ್ಕ ಮಹಿಳಾ ಸಂಘಟನೆಗಳು ಮತ್ತು ಪ್ರಗತಿಪರ ಸಂಘಟನೆಗಳು ಸೇರಿ ಕಳೆದ ವರ್ಷ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಅಸ್ತಿತ್ವಕ್ಕೆ ಬಂತು ಹಾಗೂ ಮಂಗಳೂರಿನಲ್ಲಿ ಬೃಹತ್ ಪ್ರಮಾಣದ ರ್‍ಯಾಲಿ, ವಿಚಾರಸಂಕಿರಣಗಳನ್ನು ನಡೆಸಲಾಯಿತು. ಹಾಗೇ ಈ ವರ್ಷವೂ ಎಲ್ಲ ಮಹಿಳೆಯರೂ/ಪ್ರಗತಿಪರ ಸಮಾನ ಮನಸ್ಕ ಸಂಘಟನೆಗಳೂ ಒಟ್ಟಾಗಿ ಮೈಸೂರಿನಲ್ಲಿ ಮಾರ್ಚ್ 7, 8ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಿವೆ. ಅದರ ಪ್ರಯುಕ್ತ ಮಾರ್ಚ್ 7ರಂದು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಮಹಿಳಾ ದೌರ್ಜನ್ಯ ಕುರಿತ ವಿಚಾರಸಂಕಿರಣ ಹಾಗೂ ಮಾರ್ಚ್ 8ರಂದು ಮೈಸೂರಿನ ಅರಮನೆ ಮೈದಾನದಿಂದ ಬೆಳಗ್ಗೆ 10ಕ್ಕೆ ಹಕ್ಕೊತ್ತಾಯ ಜಾಥಾ ಮತ್ತು ಮೆರವಣಿಗೆ ಹೊರಡಲಿದ್ದು ನಂತರ ಬಹಿರಂಗ ಸಮಾವೇಶ ನಡೆಯುತ್ತದೆ.

ದುಡಿಮೆಗೆ ಮುಂದು ಒಡೆತನದಲ್ಲಿ ಹಿಂದು

ವಿಶ್ವಸಂಸ್ಥೆಯ ವರದಿಯೊಂದರ ಪ್ರಕಾರ ಮಹಿಳೆಯರು ಜಗತ್ತಿನ ಒಟ್ಟು ಜನಸಂಖ್ಯೆಯ ಅರ್ಧದಷ್ಟಿದ್ದಾರೆ. ಜಗತ್ತಿನ ಒಟ್ಟು ದುಡಿಮೆಯ ಅವಧಿಯ ಮೂರನೇ ಎರಡು ಭಾಗದಷ್ಟು ಮಹಿಳೆಯರದು. ಅವರಿಗೆ ಸಿಗುವುದು ಜಗತ್ತಿನ ಒಟ್ಟು ಆದಾಯದ ಹತ್ತನೇ ಒಂದು ಭಾಗದ ಒಡೆತನ. ಅವರು ಹೊಂದಿರುವುದು ಜಗತ್ತಿನ ಒಟ್ಟು ಆಸ್ತಿಯ ನೂರನೇ ಒಂದು ಭಾಗ ಮಾತ್ರ. ಈ ವೈರುಧ್ಯ ನಮಗೆ ನೆನಪಿರಬೇಕು. ಇನ್ನು ನಮ್ಮ ದೇಶದಲ್ಲಂತೂ ಬಹುಪಾಲು ಹೆಣ್ಣುಮಕ್ಕಳು ಶಿಕ್ಷಣ, ಆರೋಗ್ಯ, ಪೌಷ್ಟಿಕತೆ ಎಲ್ಲದರಲ್ಲೂ ಹಿಂದಿದ್ದರೂ ಯಾವ ಸೌಲಭ್ಯ/ಸುರಕ್ಷತೆಗಳೂ ಇಲ್ಲದ ಅಸಂಘಟಿತ ವಲಯದಲ್ಲಿ ಬಿಡಿಗಾಸಿಗೆ ದುಡಿದು ದೇಶದ ಆರ್ಥಿಕತೆಗೆ ಕೊಡುಗೆ ನೀಡುತ್ತಾರೆ.

ಈ ದುಡಿಮೆಗೆ ಸಿಗುವ ಬೆಲೆ ಯಥೇಚ್ಛ ಹಿಂಸೆ!

ಗೃಹ ಸಚಿವಾಲಯದ ನ್ಯಾಶನಲ್ ಕ್ರೈಂ ಬ್ಯೂರೋ ದಾಖಲೆ ಪ್ರಕಾರ,

• ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು 2008ರಲ್ಲಿ 1,95,856 ರಷ್ಟಿದ್ದುದು 2012ರಲ್ಲಿ 2,44,270 ರಷ್ಟು ಹೆಚ್ಚಿದೆ. ಈ ಅಪರಾಧಗಳು ಅತ್ಯಾಚಾರವಲ್ಲದೆ, ಅಪಹರಣ, ಕಿರುಕುಳ, ಲೈಂಗಿಕ ದೌರ್ಜನ್ಯ, ಗಂಡ ಮತ್ತು ಆತನ ಕುಟುಂಬದವರು ನಡೆಸುವ ಕ್ರೌರ್ಯವನ್ನೂ ಒಳಗೊಂಡಿವೆ. • ಪ್ರತಿ 26 ನಿಮಿಷದಲ್ಲಿ ಒಬ್ಬ ಮಹಿಳೆ ಕಿರುಕುಳವನ್ನು ಅನುಭವಿಸುತ್ತಾಳೆ • ಪ್ರತಿ 34 ನಿಮಿಷದಲ್ಲಿ ಒಂದು ಅತ್ಯಾಚಾರ ಸಂಭವಿಸುತ್ತದೆ • ಪ್ರತಿ 43 ನಿಮಿಷಕ್ಕೊಂದು ಅಪಹರಣ ಪ್ರಕರಣ ಜರುಗುತ್ತದೆ • ಇನ್ನು ದಮನಿತರಲ್ಲೆ ದಮನಿತರಾದ ದಲಿತ ಮಹಿಳೆಯರ ಸ್ಥಿತಿಯಂತೂ ದಾರುಣವಾದುದು. ಬೈಗುಳ, ದೈಹಿಕ ದೌರ್ಜನ್ಯ, ಲೈಂಗಿಕ ದೌರ್ಜನ್ಯ, ಕಿರುಕುಳ, ಕೌಟುಂಬಿಕ ದೌರ್ಜನ್ಯ ದಲಿತ ಮಹಿಳೆಯರ ಬದುಕಿನ ಮಾಮೂಲಿ ಸಂಗತಿಗಳಾಗಿ ಬಿಟ್ಟಿವೆ. ಪ್ರತಿ 3 ನಿಮಿಷಕ್ಕೊಮ್ಮೆ ದಲಿತ ಮಹಿಳೆ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಇದಲ್ಲದೆ ಜಾತೀಯತೆ ಮತ್ತು ಅಸ್ಪೃಶ್ಯತೆಯ ಕಾರಣಕ್ಕೆ ದಲಿತರ ಆಸ್ತಿಗೆ ಹಾನಿ, ಮನೆಗೆ ಬೆಂಕಿಹಚ್ಚುವುದು, ಹತ್ಯೆ ಮಾಡುವುದರಿಂದಾಗಿ ದಲಿತ ಮಹಿಳೆ ಮತ್ತಷ್ಟು ಶೋಷಣೆಗೆ ಒಳಗಾಗಿದ್ದಾಳೆ.

ಮಹಿಳೆಯರ ಮೇಲಿನ ಹಿಂಸೆಗೆ ಪರವಾನಿಗೆ ನೀಡುವ ಮಾರುಕಟ್ಟೆ ಆರ್ಥಿಕತೆ

ಲಾಭಕೋರತನವೇ ಉಸಿರಾಗಿರುವ ಮಾರುಕಟ್ಟೆ ಆರ್ಥಿಕತೆಯೊಂದಿಗೆ ಅಭಿವೃದ್ಧಿ ಮಂತ್ರ ಜಪಿಸುವ ಕೋಮುವಾದಿ ರಾಜಕಾರಣವೂ ಸೇರಿಕೊಂಡು ಪರಿಸರ ಹಾಗೂ ಮಹಿಳೆಯರ ಮೇಲೆ ನಿರಂತರ ದಾಳಿ ನಡೆಸಿವೆ. ಹಿಂಸೆಯನ್ನು ತನ್ನ ಮೂಲದಲ್ಲಿಯೇ ಹುದುಗಿಸಿಕೊಂಡಿರುವ ಇಂದಿನ ಅಭಿವೃದ್ಧಿ ಮಾದರಿಯೊಂದಿಗೆ ಕೈ ಜೋಡಿಸಿರುವ ಆಧುನಿಕ ತಂತ್ರಜ್ಞಾನವು ಪ್ರಕೃತಿಯೊಂದಿಗಿನ ಮನುಷ್ಯರ ಸಾವಯವ ಸಂಬಂಧವನ್ನೇ ನಿರ್ನಾಮಮಾಡಿ ಜೀವನಶೈಲಿ ಯನ್ನೇ ಹಿಂಸಾತ್ಮಕಗೊಳಿಸಿದೆ. ಹೈಟೆಕ್ ತಂತ್ರಜ್ಞಾನದಿಂದ ಹೆಣ್ಣಿನ ಗರ್ಭವೂ ಮಾರಾಟದ ಸರಕಾಗಿದೆ. ಹೆಣ್ಣುಶಿಶುವಿಗೆ ತಾಯಿಯ ಗರ್ಭವೂ ಸುರಕ್ಷಿತ ನೆಲೆಯಾಗಿ ಉಳಿದಿಲ್ಲ.

ಖಾಸಗೀಕರಣ, ಉದಾರೀಕರಣದ ಹಿನ್ನೆಲೆಯಲ್ಲಿ ಪ್ರಭುತ್ವವು ತನ್ನ ಎಲ್ಲ ಸಾಮಾಜಿಕ ಜವಾಬ್ದಾರಿಯಿಂದ ನುಣುಚಿಕೊಂಡಿದೆ. ಆ ಮೂಲಕ ಬಿಡಿಗಾಸಿನ ಸಂಬಳಕ್ಕೆ ಬೆವರಿನ ದುಡಿಮೆಯನ್ನು ದೋಚಲು ಬಹುರಾಷ್ಟ್ರೀಯ ಕಂಪನಿಗಳಿಗೆ ಅನುವು ಮಾಡಿಕೊಟ್ಟಿದೆ. ಸೇವೆಯ ಹೆಸರಿನಲ್ಲಿ ಜೀತಗಾರರಂತೆ ದುಡಿಯುವ ಪೌರಕಾರ್ಮಿಕರು, ಗಾರ್ಮೆಂಟ್ಸ್ ಮಹಿಳೆಯರು, ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟದವರು, ಆಶಾ ಕಾರ್ಯಕರ್ತೆಯರು ಹೈಟೆಕ್‌ಯುಗದ ಕೂಲಿಯಾಳುಗಳಾಗಿದ್ದಾರೆ.

ರಕ್ಷಣೆಯ ಹೆಸರಿನಲ್ಲಿ ದಾಳಿಗೀಡಾಗುವ ಮಹಿಳೆಯರ ದೇಹ

ದೇಶರಕ್ಷಣೆ, ಧರ್ಮರಕ್ಷಣೆ, ಸಮುದಾಯ ಮತ್ತು ಕುಟುಂಬದ ಗೌರವದ ರಕ್ಷಣೆಯ ಹೆಸರಿನಲ್ಲಿ ಮಹಿಳೆಯರು ಅತ್ಯಾಚಾರ ಹಾಗೂ ಹತ್ಯೆಗೆ ಈಡಾಗುತ್ತಿದ್ದಾರೆ.

• ಕಾಶ್ಮೀರ, ಈಶಾನ್ಯ ಭಾರತದ ಮಹಿಳೆಯರದಂತೂ ಅತ್ಯಂತ ಶೋಚನೀಯ ಸ್ಥಿತಿ. ಮನೆಯಿಂದ ಹೊರಗೆ ಹೋದ ಗಂಡ-ಮಕ್ಕಳು ಕ್ಷೇಮವಾಗಿ ಹಿಂತಿರುಗುವ ಖಾತ್ರಿಯೇ ಇಲ್ಲದ, ಯಾವಾಗ ಯಾವ ದೌರ್ಜನ್ಯಕ್ಕೆ ಈಡಾಗುವೆವೋ ಎಂಬ ಆತಂಕದ ಪರಿಸ್ಥಿತಿಯಲ್ಲಿ ಅವರು ಬದುಕುತ್ತಿದ್ದಾರೆ. ಸೇನೆಯವರಿಂದಲೇ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ.

• ಪೊಲೀಸರು ಅನೈತಿಕ ಸಾಗಣೆ ಕಾಯ್ದೆ, ಸೆಕ್ಷನ್ 377 (ಅಸಹಜ ಲೈಂಗಿಕತೆ) ಅನ್ನು ಗುರಾಣಿಯಂತೆ ಬಳಸಿಕೊಂಡು ಲೈಂಗಿಕ ಅಲ್ಪಸಂಖ್ಯಾತರ ಮೇಲೆ ಭೀಕರವಾಗಿ ಅತ್ಯಾಚಾರ ಮಾಡುತ್ತಾರೆ.

• ಅಣೆಕಟ್ಟು, ಹೈವೆ ಎಂಬ ಅಭಿವೃದ್ಧಿ ಹೆಸರಿನಲ್ಲಿ ಸಾವಿರಾರು ಆದಿವಾಸಿ ಮಹಿಳೆಯರು ನೆಲೆ, ನೆಲ ಕಳೆದುಕೊಂಡು ಅತಂತ್ರರಾಗುತ್ತಿದ್ದಾರೆ. ಪರ್ಯಾಯ ಬದುಕು ಕಟ್ಟಿಕೊಳ್ಳಲು ಸೂಕ್ತ ಪರಿಹಾರ ಕಲ್ಪಿಸುವ ಬದಲು ಅವರಿಗೆ ಉಗ್ರಗಾಮಿಗಳೆಂಬ ಪಟ್ಟಕಟ್ಟಿ ಪೊಲೀಸರು ಹಿಂಸೆ ನೀಡಲು ಸರ್ಕಾರಗಳು ಅನುವು ಮಾಡಿಕೊಡುತ್ತಿವೆ.

• ಪ್ರಜಾತಂತ್ರದ ನಾಲ್ಕನೇ ಸ್ತಂಭವೆನಿಸಿಕೊಂಡಿರುವ ಮಾಧ್ಯಮ ಪ್ರತಿನಿಧಿಗಳು, ನ್ಯಾಯ ನೀಡುವ ನ್ಯಾಯಾಂಗದ ಪ್ರತಿನಿಧಿಗಳಾದ ನ್ಯಾಯಾಧೀಶರುಗಳೇ ಲೈಂಗಿಕ ದೌರ್ಜನ್ಯ ನಡೆಸಿದರೆ ಪೊಲೀಸು, ನ್ಯಾಯಾಂಗ ವ್ಯವಸ್ಥೆಯಲ್ಲಿ ನ್ಯಾಯ ಸಿಗುವ ಖಾತ್ರಿಯೇ ಇಲ್ಲವೆಂದಾದರೆ ನ್ಯಾಯಕ್ಕಾಗಿ ಮೊರೆ ಇಡುವುದಾದರೂ ಯಾರಲ್ಲಿ?

ಮಹಿಳಾ ಪ್ರತಿರೋಧದ ನೆಲೆಗಳು, ಹೋರಾಡುವ ಚೈತನ್ಯವೇ ದಾರಿ

ಕಳೆದ 3-4 ದಶಕಗಳಿಂದ ಮಹಿಳಾ ಚಳವಳಿ ನಿರಂತರವಾಗಿ ನಡೆಸಿಕೊಂಡು ಬಂದಿರುವ ಹೋರಾಟದ ಫಲವಾಗಿ ಮಹಿಳೆಯರ ಮೇಲಿನ ಹಿಂಸೆಯು ಇತ್ತೀಚಿನ ದಿನಗಳಲ್ಲಿ ಅಪಾರ ಪ್ರಮಾಣದಲ್ಲಿ ಬೆಳಕಿಗೆ ಬರುತ್ತಿವೆ. ಎಲ್ಲಾ ಅಡೆ-ತಡೆಗಳ ನಡುವೆಯೂ ಮಹಿಳೆಯರು ತಲೆ ಎತ್ತಿ ನಿಂತಿರುವುದಷ್ಟೆ ಅಲ್ಲ, ಇರುವ ಕಾನೂನಿನ ಚೌಕಟ್ಟಿನಲ್ಲೇ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ತಮ್ಮ ವಿವೇಕ, ಸ್ಥೈರ್ಯವನ್ನೇ ನೆಚ್ಚಿಕೊಂಡು ಪ್ರತಿರೋಧದ ನೆಲೆಗಳನ್ನು, ಭಿನ್ನ ನ್ಯಾಯ ಮತ್ತು ಶಿಕ್ಷೆಯ ಕಲ್ಪನೆಗಳನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಹೀಗೆ ಜಾಗೃತಗೊಂಡ ಮಹಿಳೆಯರು ಪ್ರಭುತ್ವದ ಮೇಲೆ ಒತ್ತಡ ಹಾಕುವ ನೈತಿಕ ಶಕ್ತಿಯಾಗಬೇಕು. ವಿಫಲಗೊಂಡ ನ್ಯಾಯವ್ಯವಸ್ಥೆಯನ್ನು ಬಡಿದೆಬ್ಬಿಸಬೇಕಲ್ಲದೆ, ನಿಷ್ಪಕ್ಷಪಾತವಾದ ನ್ಯಾಯ ಹಾಗೂ ಶಿಕ್ಷಾ ವ್ಯವಸ್ಥೆಗೂ ನಾಂದಿ ಹಾಡಬೇಕು. ಮರಣದಂಡನೆ, ಷಂಡರನ್ನಾಗಿಸುವುದು ದೌರ್ಜನ್ಯ, ಹಿಂಸೆಗೆ ಪರಿಹಾರವಲ್ಲ. ಹೆಣ್ಣನ್ನು ಕುರಿತ ಆರೋಗ್ಯಕರ ಮನೋಭಾವನೆ ಬೆಳೆಸುವುದು, ಮಾನವಜೀವಿಯಾಗಿ ಆಕೆಯನ್ನು ಹಾಗೂ ಆಕೆಯ ದುಡಿಮೆಯನ್ನು ಗೌರವಿಸುವುದು ನಿತ್ಯ ಕಲಿಯಬೇಕಾದ ಪಾಠವಾಗಬೇಕು. ಮಹಿಳೆಯರನ್ನು ಶೋಷಿಸುವ, ಹಿಂಸಿಸುವ, ಕೀಳಾಗಿ ಕಾಣುವ ಎಲ್ಲಾ ಮೂಢಾಚರಣೆಗಳನ್ನು ನಿಷೇಧಿಸಬೇಕು. ಇದು ಸಾಧ್ಯವಾಗುವುದು ನಮ್ಮ ಐಕ್ಯತೆಯಿಂದಷ್ಟೇ. ಇಂತಹ ಸನ್ನಿವೇಶದಲ್ಲಿ ನಾಡಿನ ಹಲವಾರು ಪ್ರಗತಿಪರ ಮಹಿಳಾ ಸಂಘಟನೆಗಳು ಮೈಸೂರಿನಲ್ಲಿ ಒಟ್ಟಿಗೆ ಆಚರಿಸುತ್ತಿರುವ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಐಕ್ಯತೆಯ ಸಂಕೇತವಾಗಿದೆ.

ಸಹಭಾಗಿ ಸಂಸ್ಥೆಗಳು

• ಸಮತಾ ವೇದಿಕೆ, ಮೈಸೂರು • ಶಕ್ತಿಧಾಮ • ಆರ್ ಎಲ್ ಎಚ್ ಪಿ • ಸಮತಾ ಅಧ್ಯಯನ ಕೇಂದ್ರ, ಮೈಸೂರು • ಜನ ಶಿಕ್ಷಣ ಸಂಸ್ಥೆ • ಒಡನಾಡಿ • ಆಶೋದಯ ಸಮಿತಿ • ಒಡಿಪಿ • ಎನ್ ಡಬ್ಲ್ಯು ಎಫ್ • ಎಐಎಂಎಸ್ ಎಸ್ • ವಿಸ್ಮಯ ಫೌಂಡೇಷನ್ • ಮೈಸೂರು ಯುತ್ ಫೋರಂ • ಧ್ವನಿ ಮಹಿಳಾ ಒಕ್ಕೂಟ • ಸ್ಪಂದನ ರೈತ ಸಂಘ, ಮಂಡ್ಯ • ವಿಮೋಚನಾ ಸಂಸ್ಥೆ ಬೆಂಗಳೂರು • ಸಮಾನತಾ ಮಹಿಳಾ ವೇದಿಕೆ, ಬೆಂಗಳೂರು • ಮಹಿಳಾ ಮುನ್ನಡೆ, ಮಂಡ್ಯ • ಜನವಾದಿ ಮಹಿಳಾ ಸಂಘಟನೆ • ಪಿಯುಸಿಎಲ್ • ಕರ್ನಾಟಕ ಲೇಖಕಿಯರ ಸಂಘ • ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ • ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) • ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘ • ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಮಂಗಳೂರು • ಮಹಿಳಾ ಸಂಪರ್ಕ ಜಾಲ, ಮಂಗಳೂರು • ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ • ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್ • ಸಂಗಮ, ಬೆಂಗಳೂರು • ಲೆಸ್ಬಿಟ್ • ಪರ್ಯಾಯ ಕಾನೂನು ವೇದಿಕೆ(ಎಎಲ್‌ಎಫ್), ಬೆಂಗಳೂರು • ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, (GATWU) ಬೆಂಗಳೂರು • ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಬೆಂಗಳೂರು, • ಸಮತಾ, ಬಿ.ಜಿ.ವಿ.ಎಸ್ • ಅಭಿಮತ, ಮಂಗಳೂರು • ದಲಿತ ಬಹುಜನ ಚಳವಳಿ • AIPWA • ಹೆಂಗಸರ ಹಕ್ಕಿನ ಸಂಘ, ಬೆಂಗಳೂರು • ನ್ಯಾಷನಲ್ ಫೆಡರೇಷನ್ ಫಾರ್ ವುಮೆನ್ • ಭಾರತೀಯ ಮಹಿಳಾ ಒಕ್ಕೂಟ • ಮಾನಸ ಬಳಗ, ಬೆಂಗಳೂರು ಹಾಗೂ ಇನ್ನಿತರ ಸಮಾನ ಮನಸ್ಕ ಪ್ರಗತಿಪರ ಸಂಘಟನೆಗಳು.

ಸಂಪರ್ಕ ಸಂಖ್ಯೆ

ಸುಮನ ಎನ್.: 9448177117

ಮ. ಸರಸ್ವತಿ: 9482642147

ಪ್ರೀತಿ ಶುಭಚಂದ್ರ: 9449323950

ರತಿ ರಾವ್: 9448051387

ಬನ್ನಿ, ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳಿ, ಆರೋಗ್ಯಕರ ಸಮಾಜ ಕಟ್ಟುವಿಕೆಯಲ್ಲಿ ಸಹಭಾಗಿಗಳಾಗೋಣ.

ಮಹಿಳಾ ದೌರ್ಜನ್ಯ

ಲಿಂಗತ್ವ-ಕಾನೂನು-ಪ್ರತಿರೋಧದ ನೆಲೆಗಳು

ವಿಚಾರ ಸಂಕಿರಣ

07.03.2014, ಶುಕ್ರವಾರ, ಕುವೆಂಪು ಕನ್ನಡ ಅಧ್ಯಯನ ಕೇಂದ್ರದ ನೂತನ ಸಭಾಂಗಣ

ಉದ್ಘಾಟನಾ ಗೋಷ್ಠಿ 11.00- 12.00

ಉದ್ಘಾಟನೆ :
ಪ್ರೊ.ಸಿ.ಬಸವರಾಜು, ಕುಲಸಚಿವರು, ಮೈಸೂರು ವಿವಿ.
ಮುಖ್ಯ ಅತಿಥಿಗಳಿಂದ ಪುಸ್ತಕ ಬಿಡುಗಡೆ :
ಸುನಂದಾ ಜಯರಾಮ್
ಶಿಖರೋಪನ್ಯಾಸ :
ಡಾ. ಕಾರಿನ್ ಕುಮಾರ್
ಅಧ್ಯಕ್ಷತೆ:
ಡಾ. ನೀಲಗಿರಿ ತಲವಾರ್

ಗೋಷ್ಠಿ-1 12.00-1.00

ಅತ್ಯಾಚಾರ ಕಾನೂನು ಮತ್ತು ವಯಸ್ಸು - ಬಾನು ಮುಷ್ತಾಕ್
ಸಂವಾದದಲ್ಲಿ:
- ಶಕುನ್
- ಮಲ್ಲಿಗೆ
- ಬಾಬು ರಾಜ್

ಗೋಷ್ಠಿ-2 1.00-2.00

ಲೈಂಗಿಕತೆ ಮತ್ತು ಹಿಂಸೆ-ಒಂದು ಭಿನ್ನ ಆಯಾಮ - ಅಕ್ಕೈ ಪದ್ಮಶಾಲಿ
ಸಂವಾದದಲ್ಲಿ :
- ಸೋನು ನಿರಂಜನ್
- ಅರವಿಂದ್ ನಾರಾಯಣ್
- ಡಾ. ವಸುಂಧರಾ ಭೂಪತಿ

ಗೋಷ್ಠಿ - 3 2.30-3.30

ಪರೀಕ್ಷಾ ವಿಧಾನ ಮತ್ತು ಕಾನೂನು - ಡಾ.ಎಚ್.ಎಸ್.ಅನುಪಮಾ
ಸಂವಾದದಲ್ಲಿ:
- ರೇಣುಕಾ ಹೆಳವರ
- ಮೈತ್ರೆಯಿ
- ನವೀನ್ ಸೂರಿಂಜೆ

ಗೋಷ್ಠಿ - 4 3.30-4.30

ಜಾತಿ ಮತ್ತು ವರ್ಗ ದೌರ್ಜನ್ಯ: ಮಹಿಳಾ ಪ್ರತಿರೋಧದ ನೆಲೆಗಳು
- ಡಾ. ಅರವಿಂದ ಮಾಲಗತ್ತಿ
- ಡಾ. ಮೀನಾಕ್ಷಿ ಬಾಳಿ

'ವಿಮೆನ್ ಇನ್ ಬ್ಲಾಕ್' - 07.03.2014, ಸಂಜೆ 5.30, ಗಾಂಧಿ ಚೌಕದಿಂದ. ಪಂಜು ಮತ್ತು ಆಕಾಶ ದೀಪ ಬಿಡುವುದರೊಂದಿಗೆ ಕ್ಯಾಂಡಲ್ ಲೈಟ್ ವಿಜಿಲ್.

08.03.2014 : ಶನಿವಾರ

ಹಕ್ಕೊತ್ತಾಯ ಜಾಥಾ ಮತ್ತು ಬಹಿರಂಗ ಸಮಾವೇಶ


ಜಾಥಾ: ಅರಮನೆ ಮೈದಾನದಿಂದ ಬೆಳಿಗ್ಗೆ 9 ಗಂಟೆಗೆ

ಚಾಲನೆ: ಡಾ. ಮೀರಾ ನಾಯ್ಕ್, ಡಾ. ವಿಜಯಾ, ವಿಜಯಾ ದಬ್ಬೆ, ಸಿ. ಜಿ. ಮಂಜುಳಾ, ಡಾ. ಸಬಿಹಾ ಭೂಮಿಗೌಡ, ಮರ್ಲಿನ್ ಮಾರ್ಟಿಸ್ ಹಾಗೂ ಮೈಸೂರು ಮತ್ತು ಕರ್ನಾಟಕದ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಪ್ರತಿನಿಧಿಗಳಿಂದ.

ಸಮಾವೇಶ ಉದ್ಘಾಟನೆ: ಮಣಿಪುರದ ಚಿತ್ರಾ ಅಹಾಂತೆಮ್, ಲೋರೆಂಬಮ್ ನ್ಗಾಂಬಿ ದೇವಿ, ತಾಕೆಲ್ಲಂಬಮ್ ರೇಣುಬಾಲಾ ದೇವಿ.

ಮಹಿಳಾ ವಿಶೇಷಾಂಕ

ಬಾ! ಜೀತದ ನಾವೆ ಹತ್ತು



ಖ್ಯಾತ ಇಂಗ್ಲಿಷ್ ಲೇಖಕಿ-ಕವಿಯತ್ರಿ ಮೀನಾ ಕಂದಸಾಮಿ ಅವರಿಂದ ಮೀಸೆ ಮೊಳೆತು ದೇಶ ಕಾಣದ ತರುಣ ಭಾರತಕ್ಕೊಂದು ಬಹಿರಂಗ ಪತ್ರ

ಹಾಯ್! ಯುವಸ್ಥಾನದ ಪ್ರಜೆಯೇ,

ಎಲ್ಲರ ಬಾಯಲ್ಲೂ ನಿಂದೇ ಮಾತು ಕಣೋ. ಅದಕ್ಕೆ ನಿನ್ನ ಜೊತೆ ಒಂದಿಷ್ಟು ಮಾತನಾಡೋಣ ಅನಿಸ್ತು.

ನೀನು ವಿದ್ಯಾರ್ಥಿ. ಉನ್ನತ ಶಿಕ್ಷಣ ಪಡೆಯೋ ಆಸೆ ಇಟ್ಕೊಂಡವನು; ಆದ್ರೆ ವಿಶ್ವವಿದ್ಯಾಲಯಗಳಲ್ಲಿ ಬಡ ವಿದ್ಯಾರ್ಥಿಗಳ ಕೈ ಕಾಲು ಮುರಿದು, ಕೊಂದುಹಾಕೋ 'ಶೈಕ್ಷಣಿಕ ಭಯೋತ್ಪಾದನೆ' ಬಗ್ಗೆ ನೀನು ತಲೆ ಕೆಡಿಸ್ಕೊಳ್ಳೋಲ್ಲ; ಇಲ್ಲಿ ಉಳ್ಳೋರಿಗೆ ಮಾತ್ರ ಮಣೆ ಹಾಕ್ತಾರೆ ಅನ್ನೋದನ್ನು ಒಪ್ಕೊಳ್ಳೋಲ್ಲ. ಬಡತನ ನಿನ್ನ ಹತ್ರ ಸುಳಿಯೋದೇ ಇಲ್ಲ ಅನ್ನೋ ಗತ್ತಲ್ಲಿ ಓಡಾಡ್ಕೊಂಡಿರ್ತೀಯ. ಇಲ್ಲದೋರ ದುಃಖ ನಿನ್ನ ತಟ್ಟೋಲ್ಲ, ಸ್ಲಂ ಸವರಿ ಹಾಕಿ, ಮನೆ ಕಳಕೊಂಡು ಬೀದಿಪಾಲಾಗೋ ಸ್ಥಿತಿ ನಿನಗೆ ಎಂದೂ ಬರಲ್ಲ.

ತಳಕುಬಳುಕಿನ ಬಣ್ಣ ಬಳ್ಕೊಂಡು ಚಮಕಾಯಿಸೋ 'ಯುವಸ್ಥಾನ'ನಲ್ಲಿ ನೀನೂ ಒಬ್ಬ ಅಂತ ಎದೆ ಸೆಟ್ಟಿಸ್ಕೊಂಡು ಅಡ್ಡಾಡ್ತೀಯ; ಮುಂದಿನ ದಶಕದಲ್ಲಿ ದೇಶದ ಉದ್ಯೋಗ ಶಕ್ತಿಗೆ ಸೇರೋ 12 ಕೋಟಿ ಯುವಕರಲ್ಲಿ ನಾನು ಒಬ್ಬ ಕಣ್ರೀ ಅಂತ ಬೀಗ್ತೀಯ. ಆದರೆ, ದುಡಿಯುವ ವರ್ಗದ ಸ್ಥಿತಿಗತಿಯ ಬಗ್ಗೆ ಒಂಚೂರು ಜ್ಞಾನವಿಲ್ಲದ ನೀನು ಜೀತದ ಮಾರುಕಟ್ಟೆಯ ಒಬ್ಬ ಗಿರಾಕಿ ಅನ್ನೋ ನೆದರು ಕೂಡ ನಿಂಗಿಲ್ಲ. ಬಾ ಯುವರಾಜ! ಜೀತದ ನಾವೆ ನಿನಗಾಗಿ ಕಾಯುತ್ತಿದೆ. ಭಾರತದ ಹಣಕಾಸು ವ್ಯವಹಾರ ಸರಕ್ಕಂತ ಜಾರಿ ಬಿದ್ದಾಗ, ಮೊದಲು ತಲೆ ಒಡೆಯೋದು ನಿಂದೇ, ನೆನಪಿರಲಿ.

ಕಾಮತಲ್ಲಣಗಳಲ್ಲಿ ತುಯ್ಯುತ್ತಿರೋ ಯುವಕ ಅಂತ ನಿನ್ಮೇಲೆ ನಿಂಗೆ ಮರುಕ ಅಲ್ವಾ? ಅಯ್ಯೋ ಪಾಪ! ಹಿರಿಯರ ಹುಕುಮ್ಮುಗಳು, ಕೊಲೆ ಬೆದರಿಕೆಗಳಿಗೆ ಮುಚ್ಕೊಂಡು 'ವೈವಾಹಿಕ ವೆಬ್‌ಸೈಟ್'ಗಳಲ್ಲಿ ತಲೆ ಮರೆಸಿಕೊಳ್ತೀಯ. ಜಾತಿ ಗುಂಡಿ ಒತ್ತಿದ್ರೆ 450 ಉಪಜಾತಿಗಳ ಪಟ್ಟಿ ಬಿಚ್ಕೊಳ್ಳುತ್ತೆ. ಇದನ್ನೆಲ್ಲಾ ಹಿರಿಯರ ಒತ್ತಡಕ್ಕೆ ಮಣಿದು ಮಾಡ್ಬೇಕಾಗಿದೆ ಅಂತ ಗೊಣಗ್ತೀಯ. ಜಾತಿ ಅನ್ನೋದೆ ಇರ್ಬಾರ್ದು ಕಣ್ರೀ ಅನ್ನೋದು ನಿನ್ನ ಉದ್ಧಾತ ನಂಬಿಕೆ ಅಂತೀಯ. ದಲಿತರು, ಆದಿವಾಸಿಗಳಿಗೆ ಕೊಡ್ತಿರೋ ಮೀಸಲಾತಿ ಖೈದು ಮಾಡಿದ್ರೆ ಜಾತಿ ತಂತಾನೆ ನಾಶ ಆಗುತ್ತೆ ಅನ್ನೋದು ನಿನ್ನ ವಾದ; ಅದ್ಕೆ ಬೇಕಾದಷ್ಟು ಉದಾಹರಣೆಗಳೂ ನಿನ್ನತ್ರ ಇವೆ ಅಂತೀಯ.

ಭಾರತಕ್ಕೆ ಕೇಡುಂಟು ಮಾಡ್ತೀರೋರು ಪಾಕಿಸ್ತಾನದಿಂದ ದಂಡೆಯಾಗಿ ನುಗ್ಗುತ್ತೀರೋ ಭಯೋತ್ಪಾದಕರು ಅಂತಲೂ ನಿನ್ನ ಅಭಿಪ್ರಾಯ. ಆದರೆ ಖೈರ್ಲಾಂಜಿ, ಗಡ್‌ಚಿರೋಲಿ ಅಥವಾ ಕೂಡಕುಲಂಗಳ ಕಥನ ನಿಂಗೆ ಗೊತ್ತೇ ಇಲ್ಲ; ನಿನ್ನ ನವಿರು ಮಾತುಕತೆಯಲ್ಲಿ ಸುಳಿಯಲು ಸೋತಿರುವ, ನಾಲಿಗೆಯಲ್ಲಿ ಹೊರಳದ ಸ್ಥಳನಾಮಗಳಲ್ಲವೇ ಅವು! ನಿಂಗೆ ನೆತ್ತಿ ಮೇಲೆ ಕಣ್ಣು- ಕಾಣೋದು ಪಾಸ್‌ಪೋರ್ಟು, ವೀಸಾ ಹಾಗು ನಿನ್ನ ಬಕರಿಗೆ ಕಾದುನಿಂತಿರೋ ಕಸಬುದಾರಿಕೆ. ನೀನು ಭಾರತದ ಹೊಳೆಹೊಳೆವ, ಕೆನೆಕೆನೆವ ನಿರ್ಯಾತ ಸರಕು ಕಣೋ. ಮೂರು ಕಾಸಿಗೆ ನಿನ್ನ ಆತಮವನ್ನೇ ಮಾರಿಕೊಂಡಿರುವೆ. ಆ ಮೂರು ಕಾಸಿಗೆ ನಿನ್ನ ಅಸ್ತಿತ್ವವನ್ನೇ ನೀನು ಮಾರಿಕೊಂಡಿರುವೆ; ನಿನ್ನ ನಯಮಾತಿನ ವರಸೆ ಚಿತಾರವೆತ್ತದಂತೆ ನಿನ್ನ ಬಾಯನ್ನು ಮುಚ್ಚಿದೆ.

ನೀನು ನಿನ್ನ ಮಾತೃ ಭಾಷೆಯನ್ನು ಬಹುತೇಕ ಮರೆತಿರುವೆ. ಕಾಸು ತರೋ ಕಂಪ್ಯೂಟರ್‌ನ ಜಾವ, ಸಿ ++ ಮತ್ತು ಇಂಗ್ಲಿಷ್ ಭಾಷೆಗಳನ್ನು ಮಾತ್ರ ಕಲಿತಿರುವೆ. ಎರಡೂವರೆ ಭಾಷೆಗಳ ಪಂಡಿತನಾದರೂ, ನಿನ್ನ ಗಂಟಲಿಂದ ದನಿಯೇ ಹೊರಡೋದಿಲ್ಲ, ಹಿಂಸೆಯನ್ನು ತ್ಯಜಿಸಿದ ಪುಣ್ಯಾತ್ಮರ ಮಾರ್ಗದಲ್ಲಿರುವವನಲ್ಲವೇ ನೀನು, ಆದ್ದರಿಂದ ಹಿಂಸೆಯ ವಿರುದ್ಧ ಎತ್ತುವ ಧ್ವನಿಗಳನ್ನೂ ತ್ಯಜಿಸಿರುವೆ.


ಅಭಿವೃದ್ಧಿಯ ಮಂತ್ರವೇ ಮೋಕ್ಷದ ಮಾರ್ಗವೆಂದು ಮುಗ್ಧನಾಗಿ ನಂಬಿರಬೇಕು ನೀನು. ಕಾಸನ್ನು ಸುರಿಸೋ ಅಪಾರ ಮೋಹಕ ದಿವ್ಯಶ್ರೀ, ನೀನು ಮರುಳಾಗಿರುವಿ ಅಂತ ಕಾಣುತ್ತೆ, ಸರಕಾರಗಳ ಬೊಗಳೆಯ ಈ ಅಭಿವೃದ್ಧಿ ರಾಕ್ಷಸನ ಕಾಣದ ಉಳ್ಳು, ಜನರ ರಕ್ತ ಕುಡಿದು, ಹೆಣಗಳ ಮಾಂಸ ಮೇದು, ಟನ್ನುಗಟ್ಟಲೆ ಬಾಕ್ಸೈಟ್, ಕಬ್ಬಿಣದ ಅದಿರುಗಳ ಗಬಗಬ ನುಂಗಿ ಕೊಬ್ಬೋಂತ ಜೀವಿ ಕಣೋ ಅದು. ಬಹುಶಃ ನಿನಗದರ ಅರಿವಿಲ್ಲ, ಆ ರಾಕ್ಷಸನ ನಾಮಾಂಕಿತ ಎಸ್ಸಾರ್ ಉರೂಫ್ ವೇದಾಂತ ಯಾನೇ ಪೋಸ್ಕೋ. ಈ ರಕ್ಕಸನೂ, ಅವನ ಸೋದರ ಸಂಬಂಧಿಯಾದ ಪ್ರಜಾ ಪ್ರಭುತ್ವವೂ ಒಟ್ಟಾಗಿ ಹಳ್ಳಿಯ ಮಂದಿ ಮರಳಾಗುವಂಥ ಸಮ್ಮೋಹಿನಿ ಕತೆಗಳನ್ನು ಹೆಣೆಯುತ್ತಿರುತ್ತವೆ ಕಣೋ.

ನೀನೂ ನಿಮ್ಮ ಗೃಹ ಸಚಿವನನ್ನೇ ಹೋಲುತ್ತಿ ಬಿಡಪ್ಪ: ಕಾಶ್ಮೀರ, ಈಶಾನ್ಯ ರಾಜ್ಯಗಳು, ಶ್ರೀಲಂಕ, ಬಾಂಗ್ಲಾದೇಶ ಮತ್ತೂ ಅಷ್ಟೂ ದೂರದ ಆಫ್ರಿಕಾದ ನಾಡುಗಳಲ್ಲಿ ನಿಮ್ಮ ಸೈನ್ಯ ನಡೆಸುತ್ತಿರೋ ಅತ್ಯಾಚಾರಗಳ ಬಗ್ಗೆ ತಿಳಿವಳಿಕೆಯೇ ಇಲ್ಲದೆ, 'ದೇಶಪ್ರೇಮಿ' ಎಂದು ಎದೆ ಸೆಟಿಸೋನು ನೀನು. ನೀನು ತೆರೋ ತೆರಿಗೆ ಹೇಗೆ ತಲೆಕೆಟ್ಟ ಸೈನ್ಯ ಕಟ್ಟುವ ಯೋಜನೆಗಳಿಗೆ ಪೋಲಾಗುತ್ತಿದೆ ಎಂದು ಅರಿಯದೆ ಬಾಯಲ್ಲಿ ಬಟ್ಟೆಟ್ಟು ಕೂತೋನೇ, ತಿಳಿದಿದೆಯಾ ಈ ವರಸೆ: ಮಾವೋವಾದಿ ನಾಯಕ ಆಜಾದ್‌ನ ನಕಲಿ ಎನ್ಕೌಂಟರಿನ ವಿಚಾರಣೆಯಲ್ಲಿ ಸುಪ್ರೀಂ ಕೋರ್ಟಿನ ನ್ಯಾಯಾಧೀಶರು "ತನ್ನ ಮಕ್ಕಳ ಕೊಲೆಯ ರಕ್ತದ ಕಲೆಯ ಕಳಂಕವನ್ನು ನಮ್ಮ ಗಣರಾಜ್ಯವು ಹೊತ್ತುಕೊಳ್ಳೋದು ಸರಿಯಲ್ಲ" ಎಂದದ್ದೇ ತಡ ಪ್ರಭುತ್ವವು ನವೀನ ಮಾರ್ಗವನ್ನು ಕಂಡುಕೊಂಡಿದೆ; ಮಕ್ಕಳು ತಮ್ಮ ವೆಚ್ಚದಲ್ಲಿ ತಾವೇ ಮದ್ದುಗುಂಡುಗಳ ಕೊಂಡು ಒಬ್ಬರಿನ್ನೊಬ್ಬರು ಕೊಂದುಕೊಳ್ಳೋ ವ್ಯವಸ್ಥೆ ಮಾಡಿದೆ. ಗಣರಾಜ್ಯದ ಕೈ ಸ್ವಚ್ಛವಾಗಿರುತ್ತೆ, ನಿನ್ನ ಕೈ ರಕ್ತಸಿಕ್ತವಾಗಿರುತ್ತೆ. ಕಳೆದ ತಿಂಗಳು ಪಾರಮಕುಡಿಯಲ್ಲಿ ಏಳು ದಲಿತರನ್ನು ಕೊಂದ ಪೊಲೀಸರ ಗುಂಡಿಗೆ ನೀನು ಚಂದಾ ಕೊಟ್ಟಿರಬಹುದು ನೋಡು.

ಇಡೀ ಸಮಾಜದಲ್ಲಿ ತುಂಬ ಅಸಂತೃಪ್ತಿ ತುಂಬಿದೆ. ಆದರೆ ಷಾಪಿಂಗ್ ಮಾಲ್‌ಗಳಲ್ಲಿ ಅಲೆದಾಡುತ್ತಿರುವ ನಿನಗೆ, ಈ ಅಸಂತೃಪ್ತಿಗೆ ಕಾರಣವಾದ ಸರಕಾರಕ್ಕೆ ನ್ಯಾಯವಂತವಾಗಿ ನಡ್ಕೋಳಿ ಅಂತ ಹೇಳೋಕೆ ಸಮಯವಿಲ್ಲ, ನಿನಗೆ ನೀನೇ ನಿಜವನ್ನು ಕಂಡರಿಯದೆ, ವಾಸ್ತವವನ್ನು ಹೇಗೆ ಅಧಿಕಾರಸ್ಥರ ಮುಖಕ್ಕೆ ಹಿಡಿಯಬಲ್ಲೆ? ಅಣೆಕಟ್ಟುಗಳ ನಿರ್ಮಾಣದಿಂದ ನಿರಾಶ್ರಿತರಾದವರು ಯಾರು, ಅವರ ಗತಿ ಏನಾಗಿದೆ ಅನ್ನೋದು ನಿನಗೆ ತಿಳಿದಿಲ್ಲ, 'ಆಪರೇಷನ್ ಗ್ರೀನ್‌ಹಂಟ್'ಗೆ ಬಲಿಯಾದವರ ನೆನೆದು ನಿನ್ನ ಕಣ್ಣಲ್ಲಿ ಹನಿ ನೀರು ಬರುವುದಿಲ್ಲ. ಭಾರತದ ಕರಾವಳಿ ಪಡೆಯ ಕಾವಲು ಕಣ್ಣೆದುರಲ್ಲೇ ಶ್ರೀಲಂಕಾ ನೌಕಾದಳದವರ ಗುಂಡಿಗೆ ಬಲಿಯಾದ ನೂರಾರು ತಮಿಳು ಮೀನುಗಾರರ ಬಗ್ಗೆ ನಿನಗೆ ಯಾವ ಕಾಳಜಿಯೂ ಇಲ್ಲ, ನಿನಗೆ ನಿನ್ನ ಪ್ರಭುತ್ವದ ವಿದೇಶಾಂಗ ನೀತಿಯ ಬಗ್ಗೆ ಅರಿವಿಲ್ಲ; ನಿನ್ನ ಸರಕಾರ, ಶ್ರೀಲಂಕಾದ ಪ್ರಭುತ್ವಕ್ಕೆ ಶಸ್ತ್ರಾಸ್ತ್ರವನ್ನೂ, ಗುಪ್ತಚರ ಮಾಹಿತಿಯನ್ನೂ ಕೊಟ್ಟು, ಮೇ 2009ರಲ್ಲಿ ಸಾವಿರಾರು ತಮಿಳರ ನರಮೇಧಕ್ಕೆ ಸಾಥ್ ನೀಡಿತ್ತು ಎಂಬುದೂ ತಿಳಿದಿಲ್ಲ, ಆ ಮುಲ್ಲವೈಕ್ಕಲ್ ನರಮೇಧಕ್ಕೆ ಬಲಿಯಾದವರೆಲ್ಲ ಭಯೋತ್ಪಾದಕ ಎಲ್ಟಿಟಿಇ ಟೈಗರುಗಳು ಎಂದು ನಿನ್ನ ಸರಕಾರ ಸಾರುವ ಬೊಗಳೆಯನ್ನು ನೀನು ನಂಬುತ್ತೀಯ. ಬುಲೆಟ್ ಸಿಕ್ತವಾದ ಎರಡುವರೆ ಸಾವಿರಕ್ಕೂ ಮಿಕ್ಕಿದ ಕಾಶ್ಮೀರದ ಯುವಕರ ಶವಗಳನ್ನು ಸಾಮೂಹಿಕವಾಗಿ ಹೂಳಲಾದ ಖಬರಸ್ಥಾನವನ್ನು ಕಂಡಾಗಲೂ ನಿನಗೆ ಆತಂಕವಾಗುವುದಿಲ್ಲ ಕಣೋ.

ಕಾಶ್ಮೀರದ ಸ್ವಾಯತ್ತತೆಗಾಗಿ ಜನಾಭಿಪ್ರಾಯ ಸಂಗ್ರಹ, ಶ್ರೀಲಂಕಾದ ತಮಿಳರಿಗೆ ಒಂದು ಏಳಂ ಯಾಕೆ ಜರೂರಿನದಾಗಿದೆ ಎಂದು ಎಂದಾದರೂ ನೀನು ಯೋಚಿಸಿರುವೆಯ? ಸ್ವಾಯತ್ತತೆಯ ಆಶಯದಲ್ಲಿ ಸ್ವತಂತ್ರವಾಗಲು ಬಯಸುವ ರಾಜ್ಯಗಳ ಬಗ್ಗೆ ನಿನಗೆ ಅನುಕಂಪವಿಲ್ಲ. ತೆಲಂಗಾಣದ ಪ್ರತ್ಯೇಕತೆಯ ಇಚ್ಛೆ ಮಾರಕವಾದದ್ದು ಎಂಬ ಗಿಳಿಪಾಠವನ್ನು ಮಾತ್ರ ನೀನು ಮನನ ಮಾಡಿಕೊಂಡಿರುವೆ; ನಿನ್ನ ಸೀಮಿತ ಲೋಕಜ್ಞಾನದ ಪ್ರಕಾರ 'ಪ್ರತ್ಯೇಕತೆ'ಯ ಬೇಡಿಕೆ ಕೆಡುಕಿನದು, 'ಸ್ವಾಯತ್ತತೆ' ಆತ್ಮಹತ್ಯೆ.

ಈ ನಮೂನೆಯ ಪ್ರತಿರೋಧಗಳನ್ನು ಅರಿಯುವ ಸಂಯಮ ನಿನಗಿಲ್ಲ. ನಿನ್ನ ಅರಿವನ್ನು ರೂಪಿಸೋದು NDTV ಹಾಗು CNN-IBNನಂಥ ಚಾನಲುಗಳು. ಅವರು ರೀಲು ಬಿಡೋ ಸುದ್ದಿಗಳಿಗೆ, ರಿಯಾಲಿಟಿ ಷೋಗಳಿಗೆ ನಿನ್ನ ಹೃದಯ ಮಿಡಿಯುತ್ತದೆ. ಅಣ್ಣಾ



ಹಜಾರೆಯಂಥ ಗಾಂಧಿ ನಕಲುಗಳಿಗೆ ನೀನು ಜೈ ಎನ್ನುತ್ತೀಯ. ಭ್ರಷ್ಟಾಚಾರದ ವಿರುದ್ಧ ಧರ್ಮ ಹೋರಾಟಕ್ಕೆ ಟೊಂಕಕಟ್ಟಿ ನಿಂತ ವೀರ ನೀನು. 'ಫ್ಯಾಬ್ ಇಂಡಿಯಾ' ಮಳಿಗೆಯ ಕುರ್ತ ನಿನ್ನ ಬಂಡಾಯದ ಸಮವಸ್ತ್ರ. ಉರಿಯುವ ಮೊಂಬತ್ತಿ ನಿನ್ನ ಕೈಲಿರುವ ಅತಿ ಮಾರಕ ಅಸ್ತ್ರ. ನಿನ್ನ ಹಾರಾಟವೆಲ್ಲ ಇಂಟರ್ನೆಟ್ಟಿನಲ್ಲಿ. ರಾಜಕೀಯ ಪುಢಾರಿಗಳು ಕೂಡಿ ಹಾಕಿದ ಕಪ್ಪು ಹಣವನ್ನು ದೇಶದೊಳಕ್ಕೆ ವಾಪಾಸು ತರಬೇಕೆಂದು ನೀನು ಹಾರಾಡುತ್ತೀಯ, ಆದರೆ ಕಪ್ಪು ಹಣದ ಒರತೆಯನ್ನೇ ಬತ್ತಿಸುವ ತಾಕತ್ತನ್ನು ನೀನು ತೋರುವುದಿಲ್ಲ. ನಿನ್ನ ನಯವಂತಿಕೆಯೇ ನಿನ್ನ ರಕ್ಷಾಕವಚ. ನಕಲಿ ಎನ್‌ಕೌಂಟರ್‌ಗಳ ಮಡಿದ ಗಣಿ ವಿರೋಧಿ ಹೋರಾಟಗಾರರ ಸ್ಥಿತಿ ನಿನಗೆ ಎಂದೂ ಬರುವುದಿಲ್ಲ. ನೀನು ಎಂದೂ ಬಲವಂತವಾಗಿ ಅದೃಶ್ಯನಾಗುವುದಿಲ್ಲ, ನಿನಗೆ ಎಂದೂ ಅರೆ-ವಿಧವೆಯ ಸ್ಥಿತಿ ಬರುವುದಿಲ್ಲ. ನಿನ್ನ ನಯವಾದ ಹೋರಾಟದ ಎಂದೂ ಪ್ರಭುತ್ವಕ್ಕೆ ಸವಾಲು ಅಲ್ಲವಾದ್ದರಿಂದ ನೀನು ಪೊಲೀಸರ ಗುಂಡಿಗೆ ಬಲಿಯಾಗೋದಿಲ್ಲ. ಪೊಲೀಸರ ಸುಪರ್ದಿನಲ್ಲಿ ಚಿತ್ರಹಿಂಸೆ, ಅತ್ಯಾಚಾರ, ಕೊಲೆಗಳಿಗೆ ನೀನೆಂದೂ ತುತ್ತಾಗೋದಿಲ್ಲ. ಪ್ರಮುಖವಾದ ಪ್ರಶ್ನೆಗಳನ್ನು ಕೇಳದ ನೀನು ಎಂದೂ ಜೀವವನ್ನು ಪಣಕ್ಕಿಟ್ಟು ಹೋರಾಡುವವನಲ್ಲ, ನೀನು ಸುರಕ್ಷಿತವಾಗಿರಬೇಕೆಂಬ ಹಂಬಲವೇ ಈ ದೇಶಕ್ಕೊಂದು ಶಾಪ ಕಣೋ.

ಯಾರೋ ಸೂತ್ರ ಹಿಡಿದಿರುವ ಪ್ರದರ್ಶನದಲ್ಲಿ ಆಕ್ರೋಶ ವ್ಯಕ್ತಪಡಿಸುವ ಬೆದರುಬೊಂಬೆ ನೀನು. ಕೊಳ್ಳುಬಾಕುತನದ ಕೂಸೇ, ಅರಿತು, ಸಂಘಟಿಸಿ, ಹೋರಾಡುವುದು ನಿನ್ನ ಅರಿವಿಗೆ ಮೀರಿದ್ದು. ಉದ್ಯಮಪತಿಗಳ ತಾಳಕ್ಕೆ ಕುಣಿಯುವ ಭಿನ್ನಮತೀಯ ನೀನು. ಟೀಂ ಅಣ್ಣಾದ ಮಾರಾಟದ ಸರಕೇ, ಎಲ್ಲ ನಗರಗಳಲ್ಲೂ ನಿನ್ನ ಪ್ರದರ್ಶನದ ಬಣ್ಣ ಒಂದೇ. ನೀನು ವ್ಯವಸ್ಥೆಯನ್ನು ಎದುರು ಹಾಕಿಕೊಂಡು, ಅದನ್ನು ಬದಲಿಸುವ ಛಾತಿಯನ್ನು ಯಾವಾಗ ಪಡೆಯುತ್ತೀಯ? ನಿನ್ನ ಪ್ರತಿಭಟನೆಯು ವ್ಯವಸ್ಥೆಯ ವಿರುದ್ಧದ ಮಡುಗಟ್ಟಿದ ಆಕ್ರೋಶದ ಸ್ಫೋಟವಾಗೋದು ಎಂದು? ಯಾರ ಹಿತಾಸಕ್ತಿಗೂ ಬಲಿಬೀಳದ ಚಳವಳಿಗಾರನಾಗುವೆ ಎಂದು? ನಮ್ಮ ದೇಶದ ಹೊರತು ಬೇರಾವ ದೇಶವೂ ಅಂಥಾ ಕ್ರಾಂತಿಯ ನಿರೀಕ್ಷೆಯಲ್ಲಿಲ್ಲ, ನಮ್ಮ ದೇಶಕ್ಕಿರುವಷ್ಟು ಕ್ರಾಂತಿಯ ಜರೂರತ್ತು ಬೇರಾವ ದೇಶಕ್ಕೂ ಇಲ್ಲ. ಬೇರೆ ಯಾರೋ ಕಟ್ಟಿಕೊಡುವ ಕ್ರಾಂತಿಯಲ್ಲವಿದು. ಎಲ್ಲಿದೆ ನಿನ್ನ ರಣೋತ್ಸಾಹ? ಎಲ್ಲಿದೆ ನನ್ನದು?

ನಾನೇನೂ ಸುಭಗಳಲ್ಲ, ಈ ಪತ್ರ ಬರೆಯುವಾಗ ತಪ್ಪು ಮಾಡಿದ ಭಾವ ನನಗೂ ಇದೆ. ಈ ಪತ್ರದಲ್ಲಿ ಕಕ್ಕಿರುವ ಕೋಪ, ತಪ್ಪೊಪ್ಪಿಗೆಯಷ್ಟೇ. ನಾನೇ ನೀನಾಗಿರಬಹುದು ಎಂಬ ಭಯವೂ ನನಗಿದೆ. ನನ್ನ ಕನಸು ಕಟ್ಟೆಯೊಡೆಯುತ್ತಿದೆ, ನನ್ನ ಅಲಕ್ಷ್ಯ ನನ್ನನ್ನು ಕೊಲ್ಲುತ್ತಿದೆ. ನನ್ನ ಪ್ರತಿ ದೌರ್ಬಲ್ಯದಲ್ಲೂ ನೀನಿದ್ದೀಯ. ನನಗಿಂತ ನಿನಗೆ ಹೆಚ್ಚು ಸಂಕಲ್ಪ ಬಲವಿರಬಹುದು ಎಂಬ ನಂಬಿಕೆಯಲ್ಲಿ ಈ ಪತ್ರ ಬರೆದಿರುವೆ. ಒಂದಲ್ಲ ಒಂದು ದಿನ ನೀನು ಎದೆಗವಚ ಧರಿಸಿ ಸಮರಶೀಲನಾಗಬಹುದು; ಸ್ವಹಿತಾಸಕ್ತಿ ತೊರೆದು ಜನರ ದನಿಯಾಗಬಹುದು; ಒಂದು ದಿನ ನೀನು ಎಲ್ಲ ಅನ್ಯಾಯಗಳನ್ನೂ ಎದುರು ಹಾಕಿಕೊಂಡು, ಎಲ್ಲಾ ದಬ್ಬಾಳಿಕೆಯನ್ನು ಬುಡಸಹಿತ ಕಿತ್ತು ಹಾಕಬಹುದು. ಒಂದಲ್ಲ ಒಂದು ದಿನ ನಿನ್ನ ತ್ಯಾಗ ನಮ್ಮನ್ನು ವಿಮೋಚನೆಗೊಳಿಸಬಹುದು.

ಈ ಪತ್ರ ಇಷ್ಟವಾಗಿದ್ದರೆ ಎಂದಿನಂತೆ 'ಲೈಕ್' ಗುಂಡಿ ಒತ್ತುವ ಅಭ್ಯಾಸ ಬಿಡು. ಹೋರಾಡೋದನ್ನು ಕಲಿ. ವಿಮೋಚನೆಯ ದಾರಿ ಹುಡುಕು.

ನಿನ್ನ ಪ್ರೀತಿಯ
ಎಂ

ಇಂಗ್ಲಿಷ್ ಮೂಲ: ಮೀನಾ ಕಂದಸಾಮಿ
ಕನ್ನಡಕ್ಕೆ: ಫಿಜೂಲ್ ರಾಜ್

ಅರುಣಾ ಮತ್ತು ದಯಾಮರಣ!

ಅರುಣಾ ಶಾನಭಾಗ್!!


ಶರಶಯ್ಯೆಯಲ್ಲಿ ಇದ್ದೂ ಇಲ್ಲದಂತಿರುವ ಬರೋಬ್ಬರಿ 66 ವರ್ಷದ ಈ "ಅಜ್ಜಿ" ಈಗ ಮತ್ತೆ ಸುದ್ದಿ ಆಗಿದ್ದಾಳೆ. ಮುಂಬೈನ ಕೆಇಎಂ ಆಸ್ಪತ್ರೆಯ ಮಂಚವೊಂದರಲ್ಲಿ ಕಳೆದ 41 ವರ್ಷಗಳಿಂದ ಕೋಮಾದಲ್ಲಿ ನರಳುತ್ತಿರುವ ಆಕೆಯ ಜೀವ- ಜೀವನ ಆಗಾಗ ರಾಷ್ಟ್ರದಾದ್ಯಂತ ತಲ್ಲಣ ಮೂಡಿಸುತ್ತಿದೆ. ಜೀವಚ್ಛವದಂತಾಗಿರುವ ಅರುಣಾಳಿಗೆ ದಯಾಮರಣ ಕರುಣಿಸಬೇಕೆಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗಿರುವ ಅರ್ಜಿ ಈಗ ಸಂವಿಧಾನಪೀಠಕ್ಕೆ ವರ್ಗಾಯಿಸಿರುವುದರಿಂದ ಆಕೆಯ ನೆನಪುಗಳಿಗೆ ಜೀವಬಂದಿದೆ.....

ಅರುಣಾ ಶಾನಭಾಗ್ ಮೂಲತಃ ಉತ್ತರ ಕನ್ನಡದ ಹೊನ್ನಾವರ ತಾಲ್ಲೂಕಿನ ಹಳದಿಪುರ ಎಂಬ ಹಳ್ಳಿಯ ಹುಡುಗಿ. ಬಡತನದಲ್ಲಿದ್ದ ಈ ಕೊಂಕಣಿಗರ ಕುಟುಂಬದ ಪೋರಿ ಶುಶ್ರೂಷೆ ಮಾಡುವ ಮಹದಾಸೆಯಿಂದ ಮುಂಬೈಗೆ ಹೋಗುತ್ತಾಳೆ. ಬಂಧುಗಳ ಮನೆಯಲ್ಲಿದ್ದು ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಗೆ ಸೇರಿಕೊಳ್ಳುವ ಅರುಣಾ ಚಂದದ-ಚೂಟಿ ಹೆಣ್ಣಾಗಿದ್ದಳು. 25 ವರ್ಷದ ತನಕ ಆಕೆ ಬಡತನದಲ್ಲೂ ಖುಷ್‌ಖುಷಿಯಾಗೇ ಇದ್ದಳು. ಆಸ್ಪತ್ರೆಯಲ್ಲಿ ನಿಷ್ಠೆಯಿಂದ ಸೇವೆ ಮಾಡುತ್ತಿದ್ದ ಅರುಣಾ ಎಲ್ಲರೊಂದಿಗೆ ಸಹಜವಾಗಿ ಬೆರೆಯುತ್ತಿದ್ದಳು. ಅಲ್ಲಿದ್ದ ಒಬ್ಬ ವೈದ್ಯ ಅರುಣಾಳನ್ನು ಪ್ರೀತಿಸುತ್ತಿದ್ದ, ಆಕೆಯೂ ಆ ವೈದ್ಯನ ಜೊತೆ ಲಗ್ನವಾಗಿ ಸುಖಸಂಸಾರ ಸಾಗಿಸುವ ಕನಸು ಕಾಣುತ್ತಿದ್ದಳು.

ಆಕೆಯ ಮದುವೆ ನಿಶ್ಚಯವಾಗಿತ್ತು, ಆದರೆ ತನ್ನದೇ ಆಸ್ಪತ್ರೆಯ ವಾರ್ಡ್‌ಬಾಯ್ ಎಂಬ ಮರುಳ್ಳ ಮೃಗವೊಂದು ತನ್ನ ಹಿಂದು ಮುಗಿಸಲು ಹೊಂಚುಹಾಕಿದ್ದು ಅರುಣಾಗೆ ಗೊತ್ತಾಗಲೇ ಇಲ್ಲ. ಅದು 1973 ರ ನವೆಂಬರ್ 27ರ ರಾತ್ರಿ. ವಾರ್ಡ್‌ಬಾಯ್ ಸೋಹನ್ ಲಾಲ್ ಬರ್ಬರವಾಗಿ ಅರುಣಾಳ ಮೇಲೆ ಅತ್ಯಾಚಾರ ಮಾಡುತ್ತಾನೆ. ಆ ಲೈಂಗಿಕ ಹಲ್ಲೆ ಅದೆಷ್ಟು ಘೋರವಾಗಿತ್ತೆಂದರೆ, ನಾಯಿಗಳ ಕಟ್ಟಹಾಕುವ ಸರಪಳಿಯಿಂದ ಆ ಪಾಪಿ ಅರುಣಾಳ ಕೈ-ಕಾಲು-ಕುತ್ತಿಗೆಯನ್ನು ಸುತ್ತಿ ಅತ್ಯಾಚಾರ ಮುಗಿಸುತ್ತಾನೆ!!

ಚೇತರಿಸಿಕೊಳ್ಳಲಾಗದಂಥ ಆಘಾತ ಅರುಣಾಳಿಗೆ ಆಗುತ್ತದೆ! ಅತ್ಯಾಚಾರದ ರಭಸಕ್ಕೆ ಆಕೆಯ ಮೆದುಳಿನಲ್ಲಿ ರಕ್ತಸ್ರಾವವಾಗುತ್ತದೆ; ನಾಲಿಗೆ ಬಿದ್ದು ಹೋಗುತ್ತದೆ; ಕಣ್ಣು ಮಂಜಾಗುತ್ತವೆ. ಸುತ್ತಮುತ್ತಲಿನ ಯಾವ ಘಟನೆಗೂ ಸ್ಪಂದಿಸದ ಜೀವಂತ ಕೊರಡಾಗುತ್ತಾಳೆ! ಒಂಥರಾ ಅನಾಥೆಯಂತಾಗುವ ಅರುಣಾಳಿಗೆ ಆಕೆಯ ಆಸ್ಪತ್ರೆಯ ನರ್ಸ್‌ಗಳು ಮತ್ತು ವೈದ್ಯರು, ಸಿಬ್ಬಂದಿ ಮಾತ್ರ ಕೈಬಿಡುವುದಿಲ್ಲ. ಕಳೆದ ನಾಲ್ಕು ದಶಕದಿಂದ ಕೆಇಎಂ ಆಸ್ಪತ್ರೆ ದಾದಿಯರು ಆಕೆಯ ಆರೈಕೆ ತುಂಬ ಕಾಳಜಿ-ಕಕ್ಕುಲಾತಿಯಿಂದ ಮಾಡುತ್ತಿದ್ದಾರೆ.





ಅರುಣಾಗೀಗ 66 ವರ್ಷ. ಬಹುಶಃ ಆಕೆಯ ಸರಿಕರ್‍ಯಾರೂ ಅಲ್ಲೀಗ ನರ್ಸ್‌ಗಳಾಗಿಲ್ಲ. ಆದರೆ ಹೊಸತಾಗಿ ಬರುವ ವೈದ್ಯರು-ನರ್ಸ್‌ಗಳು ಅರುಣಾಳ ದತ್ತು ತೆಗೆದುಕೊಂಡಂತೆ ನೋಡಿಕೊಳ್ಳುತ್ತಿದ್ದಾರೆ. ಅರುಣಾಳ ಹುಟ್ಟೂರು ಹಳದಿಪುರದಲ್ಲಿ ಈಗ ಆಕೆಯ ಬಂಧುಗಳ್ಯಾರೂ ಇಲ್ಲ. ಒಬ್ಬ ಅಣ್ಣ ತೀರಿಕೊಂಡಿದ್ದರೆ, ಮತ್ತೊಬ್ಬ ಬೆಂಗಳೂರಲ್ಲಿದ್ದಾರೆ; ಹಳದಿಪುರದ ಮನೆ ಹಾಳುಬಿದ್ದಿದೆ. ಹೀಗಾಗಿ ಆಕೆಯ ಕೆಇಎಂ ಆಸ್ಪತ್ರೆಯ ಸಿಬ್ಬಂದಿಯೇ ತಂದೆ-ತಾಯಿ-ಬಂಧು-ಬಳಗ....

ಅರುಣಾಳ ಕರುಣಾಜನಕ-ಘೋರ ಕತೆ ಜಗತ್ತಿಗೆ ತಿಳಿಸಲು ಆರಂಭದಿಂದಲೂ ಆಕೆಯ ಗೆಳತಿ-ಪತ್ರಕರ್ತೆ ಪಿಂಕಿ ವಿರಾನಿ ಹೆಣಗಾಡುತ್ತಿದ್ದಾರೆ. ಅರುಣಾಳ ಬದುಕು-ಬವಣೆ ಬಗ್ಗೆಗೊಂದು ಪುಸ್ತಕವೂ ಪಿಂಕಿ ಬರೆದಿದ್ದಾರೆ. ಪಿಂಕಿ ತನ್ನ ಸ್ನೇಹಿತೆಗೆ ದಯಾಮರಣ ನೀಡಬೇಕೆಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಭಾರತದಲ್ಲಿ ದಯಾಮರಣ ಕಾನೂನು ಇಲ್ಲವೆಂದು ನ್ಯಾಯಾಲಯ ದಯಾಮರಣ ಕೋರಿಕೆ ತಿರಸ್ಕರಿಸಿದೆ. ಇದು ಹಲವು ದಶಕಗಳ ಹೋರಾಟ.

ಆ ನಂತರ ಮುಂಬೈನ ಎನ್‌ಜಿಓ ಒಂದು ದಯಾಮರಣ ಅರುಣಾಗೆ ಕೊಡಬೇಕೆಂದು ಸುಪ್ರೀಂ ಕೋರ್ಟ್‌ಗೆ ಹೋಗುತ್ತದೆ. ಮತ್ತೆ ಅರುಣಾ ಪ್ರಕರಣಕ್ಕೆ ಜೀವ ಬಂದಿದೆ. ದಯಾಮರಣ ನಿಷ್ಕರ್ಷೆಗೆ ಸುಪ್ರೀಂ ಸಂವಿಧಾನ ಪೀಠಕ್ಕೆ ಕೇಳಿದೆ. ಅರುಣಾ ಶಾನಭಾಗ್ ಬದುಕು ಹಾಳು ಮಾಡಿದ ಕಿರಾತಕ ಸೋಹನ್ ಲಾಲ್ 7 ವರ್ಷ ಶಿಕ್ಷೆಯ ನಂತರ ಏಡ್ಸ್‌ನಿಂದ ಸತ್ತು ಹೋಗಿದ್ದಾನೆ. ನಿಷ್ಪಾಪಿ ಅರುಣಾ ಮಾತ್ರ ಇವ್ಯಾವುದೂ ಗೊತ್ತಾಗದೇ "ಬದುಕಿದ್ದಾಳೆ"!!

ಅರುಣಾ ಶಾನಭಾಗ್‌ಗೆ ಮುಕ್ತಿ ಎಂದು?

● ನಮಹ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್


ಮಹಿಳಾ ವಿಶೇಷಾಂಕ

ಮರಾಠ ಸಾಮ್ರಾಜ್ಯದ ಪ್ರಮುಖ ಪೇಶ್ವೆ ಬಾಲಾಜಿ ಬಾಜಿರಾವ್‌ನ ಎರಡನೆ ಹೆಂಡತಿ ಆಗಿದ್ದವಳು ಮುಸಲ್ಮಾನ ಸುಂದರಿ ಮಸ್ತಾನಿ. ಆದರೆ ಪುಣೆಯ ಸಂಪ್ರದಾಯಬದ್ಧ ಬ್ರಾಹ್ಮಣರು ಬಾಜಿರಾವ್ ಮತ್ತು ಮಸ್ತಾನಿಗೆ ಜನಿಸಿದ ಮಗನನ್ನು ಹಿಂದೂ ಎಂದು ಸ್ವೀಕರಿಸಲಿಲ್ಲ. ಇವರಿಬ್ಬರ ಗಾಢವಾದ ಪ್ರೇಮವನ್ನು ಸೆರೆಹಿಡಿಯುವ ಲೇಖನ ಇಲ್ಲಿದೆ.





ನನ್ನ ಹಕ್ಕಿನ ಪುಟಗಳು


ಶನಿವಾರವಾಡೆ ಅರಮನೆ

ಚರಿತ್ರೆಯ ಪುಟಗಳಿಂದ ನಾಪತ್ತೆಯಾಗಿರುವ ಮಹಿಳೆಯ ಅಸ್ತಿತ್ವದ ಅನ್ವೇಷಣೆಯು ಇಂದಿನ ಮಹಿಳೆಯರಿಗೆ ತುರ್ತು ಮತ್ತು ಪ್ರಮುಖವಾಗಿ ಕಂಡು ಬರುತ್ತಿದೆ. ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರೂ ನಿರ್ದಾಕ್ಷಿಣ್ಯವಾಗಿ ಬದಿಗೆ ಸರಿಸಲ್ಪಟ್ಟ ಅನೇಕ ಮಹಿಳೆಯರ ಬದುಕಿನ ಅಧ್ಯಯನ ಹಾಗೂ ಅಂದಿನ ಚಾರಿತ್ರಿಕ ಘಟನೆಗಳು ಆಕೆಯ ಬದುಕಿನ ಮೇಲೆ ಬೀರಿದ ಪ್ರಭಾವವನ್ನು ಅವಲೋಕಿಸುವುದು ಕೂಡಾ ಸ್ತ್ರೀವಾದಿ ನೆಲೆಯಿಂದ ಬಹುಮುಖ್ಯ ವಿಷಯವಾಗಿದೆ.

ಹೀಗಾಗಿ ಮಹಿಳಾ ಚರಿತ್ರೆ ಎಂದರೆ ಆಯಾ ಕಾಲಘಟ್ಟದಲ್ಲಿ ಬದುಕಿದ ಮಹಿಳೆಯರು ಎದುರಿಸಿದ ಅಸಮಾನ ಸಾಮಾಜಿಕ ವ್ಯವಸ್ಥೆ ಆ ವ್ಯವಸ್ಥೆಯಲ್ಲಿ ಅವರು ಎದುರಿಸಿದ ಸವಾಲುಗಳು ಮತ್ತು ಅದರ ಪರಿಣಾಮಗಳಿಂದ ಕೂಡಿದ್ದು ಆಸಕ್ತಿಪೂರ್ಣವಾಗಿವೆ. ಯುದ್ಧ, ರಾಜಕಾರಣ, ರಾಜನೀತಿ ಮತ್ತು ಆಡಳಿತಾತ್ಮಕ ಹಾಗೂ ಅಧಿಕಾರದ ಸವಾಲುಗಳನ್ನು ಸಮರ್ಥವಾಗಿ ಎದುರಿಸಿದ ಮಹಿಳೆಯರು ಈ ಹಿಂದೆ ತಮ್ಮ ಹೆಜ್ಜೆಗುರುತುಗಳನ್ನು ಬಿಟ್ಟಿದ್ದರೂ ಅವರ ಪಾತ್ರವನ್ನು ಉದ್ದೇಶಪೂರ್ವಕವಾಗಿ ದಾಖಲು ಮಾಡದೆ, ದಾಖಲಾಗದಂತೆ ನೋಡಿಕೊಂಡ ಪುರುಷ ಪ್ರಧಾನ ವ್ಯವಸ್ಥೆಯು ತನ್ನ ಉದ್ದೇಶದಲ್ಲಿ ಸಫಲವೂ ಆಗಿದೆ. ಮಹಿಳೆಯನ್ನು ವಿಷಕನ್ಯೆಯಾಗಿ, ಲೈಂಗಿಕವಾಗಿ ಭೋಗವಸ್ತುವಾಗಿ, ಸಹಗಮನ ಮಾಡಿದ ಪತ್ನಿಯರಾಗಿ, ರಾಜಮಾತೆಯಾಗಿ ಮಾತ್ರ ಕಾಣಿಸಿರುವ ಇತಿಹಾಸವು ಇಂದಿನ ಮಹಿಳೆಯರಿಗಾಗಿ ದಾರಿದೀಪವಾಗಿ ಯಾವುದೇ ಇತಿಹಾಸದ ದೀವಟಿಗೆಗಳನ್ನು ಬೆಳಗಿಸಿಲ್ಲ. ಇತಿಹಾಸದ ಅನ್ವೇಷಣೆಯನ್ನು ಮಾಡುವುದರ ಮೂಲಕ ನಿರಾಕರಣೆಗೊಳಗಾಗಿರುವ ಹಿಂದಿನ ಪೀಳಿಗೆಯ ಮಹಿಳೆಯರನ್ನು ಗುರುತಿಸುತ್ತಾ ಇಂದು ಮುಖಾಮುಖಿಯಾಗುತ್ತಿರುವ ಸಮಕಾಲೀನ ಬದುಕಿನ ಚರಿತ್ರೆಯನ್ನು ಕೂಡ ದಾಖಲಿಸಬೇಕಾದ ದ್ವಿಮುಖ ಹೊಣೆಗಾರಿಕೆಯ ಅನಿವಾರ್ಯತೆ ಮತ್ತು ಒತ್ತಡವು ಇಂದಿನ ಮಹಿಳೆಯರು ಮೇಲಿದೆ.

ಹೀಗಾಗಿ ಈ ಸಂದರ್ಭದಲ್ಲಿ ಇತಿಹಾಸದ ಗರ್ಭದಿಂದ ಮೇಲೆದ್ದು ತನ್ನ ಪಾಲಿನ ಪುಟಗಳ ಹಕ್ಕೊತ್ತಾಯವನ್ನು ಮಾಡುತ್ತಿರುವವಳು ಮಸ್ತಾನಿ. ಆಕೆ ಒಬ್ಬ ರಾಜಕುಮಾರಿ. ಬುಂದೇಲ್‌ಖಂಡದ ಮಹಾರಾಣ ಛತ್ರಸಾಲ್‌ನ ಪ್ರೀತಿಪಾತ್ರ ಪುತ್ರಿ. ಛತ್ರಸಾಲನು ಕೃಷ್ಣಪಂಥದ ಅನುಯಾಯಿಯಾಗಿದ್ದು, ಜಾತಿಮತಗಳ ನಡುವೆ ಸಾಮರಸ್ಯದ ಪ್ರತಿಪಾದಕನಾಗಿದ್ದವನು. ಆತ ಪರ್ಶಿಯನ್ ಮುಸ್ಲಿಮ್ ರಾಜಕುಮಾರಿಯಾದ ರೂಹಾನಿ ಬಾಯಿಯನ್ನು ವಿವಾಹವಾಗಿದ್ದ. ಅವರಿಬ್ಬರ ದಾಂಪತ್ಯಜೀವನದ ಫಲವಾಗಿ ಜನಿಸಿದವಳೇ ಮಸ್ತಾನಿ. ಆ ರಾಜಕುಮಾರಿಯ ಸೌಂದರ್ಯದ ವರ್ಣನೆಯಂತೂ ಜನಜನಿತವಾಗಿಯೇ ಇತ್ತು ಆಕೆಯು ವೀಳ್ಯದೆಲೆಯ ರಸವನ್ನು ನುಂಗಿದಾಗ ಅವಳ ಕೊರಳಿನಿಂದ ಕೆಳಗೆ ಇಳಿಯುತ್ತಿದ್ದ ವೀಳ್ಯದರಸದ ಬಣ್ಣ ನೋಡುಗರಿಗೆ ಕಂಡುಬರುತ್ತಿತ್ತೆಂಬ ಪ್ರತೀತಿ ಇತ್ತು, ಆದರೆ, ಅವಳ ಅಂದಚೆಂದಕ್ಕಿಂತ ಹೆಚ್ಚಾಗಿ ಆಕೆಯ ಸಾಹಸದ ಬಗ್ಗೆ ಕೂಡಾ ವಿಶೇಷ ಮನ್ನಣೆ ಇತ್ತು, ಆಕೆ ಕುದುರೆ ಸವಾರಿ, ಬರ್ಜಿ ಎಸೆತ ಮತ್ತು ಕತ್ತಿವರಸೆಯಲ್ಲಿ ನಿಷ್ಣಾತಳಾಗಿದ್ದು ಯುದ್ಧಕಲೆಯಲ್ಲಿ ನೈಪುಣ್ಯತೆಯನ್ನು ಸಾಧಿಸಿದ್ದಳು. ಸಂಗೀತ ಮತ್ತು ನೃತ್ಯ ಕಲೆಯಲ್ಲಿಯೂ ಆಕೆ ಪಾರಂಗತಳಾಗಿದ್ದಳು. ಮಹಾರಾಣ ಛತ್ರಸಾಲ ತನ್ನ ಆಳ್ವಿಕೆಯುದ್ದಕ್ಕೂ ಮೊಗಲರನ್ನು ಎದುರಿಸುತ್ತಾ ಮರಾಠ ಸಾಮ್ರಾಜ್ಯದೊಂದಿಗೆ ಗೆಳೆತನವನ್ನು ಹೊಂದಿದ್ದ.

ಆ ಸಂದರ್ಭದಲ್ಲಿ "ಮರಾಠ ಸಾಮ್ರಾಜ್ಯದ ಭೂಪಟವನ್ನು ಬದಲಾಯಿಸಿದ ಪ್ರತಾಪಶಾಲಿ" ಬಾಲಾಜಿ ಬಾಜಿರಾವ್ ಪೇಶ್ವೆಯಾಗಿದ್ದ. 18ನೆಯ ಶತಮಾನದಲ್ಲಿ ಚಿತ್ಪಾವನ ಬ್ರಾಹ್ಮಣ ವಂಶಸ್ಥರಾಗಿದ್ದ ಭಟ್ ಕುಟುಂಬದವರು ಒಂಭತ್ತು ತಲೆಮಾರಿನವರೆಗೆ ಮರಾಠ ಸಾಮ್ರಾಜ್ಯದ ವಂಶಪಾರಂಪರ್ಯ ಪೇಶ್ವೆ ಅರ್ಥಾತ್ ಪ್ರಧಾನ ಮಂತ್ರಿಗಳಾಗಿ ಇತಿಹಾಸವನ್ನು ನಿರ್ಮಾಣ ಮಾಡಿದವರು. ಆ ಪೈಕಿ ಬಾಲಾಜಿ ಬಾಜಿರಾವ್ ಎರಡನೆಯ ಪೇಶ್ವೆಯಾಗಿ ನೇಮಕವಾಗಿದ್ದ. ಆತನ ಕಾಲದಲ್ಲಿ ಮರಾಠ ಸಾಮ್ರಾಜ್ಯವು ಮಧ್ಯ ಭಾರತದಿಂದ ದೆಹಲಿಯ ಹೊಸ್ತಿಲಿನವರೆಗೂ ವಿಸ್ತಾರವಾಗಿತ್ತು ವಿಜಯನಗರ ಸಾಮ್ರಾಜ್ಯದ ಪತನದ ನಂತರ ಹಿಂದೂ ಸಾಮ್ರಾಜ್ಯ ನಿರ್ಮಾಣದ ಸಾಹಸಿ ಎಂದು ಆತನ ಬಗ್ಗೆ ವಿಶೇಷ ಆದರಾಭಿಮಾನವಿದ್ದು ಆತನನ್ನು ಜನರು ಅಪಾರವಾಗಿ ಗೌರವಿಸುತ್ತಿದ್ದರು.


ಮೊದಲನೆಯ ಪೇಶ್ವೆಯಾಗಿದ್ದ ಬಾಲಾಜಿ ವಿಶ್ವನಾಥ್‌ನ ಅಕಾಲಿಕ ಮರಣದಿಂದ ತೆರವಾದ ಸ್ಥಾನಕ್ಕೆ ಆತನ ಮಗನಾದ 20 ವರ್ಷ ವಯಸ್ಸಿನ ಬಾಜಿರಾವ್‌ನನ್ನು ಛತ್ರಪತಿ ಶಾಹು ಮಹಾರಾಜನು ನೇಮಕ ಮಾಡಿದಾಗ, ಆತನ ಸಾಮರ್ಥ್ಯದ ಬಗ್ಗೆ ಅಪನಂಬಿಕೆ ಪಟ್ಟವರೇ ಹೆಚ್ಚು, ಆದರೆ ಅದನ್ನು ಸುಳ್ಳು ಮಾಡುವಂತೆ ಆತನು 41 ಪ್ರಮುಖ ಯುದ್ಧಗಳಲ್ಲಿ


ಮಸ್ತಾನಿಯ ಅರಮನೆ ಹೀಗಿತ್ತು

ವಿಜಯಿಯಾದ. ಆತ ಪರಾಕ್ರಮಿಯಾಗಿದ್ದ ಮತ್ತು ರಾಜಕೀಯ ಮುತ್ಸದ್ದಿಯಾಗಿದ್ದ ವಿಶೇಷವಾಗಿ ಆಡಳಿತಾತ್ಮಕ ನೈಪುಣ್ಯವನ್ನು ಹೊಂದಿದ್ದ. ಮರಾಠ ರಾಜ್ಯದ ರಾಜಧಾನಿಯನ್ನು ಸತಾರಾದಿಂದ ಪುಣೆಗೆ ಆತ ವರ್ಗಾಯಿಸಿದ. ಪುಟ್ಟ ಕಸಬಾ ಆಗಿದ್ದ ಪುಣೆಯನ್ನು 18 ಪೇಟೆಗಳಲ್ಲಿ ವಿಂಗಡಿಸಿದ ಹಾಗೂ ಪುಣೆಗೆ ಬಂದು ವಾಸಿಸುವಂತೆ ಸತಾರಾದ ಅನೇಕ ಶ್ರೀಮಂತರನ್ನು ಆಹ್ವಾನಿಸಿದ. ತಾಯಿ ರಾಧಾಬಾಯಿಯ ಮಾರ್ಗದರ್ಶನ ಆತನ ಬೆನ್ನಿಗಿತ್ತು. ಕಾಶಿಬಾಯಿ ಎಂಬ ಸದ್ಗುಣಿ ಮಹಿಳೆಯನ್ನು ಬಾಲಾಜಿ ಬಾಜಿರಾವ್ ಮದುವೆ ಮಾಡಿಕೊಂಡಿದ್ದು, ನಾನಾ ಸಾಹೇಬ್ ಮತ್ತು ರಘುನಾಥರಾವ್ ಎಂಬ ಇಬ್ಬರು ಗಂಡುಮಕ್ಕಳ ತಂದೆಯಾಗಿದ್ದ. ಆಕೆ ರಾಧಾಬಾಯಿಯ ಅಚ್ಚುಮೆಚ್ಚಿನ ಸೊಸೆಯಾಗಿದ್ದಳು. ಆತನ ಸಹೋದರ ಚಿಮ್ನಾಜಿ ಅಪ್ಪಾ.

1727ರಲ್ಲಿ ಬುಂದೇಲ್‌ಖಂಡದ ರಾಜನಾಗಿದ್ದ ಛತ್ರಸಾಲ್‌ನ ರಾಜ್ಯದ ಮೇಲೆ ಮೊಗಲ್ ಸೇನಾಧಿಪತಿಯಾದ ಮೊಹಮ್ಮದ್‌ಖಾನ್ ಬಂಗಶ್ ಮುತ್ತಿಗೆಯನ್ನು ಹಾಕಿದ. ಶಿವಾಜಿಯ ಕಾಲದಿಂದಲೂ ಮರಾಠಿಗರ ಮಿತ್ರನಾಗಿದ್ದ ಛತ್ರಸಾಲ್ ತನ್ನ ಆಪತ್ತಿನ ಕ್ಷಣಗಳಲ್ಲಿ ಮರಾಠಿಗರ ನೆರವನ್ನು ಕೋರಿದ. ಆದರೆ ಪ್ರಯತ್ನ ಪಟ್ಟರೂ ಶಾಹು ಮಹಾರಾಜನು ಸಕಾಲದಲ್ಲಿ ಆತನಿಗೆ ನೆರವನ್ನು ನೀಡಲು ಸಾಧ್ಯವಾಗಲಿಲ್ಲ, ಜೈತಪುರ ಎಂಬಲ್ಲಿ ಘೋರ ಯುದ್ಧ ನಡೆಯಿತು. ಛತ್ರಸಾಲನು ಆ ಯುದ್ಧದಲ್ಲಿ ಗಾಯಗೊಂಡ ಹಾಗೂ ಮೊಗಲ್ ಸೈನ್ಯಕ್ಕೆ ಸೆರೆಯಾದ. ಆಗ ಆತ ರಹಸ್ಯ ಸಂದೇಶವನ್ನು ಕಳುಹಿಸಿ ಮತ್ತೊಮ್ಮೆ ಮರಾಠ ರಾಜನ ನೆರವನ್ನು ಕೋರಿದ. ಆಗ ಬಾಲಾಜಿ ಬಾಜಿರಾವ್ ಬುಂದೇಲ್‌ಖಂಡದ ಸಮೀಪ ಮಾಳವದಲ್ಲಿ ಬೀಡು ಬಿಟ್ಟಿದ್ದ ಆತ ಕೂಡಲೇ ಜೈತಪುರದತ್ತ ಪ್ರಯಾಣ ಬೆಳೆಸಿದ ಹಾಗೂ ಮೊಗಲ್ ಸೈನ್ಯವನ್ನು ಎದುರಿಸಿದ. ಆಗ ನಡೆದ ಯುದ್ಧದಲ್ಲಿ ಮೊಗಲ್ ಸೈನ್ಯವು ಸೋತು ಹೋಯಿತು ಹಾಗು ಛತ್ರಸಾಲ್ ಬಿಡುಗಡೆಗೊಂಡು ತನ್ನ ರಾಜ್ಯವನ್ನು ಮರಳಿ ಪಡೆದ.

ಬಾಲಾಜಿ ಬಾಜಿರಾವ್‌ನ ಅಪ್ರತಿಮ ಸಾಹಸದಿಂದ ಪ್ರಭಾವಿತನಾದ ಮಹಾರಾಜ ಛತ್ರಸಾಲನು ಆತನಿಗೆ ತನ್ನ ಮಗಳಾದ ಮಸ್ತಾನಿಯೊಡನೆ ಮದುವೆ ಮಾಡಿದ ಹಾಗೂ ತನ್ನ ರಾಜ್ಯದ ಮೂರನೇ ಒಂದು ಭಾಗದ ಪ್ರದೇಶಗಳಾದ ಸಗರ್, ಬಂದಾ, ಕಾಲ್ಪ ಮತ್ತು ಝಾಂಸಿಯನ್ನು ಆತನಿಗೆ ಉಡುಗೊರೆ ರೂಪದಲ್ಲಿ ನೀಡಿದ ಹಾಗೂ 33 ಲಕ್ಷ ಚಿನ್ನದ ವರಹಗಳನ್ನು ಮತ್ತು ಪನ್ನಾದ ವಜ್ರದ ಗಣಿಯನ್ನು ಕೂಡ ಆತನಿಗೆ ಉಡುಗೊರೆಯಾಗಿ ನೀಡಿದ. ಅಪ್ರತಿಮ ಸೌಂದರ್ಯದ ಖನಿಯಾಗಿದ್ದ ಮಸ್ತಾನಿಗೆ ವೈವಾಹಿಕ ಜೀವನದಲ್ಲಿ ಅಪಾರ ಸವಾಲುಗಳಿದ್ದವು. ಮೊದಲನೆಯದಾಗಿ ಆತನ ಕುಟುಂಬದವರು ಮತ್ತು ಪುಣೆಯ ಬ್ರಾಹ್ಮಣ ಸಮಾಜವು ಆಕೆಯನ್ನು ಪತ್ನಿ ಎಂದು ಒಪ್ಪಿಕೊಳ್ಳಲೇ ಇಲ್ಲ, ಉಪಪತ್ನಿ ಮೊದಲಾಗಿ ಇನ್ನಷ್ಟು ನಿಕೃಷ್ಟವಾದ ಲೈಂಗಿಕ ಸಂಬಂಧಗಳನ್ನು ಆರೋಪಿಸಿ ಆಕೆಯನ್ನು ವಿಕೃತವಾಗಿ ದಾಖಲಿಸಿದ್ದು ಕೊನೆಯವರೆಗೂ ಆಕೆಗೆ ಪತ್ನಿ ಎಂಬ ಮಾನ್ಯತೆಯನ್ನು ಆ ಸಮಾಜ ನೀಡಲೇ ಇಲ್ಲ, ಪೇಶ್ವೆ ಬಾಜಿರಾವ್ ಅವಳ ಸರ್ವತೋಮುಖವಾದ ವ್ಯಕ್ತಿತ್ವದಿಂದ ಪ್ರಭಾವಿತನಾಗಿ ಅವಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದು ಆತನ ಕುಟುಂಬಕ್ಕೆ ಸರಿ ಎನಿಸಲಿಲ್ಲ, ಡಿ.ಜಿ.ಗೋಡ್ಸೆ ಎಂಬ ಇತಿಹಾಸಕಾರನು ಕಾಣಿಸಿರುವಂತೆ, ಬಾಜಿರಾವ್‌ನ ತಾಯಿ ರಾಧಾ ಬಾಯಿ ಹಾಗೂ ಆತನ ಸಹೋದರನಾದ ಚಿಮ್ನಾಜಿ ಅಪ್ಪ ಮಸ್ತಾನಿಯನ್ನು ಕೊನೆಯವರೆಗೂ ಸ್ವೀಕರಿಸಲಿಲ್ಲ, ಆಕೆಯ ಹತ್ಯೆ ಮಾಡಲು ಅನೇಕ ಪ್ರಯತ್ನಗಳು ನಡೆದವು. ಆದರೆ 4ನೇ ಛತ್ರಪತಿ ಶಾಹುವಿನ ಬೆಂಬಲದಿಂದ ಆಕೆಯ ಕೊಲೆ ಪ್ರಯತ್ನಗಳು ನಿಷ್ಫಲವಾದವು. ಬಾಜಿರಾವ್ ಯುದ್ಧಕ್ಕೆ ಹೋಗಿದ್ದ ಸಂದರ್ಭದಲ್ಲಿ ಚಿಮ್ನಾಜಿ ಅಪ್ಪಾರಾವ್ ಆಕೆಯನ್ನು ಸೆರೆಮನೆಗೆ ತಳ್ಳಲು ಪ್ರಯತ್ನಿಸಿದ. ಇನ್ನೊಮ್ಮೆ ಆಕೆಯನ್ನು ಗೃಹಬಂಧನದಲ್ಲಿರಿಸಿದ. ಆದರೆ ಬಾಲಾಜಿ ಬಾಜಿರಾವ್‌ನ ಅತೀವ ಪ್ರೇಮ ಆಕೆಗೆ ರಕ್ಷಣೆಯನ್ನು ಒದಗಿಸಿತು ಮತ್ತು ಸಹಜವಾಗಿಯೇ ಆಕೆಯ ಮೊದಲ ಪತ್ನಿ ಕಾಶಿಬಾಯಿಯ ಅನಾದರಣೆಯಿಂದ ಅವನ ಕುಟುಂಬ ಮಸ್ತಾನಿಯ ವಿರುದ್ಧ ಕಡು ದ್ವೇಷವನ್ನು ಬೆಳೆಸಿಕೊಂಡಿತು.


ಮಸ್ತಾನಿಯ ಅರಮನೆ ಹೀಗಿತ್ತು

ಇದಕ್ಕೆ ತದ್ವಿರುದ್ಧವಾಗಿ ಪೇಶ್ವೆ ಬಾಜಿರಾವ್ ಆಕೆಯನ್ನು ಅತ್ಯಂತ ಪ್ರೀತಿ ಮತ್ತು ಗೌರವಾದರಗಳಿಂದ ಕಂಡ. ಆಕೆಯನ್ನು ಮದುವೆಯಾಗಿ ಕರೆತಂದ ಕೂಡಲೇ ತನ್ನ ಕುಟುಂಬದ ಅರಮನೆಯಾಗಿದ್ದ ಶನಿವಾರವಾಡೆಯ ವಾಯುವ್ಯ ಮೂಲೆಯನ್ನು ಆಕೆಯ ವಾಸ್ತವ್ಯಕ್ಕೆ ಸಿದ್ಧ ಗೊಳಿಸಿ ಹೊಸ ಬಾಗಿಲನ್ನು ಇರಿಸಿದ. ಮಸ್ತಾನಿ ದರ್ವಾಜಾ ಎಂಬ ಆ ಬಾಗಿಲಿನ ಅವಶೇಷಗಳು ಇಂದಿಗೂ ಕಾಣಸಿಗುತ್ತವೆ. ಪುಣೆ-ಸಾಸ್ವಾಡ ರಸ್ತೆಯಲ್ಲಿ ತನ್ನ ಪರಿವಾರದೊಂದಿಗೆ ಆಕೆಯು ಸ್ನಾನ ಮತ್ತು ಜಲಕ್ರೀಡೆಯನ್ನು ಆಡುವ ಸಲುವಾಗಿ ಸರೋವರವನ್ನು ನಿರ್ಮಾಣ ಮಾಡಿದ್ದು, ಆ ಸರೋವರವು ಇಂದಿಗೂ ಅವರಿಬ್ಬರ ಪ್ರೀತಿಯ ಕುರುಹಾಗಿ ಉಳಿದಿದೆ. ಆಕೆಯ ಕೊಲೆಯ ಪ್ರಯತ್ನಗಳು ನಡೆಯುತ್ತಿದ್ದಂತೆಯೇ ಆತ ಮಸ್ತಾನಿಗಾಗಿ ಪುಣೆಯ ಹೊರ ವಲಯದಲ್ಲಿ 'ಮಸ್ತಾನಿ ಮಹಲ್' ಎಂಬ ಒಂದು ಮಹಲನ್ನು ನಿರ್ಮಾಣ ಮಾಡಿದ. ಆ ಅರಮನೆಯ ಅವಶೇಷಗಳನ್ನು ಬಳಸಿ ಪುನರ್ನಿರ್ಮಾಣ ಮಾಡಿರುವ ಆಕೆಯ ಅರಮನೆಯನ್ನು ಪುಣೆಯ ರಾಜಾ

⏭ 09

ಅಹಲ್ಯೆ ಮತ್ತು ಚಿಗಮ

ಮಹಿಳಾ ವಿಶೇಷಾಂಕ

ಓರ್ವ ಅಮಾಯಕ ಮತ್ತು ಅಸಹಾಯ ಬ್ರಾಹ್ಮಣ ವಿಧವೆ ತನ್ನ ಕಟ್ಟುಪಾಡುಗಳಿಂದ ತಪ್ಪಿಸಿಕೊಂಡದ್ದು, ಬದುಕನ್ನು ಕಂಡುಕೊಂಡದ್ದು, ಕೊನೆಗೆ ನಾಶವಾಗಿದ್ದು...... ಖ್ಯಾತ ರಂಗ ನಿರ್ದೇಶಕ ಬಿ.ವಿ. ಕಾರಂತರು ತಮ್ಮ ಚಿಕ್ಕಮ್ಮನ ದುರಂತ ಬದುಕನ್ನು ಮೆಲುಕು ಹಾಕಿದ್ದು ಇಲ್ಲಿದೆ....

ಯಾವತ್ತೂ ಕೂಡ ಅಹಲ್ಯೆ ನನಗೆ ದೊಡ್ಡ ಅನುಭವ ಅಂತಲೇ ಅನಿಸೋದು. ಗೌತಮ ಅವಳಿಗೆ ಕಲ್ಲಾಗು ಅಂತ ಹೇಳೋದು, ಮತ್ತೆ ಆಕೆ ಹೂವಾಗಿ ಅರಳೋದು... ಒಂದು ಪಾಪಪ್ರಜ್ಞೆಯನ್ನು ತೆಗೆದುಹಾಕುವುದು ಎಷ್ಟು ಮುಖ್ಯ!

ಚಿಗಮನ ಕತೆ ತಡೆದು ಹೇಳುತ್ತೇನೆಂದೆ, ಈಗ ಹೇಳುತ್ತೇನೆ. ನನ್ನ ತಾಯಿಗೆ ಇಬ್ಬರು ತಂಗಿಯರು. ಮೊದಲ ತಂಗಿ ವೆಂಕಮ್ಮ, ಎರಡನೆಯವಳು ಕಾಶಿ. ವೆಂಕಮ್ಮ ಚಿಗಮ ಉಳಿದಿಬ್ಬರಿಗಿಂತಲೂ ಚೆಂದ. ಹೊಂಬಣ್ಣ, ಲಕ್ಷಣ, ಉದ್ದ ತಲೆಗೂದಲು. ಅಮ್ಮ ಅಂತೂ ಯಾವುದನ್ನೇ ಆಗಲಿ ಸ್ವಲ್ಪ ಜಾಸ್ತಿಯೇ ಬಣ್ಣನೆ ಮಾಡುವವಳು "ಏನು ಚೆಂದ! ಚೆನ್ನದಂಥವಳು" ಅಂತೆಲ್ಲ ಎಂಬಳು. ಚೆಂದ ಮಾತ್ರವಲ್ಲ ಒಳ್ಳೆಯ ಕಂಠ ಇತ್ತು ಚಿಗಮಂಗೆ. ಚೆನ್ನಾಗಿ ಹಾಡುತ್ತಿದ್ದಳು. ಒಬ್ಬ ಶ್ರೀಮಂತರ ಮನೆಯ ಬುದ್ಧಿಮಂದ ಹುಡುಗನೊಂದಿಗೆ ಅವಳ ಮದುವೆ ಆಯಿತು. ಆದರೂ ಚಿಗಮ ಅವನೊಂದಿಗೆ ಹೊಂದಿಕೊಂಡು ಅನ್ಯೋನ್ಯವಾಗಿಯೇ ಇದ್ದಳು, ಅವಳಷ್ಟಕ್ಕೆ ಅವಳು. ವಿಧಿಗೆ ಅದೂ ಸಾಕಾಗಲಿಲ್ಲ, ಬೇಗನೆ ಆತನನ್ನು ಕರಕೊಂಡಿತು. ಆಗಿನ್ನೂ ಅವಳಿಗೆ ಹದಿನೇಳು ವರ್ಷ. ಸಂಪ್ರದಾಯದಂತೆ ತಲೆ ಬೋಳಿಸಿಬಿಟ್ಟರು. ಗಂಡ ತೀರಿಕೊಂಡ ಮೇಲೆ ಆ ಮನೆಯಲ್ಲಿ ಇರಲಿಕ್ಕಾಗದೆ ತಾಯಿ ಮನೆಯೂ ಇಲ್ಲದೆ (ಅಜ್ಜಿ, ಮಾವಂದಿರೆಲ್ಲ ಬೊಂಬಾಯಿ ಸೇರಿದ್ದರಲ್ಲ), ಅವಳು ನಮ್ಮ ಮನೆಯಲ್ಲಿಯೇ ಬಂದು ಇದ್ದಳು. ನನ್ನ ತಂದೆ ಸದಾ ಅವಳ ಮೇಲೆ ರೇಗುವುದು. ಯಾರ ಮೇಲೆಯೇ ಆಗಲಿ, ರೇಗಲಿಕ್ಕೆ ತನಗೆ ಹಕ್ಕು ಇದೆ ಎಂಬಂತೆ ಇದ್ದರಲ್ಲ ನನ್ನ ತಂದೆ. ಚಿಗಮ ತಲೆ ಬೋಳಿಸಿಕೊಳ್ಳುವುದು ತುಸು ತಡವಾದರೆ ಸಾಕು "ಮೊದಲು ಚೌರದವನ ಕರಸು, ಮುಂಡೆ ಬೊಳ್ಸಿಣು" ಅಂತ ಅಬ್ಬರಿಸುತ್ತಿದ್ದರು. ಅಮ್ಮನೂ ಅಷ್ಟೇ- "ಅವರನ್ನ ಯಾಕೆ ಸಿಟ್ಟಿಗೇಳಿಸ್ತಿ, ಬೋಳ್ಸಿಂಬುಗಾಗದ?" ಎಂಬಳು. ಒಮ್ಮೆ ಮೂರು ನಾಲ್ಕು ತಿಂಗಳಾದರೂ ಅವಳು ತಲೆ ಬೋಳಿಸಿಕೊಳ್ಳಲಿಲ್ಲ. (ನಮ್ಮಲ್ಲಿ ತಲೆಗೂದಲಿಗೆ 'ತಲೆ' ಅಂತಲೂ ಹೇಳುತ್ತಾರೆ) ಅದು ತಂದೆಯವರು ಘಟ್ಟಕ್ಕೆ ಏಲಕ್ಕಿ ಮಲೆಗೆ ಹೋಗಿದ್ದ ಸಮಯ. ಚಿಗಮನಿಗೆ ಹೇಳುವವರಿರಲಿಲ್ಲ, ಅಮ್ಮ ಹೇಳಿದರೆ ಅವಳು ಕೇಳುತ್ತಿರಲಿಲ್ಲ. ಇದೊಂದು ಅವಕಾಶ ಆಯಿತು ಅವಳಿಗೆ. "ಬಾ ನನ್ನ ಸಂಗಡ" -ಅಂತ ನನ್ನನ್ನು ಕರಕೊಂಡು ಜೋಡುಮಾರ್ಗಕ್ಕೆ ಹೋದಳು. ಅಲ್ಲಿ ನನ್ನನ್ನು ಒಬ್ಬ ಸಂಬಂಧಿಕರ ಮನೆಯಲ್ಲಿ ಬಿಟ್ಟು "ಇಲ್ಲಿರು ಈಗ ಬಂದೆ" ಅಂತ ಹೇಳಿ ಬಸ್ಸು ಹತ್ತಿ ಮಂಗಳೂರಿಗೆ ಹೋಗಿಬಿಟ್ಟಳು. ಅವಳು ನನ್ನನ್ನು ಕರಕೊಂಡು ಬಂದದ್ದೂ ಹೆಂಗಸು ಒಬ್ಬಳೇ ಎಲ್ಲಿಗೂ ಹೋಗಬಾರದು ಅಂತಿದೆಯಲ್ಲ, ಅದಕ್ಕಾಗಿ.



ಅವಳು ಹೋದ ಮೇಲೆ ಆ ಸಂಬಂಧಿಕರ ಮನೆಯ ಮಕ್ಕಳು ನನಗೊಂದು ಉಪದ್ರ ಕೊಟ್ಟದ್ದು ಅಂದರೆ, ಇಂತಿಷ್ಟೇ ಅಂತಲ್ಲ, "ಹೇಳ್ತಿ ಕಾಣ್, ಹೇಳ್ತಿ ಕಾಣ್ ಚಿಗಮಂಗೆ" ಎಂದರೆ "ಏನು 'ಕಾಣ್' 'ಕಾಣ್'" ಅಂತ ಅಣಕಿಸುತ್ತಿದ್ದರು. ಅಂತೂ ಬಂದಳು ಚಿಗಮ. ಎರಡು ಚಿನ್ನದ ಬಳೆ ಕೊಂಡು ತಂದಿದ್ದಳು. ದುಡ್ಡು ಎಲ್ಲಿಂದ ಸಿಕ್ಕಿತೊ, ಯಾರು ಕೊಟ್ಟರೋ. ಚಿಗಮ ಬಂದಕೂಡಲೇ ಸ್ವಲ್ಪ ಅತ್ತು ಸ್ವಲ್ಪ ಹೇಳಿ ಸ್ವಲ್ಪ ಬಿಟ್ಟು ಅಂತೂ ಮಕ್ಕಳು ಕೊಟ್ಟ ಉಪದ್ರವನ್ನು ಹೇಳಲು ಎಷ್ಟು ಯತ್ನಿಸಿದರೂ ಪೂರ್ತಿ ಹೇಳಲಿಕ್ಕೆ ಆಗಲಿಲ್ಲ ನಂಗೆ. ಅವರು ಪೇಟೆಯವರು ನಾನು ಹಳ್ಳಿಯವ ಎಂಬ ಅಳುಕು. ನನ್ನನ್ನು ಕರಕೊಂಡು ಅವಳು ಮನೆಗೆ ಹಿಂದಿರುಗಿದಳು.

ಹಾಗೆ ಹಿಂದಿರುಗಿದವಳು ಮಂಗಳೂರಿಂದ ತಂದ ಬಳೆ ಹಾಕಿಕೊಂಡು ತಂದೆಯವರು ಘಟ್ಟದಿಂದ ವಾಪಾಸು ಬರುವುದರೊಳಗೆ ಮಾಯವಾಗಿಬಿಟ್ಟಿದ್ದಳು. ಹೆಂಗಸು ದಳಾಳಿಗಳು ಇರುವರಲ್ಲ; ಆಗಲೂ ಇದ್ದರು. ಇಂಥವರನ್ನೇ ಹುಡುಕುವವರು. ಇವಳು ಸಿಕ್ಕಿದಾಳೆ, ಬಳೆಗಿಳೆ ಕೊಡಿಸಿದ್ದಾರೆ, ಅವಳಾದರೂ ಎಷ್ಟು ದಿನ ಅಂತ ಹಾಗೇ ಇರೋಕೆ ಸಾಧ್ಯ? ಅವಳ ಒಳಗೆ ಏನೇನು ಆಗುತ್ತಿತ್ತೊ, ನಾನು ಚಿಕ್ಕ ಹುಡುಗನಿದ್ದಾಗ ಎಷ್ಟೋ ಸಲ ನನ್ನನ್ನು ಎದೆಯ ಮೇಲೆ ನಿಲ್ಲಿಸಿಕೊಂಡು ಕುಣಿಸುತ್ತಿದ್ದಳು. ಅವಳಿಗೆ ನೋವಾಗುತ್ತದಲ್ಲ ಅಂತ ನನಗೆ. ಆದ್ದರಿಂದಲೇ ಆ ನೆನಪು ಕೂತುಬಿಟ್ಟಿದೆ. ಮಕ್ಕಳನ್ನು ಹಾಗೆ ಆಡಿಸುತ್ತಾರೆ, ನಿಜ ಆದರೆ ನನ್ನ ವಯಸ್ಸು ಆಗ ಬಹಳ ಏನು ಚಿಕ್ಕದಲ್ಲ; ಐದಾರು ವರ್ಷದವ. ಹೊಡಿ ಹೊಡಿ, ಅಂತ ಜೋರಾಗಿ ಹೊಡೆಯಲು ಹೇಳುತ್ತಿದ್ದಳು ಕೂಡ.

ಘಟ್ಟದ ಕೆಲಸ ಮುಗಿಸಿ ಅಪ್ಪ ಬಂದರು. ಸುದ್ದಿ ಕೇಳಿ ಅವಳನ್ನು ಹುಡುಕಿಸುವ ಪ್ರಯತ್ನ ಮಾಡಿದರು. ಅಲ್ಲಿ ಹುಡುಕಿ, ಇಲ್ಲಿ ಹುಡುಕಿ ಆಯ್ತು, ಅವರಿವರಿಗೆ ಹೇಳಿ ಆಯ್ತು ಕೇಳಿ ಆಯ್ತು, ಎಲ್ಲಿಗೆ ಹೋದಳೋ ಪತ್ತೆ ಆಗಲೇ ಇಲ್ಲ. ಇದು ಕಳೆದು ಎರಡು ವರ್ಷಗಳ ಮೇಲೆ ಅವಳಿಂದ ಒಂದು ಕಾಗದ ಬಂತು. ನಾನಾಗ ಪಾಣೆ ಮಂಗಳೂರು ಶಾಲೆಯಲ್ಲಿದ್ದೆ. ಆರನೆಯದೋ, ಏಳನೆಯದೋ ಕ್ಲಾಸಿನಲ್ಲಿ. ಅವಳಿಗೆ ಸ್ವತಃ ಬರೆಯಲಿಕ್ಕೆ ಬರುತ್ತಿರಲಿಲ್ಲ, ಯಾರ ಕೈಲೋ ಬರೆಸಿದ್ದಳು. ಕಾಗದದ ಜೊತೆಗೊಂದು ಫೋಟೊ! ಸ್ಟುಡಿಯೋದಲ್ಲಿ ತೆಗೆಯುತ್ತಾರಲ್ಲ- ಪಕ್ಕದಲ್ಲೊಂದು ಪುಟ್ಟ ಕಂಬ. ಅದರ ಮೇಲೊಂದು ಹೂಕುಂಡ. ಅದರ ಪಕ್ಕದಲ್ಲಿ ನಿಂತಿರುವಂತೆ. ನಾನು ಫೋಟೊ ನೋಡಿ "ಚಿಗಮ ಎಷ್ಟು ಚಂದ ಬಂದಿದ್ಲ" ಅಂದೆ. "ಮತ್ತೆ! ನಮ್ಮಲ್ಲಿ ಎಲ್ಲರಿಗಿಂತ ಚಂದ ಅವಳೇ ಅಲ್ದ?" -ಬಿಡದೆ ಹೇಳೀ ಹೇಳಿದಳು ಅಮ್ಮ. ಕಾಗದದಲ್ಲಿ "ನಾನಿಲ್ಲಿ ಸುಖವಾಗಿದ್ದೇನೆ. ಬೋಯಣ್ಣ ಕಲಿಯುವುದಾದರೆ ನಾನು ಅವನ ಓದಿಗೆ ಪೂರಾ ಸಹಾಯ ಮಾಡುತ್ತೇನೆ" ಅಂತ ಇತ್ತು. ಅಪ್ಪ ಇದನ್ನು ಒಪ್ಪಲಿಲ್ಲ ಅಂತ ಹಿಂದೆಯೇ ಹೇಳಿದೆನಷ್ಟೆ? ಬದಲು ಜೋರಾಗಿ ಮಾರುತ್ತರ ಬರೆದರು- "ಅಂಥ ಪಾಪದ ದುಡ್ಡೆಲ್ಲ ನಮಗೆ ಬೇಡ, ನನ್ನ ಮಗ ಕಲಿಯಬೇಕಾಗಿಲ್ಲ."

ಗುಬ್ಬಿ ಕಂಪೆನಿಯಲ್ಲಿರುವಾಗ ಒಮ್ಮೆ ಮಂಗಳೂರಿನಿಂದ ಒಬ್ಬ ಹೆಂಗಸು ಬಂದಿದ್ದಳು, ಕೋಲಾರ ಕ್ಯಾಂಪಿನಲ್ಲಿ, ಸುಮಾರು ಇಪ್ಪತ್ತು ಇಪ್ಪತ್ತೈದು ವರ್ಷದವಳು. 'ಯಾಕಮ್ಮ ಬಂದೆ?' ಅಂದರೆ 'ಏನು ಮಾಡೋದು... ಅವರೊಬ್ಬರು ಬಂದರು, ಕೆಲಸ ಕೊಡಿಸ್ತೇನೆ ಹಾಗೆ ಹೀಗೆ ಅಂತೆಲ್ಲ ಹೇಳಿದರು. ನಂಬಿಕೊಂಡು ಅವರ ಜೊತೆ ಬಂದುಬಿಟ್ಟೆ' ಎಂದಿದ್ದಳು. ಕಂಪೆನಿಗೆ ಅನೇಕ ಹೆಂಗಸರು ಈ ರೀತಿ ಬಂದವರಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಂತೂ ಈ ರೀತಿ ಮುಗ್ಧ ಸರಳ ಮಂದಿ ಬಹಳ ಇದ್ದಾರೆ. ಬಹಳ

▶▶ 15

008 ◀◀


ದಿನಕರ್ ಕೇಲ್ಕರ್ ಮ್ಯೂಸಿಯಮ್‌ನಲ್ಲಿ ಕಾಣಬಹುದಾಗಿದೆ. ಅನೇಕ ಯುದ್ಧಗಳಲ್ಲಿ ಆಕೆ ಅವನ ಜೊತೆಯಲ್ಲಿ ಭಾಗವಹಿಸುತ್ತಿದ್ದಳು.

ಅಂತಹ ಅದ್ಭುತ ಪ್ರತಾಪಿ ಪೇಶ್ವೆ ಬಾಜಿರಾವ್‌ಗೆ ಆಳವಾದ ಗಾಯವೊಂದು ಬದುಕಿನುದ್ದಕ್ಕೂ ಉಳಿದು ಹೋಯಿತು. ಅವರಿಬ್ಬರ ದಾಂಪತ್ಯ ಜೀವನದ ಫಲವಾಗಿ ಒಬ್ಬ ಮಗ ಹುಟ್ಟಿದಾಗ ಆತ ಮನದುಂಬಿ ಆ ಕೂಸಿಗೆ ಕೃಷ್ಣರಾವ್ ಎಂದು ಹೆಸರಿಟ್ಟ ಹಾಗೂ ತನ್ನ ಮಗನಿಗೆ ಬ್ರಾಹ್ಮಣ ಸಂಪ್ರದಾಯಕ್ಕೆ ಅನುಗುಣವಾಗಿ ಮುಂಜಿ-ಯಜ್ಞೋಪವೀತವನ್ನು ಧರಿಸುವ ಅವಕಾಶ ದೊರಕಬೇಕೆಂದು ಅತೀವ ಪ್ರಯತ್ನವನ್ನು ಪಟ್ಟ. ಆದರೆ ಪುಣೆಯ ಸಂಪ್ರದಾಯಬದ್ಧ ಬ್ರಾಹ್ಮಣ ಪುರೋಹಿತರು ಅದಕ್ಕೆ ಅವಕಾಶವನ್ನು ನೀಡಲಿಲ್ಲ. ಕೊನೆಗೆ ಭಾರವಾದ ಹೃದಯದಿಂದ ಆತನು ಕೃಷ್ಣರಾವ್‌ಗೆ ಶಂಷೇರ್ ಬಹಾದುರ್ ಎಂದು ಪುನರ್ನಾಮಕರಣ ಮಾಡಿದ ಹಾಗೂ ಅವನನ್ನು ಮುಸ್ಲಿಮ್ ರೀತಿ-ನೀತಿಯ ಮೇರೆಗೆ ಪಾಲನೆ ಪೋಷಣೆ ಮಾಡಿ ಮುಸ್ಲಿಮ್ ಎಂದು ಪರಿಗಣಿಸಲಾಯಿತು.

ಮಸ್ತಾನಿಯೊಡನೆ ವಿವಾಹವಾಗಿ ಸುಮಾರು ಹನ್ನೆರಡು ವರ್ಷಗಳಾಗಿದ್ದಾಗ ಹಾಗೂ ಅವರ ಮಗ ಶಂಷೇರ್ ಬಹಾದುರ್‌ಗೆ ಆರು ವರ್ಷವಾಗಿದ್ದಾಗ ಏಪ್ರಿಲ್ 1740ರಲ್ಲಿ ಬಾಜಿರಾವ್ ಖರ್ಗಾಂವ್‌ನಲ್ಲಿ ತನ್ನ ಜಹಗೀರಿನ ಪರಿಶೀಲನೆಯನ್ನು ಮಾಡುತ್ತಿದ್ದ. ಆಗ ಏರಿದ ಜ್ವರದ ತಾಪವನ್ನು ತಡೆಯಲಾರದ ಆತ ಮರಣ ಹೊಂದಿದ. ಕಾಶಿಬಾಯಿ, ಚಿಮ್ನಾಜಿ ಅಪ್ಪಾ, ಬಾಜಿರಾವ್‌ನ ಮಗನಾದ ಬಾಲಾಜಿ (ನಾನಾಸಾಹೇಬ್) ಹಾಗೂ ಮಸ್ತಾನಿ ಕೂಡಲೇ ಅಲ್ಲಿಗೆ ಧಾವಿಸಿದರು. ಪೇಶ್ವೆ ಬಾಜಿರಾವ್‌ನ ಚಿತೆಗೆ ಏಪ್ರಿಲ್ 28 ರಂದು ನರ್ಮದಾ ನದಿಯ ರಾವೆರ್‌ಖೇಡ್ ಬಳಿ ಅಗ್ನಿಸ್ಪರ್ಶ ಮಾಡಲಾಯಿತು. ಆಗ ಮಸ್ತಾನಿ ಚಿತೆಯಲ್ಲಿ ಹಾರಿ ಸತಿಯಾದಳು ಎಂದು ಐತಿಹ್ಯ ದೊರಕುತ್ತದೆ. ಮತ್ತೊಂದು ಮೂಲದ ಪ್ರಕಾರ ಆತನ ಮರಣದ ಸುದ್ದಿಯನ್ನು ಕೇಳಿದೊಡನೆಯೇ ಆಕೆ ತನ್ನ ಉಂಗುರದಲ್ಲಿದ್ದ ವಿಷ ಸೇವನೆಯನ್ನು ಮಾಡಿದ್ದು ಪ್ರಾಣಾರ್ಪಣೆ ಮಾಡಿ ಕೊಂಡಳು ಎಂಬ ವಿಷಯ ಕಂಡುಬರುತ್ತದೆ. ಒಟ್ಟಿನಲ್ಲಿ, ಬಾಲಾಜಿ ಬಾಜಿರಾವ್‌ನ ಸಾವಿನೊಂದಿಗೆ ಆಕೆ ತನ್ನ ಸಾವನ್ನು ಕೂಡಾ ಕಂಡುಕೊಂಡಳು. ಪಬಾಲ್‌ನಲ್ಲಿ ಅವಳ ಗೋರಿ ಇದೆ.



ಉಮರ್ ಅಲಿ ಬಹಾದುರ್



ವಿನಾಯಕ ವಿಶ್ವನಾಥ ಪೇಶ್ವೆ ಬಹಾದುರ್

ಅನಾಥನಾಗಿದ್ದ ಶಂಷೇರ್ ಬಹಾದುರ್‌ನನ್ನು ಕಾಶಿಬಾಯಿ ತನ್ನ ವಶಕ್ಕೆ ಪಡೆದುಕೊಂಡು ಮಾತೃತ್ವದ ಪ್ರೀತಿಯ ಆರೈಕೆಯಲ್ಲಿ ಸ್ವಂತ ಮಗನಂತೆ ಸಾಕಿ ಸಲುಹಿದಳು. ಆತನು ಯೌವನಕ್ಕೆ ಬಂದಾಗ ತನ್ನ ತಾಯಿ ಮಸ್ತಾನಿಗೆ ಸೇರಿದ ರಾಜ್ಯದ ಒಡೆಯನಾದ. ಆದರೆ 1761ರಲ್ಲಿ ಮರಾಠ ರಾಜ್ಯ ಮತ್ತು ಅಹಮದ್ ಶಾ ಅಬ್ದಾಲಿಯ ನಡುವೆ ನಡೆದ ಮೂರನೆಯ ಪಾಣಿಪತ್ ಯುದ್ಧದಲ್ಲಿ ಮರಾಠಿಗರ ಪರವಾಗಿ ಹೋರಾಡುವಾಗ ತನ್ನ 27ನೆಯ ವಯಸ್ಸಿನಲ್ಲಿ ಮರಣ ಹೊಂದಿದ. ಆತನ ಮಗನಾದ ಅಲಿ ಬಹಾದುರ್ ಎಂಬಾತನು ಬುಂದಲ್‌ಖಂಡ್‌ನ ಅರಸನಾಗಿ ಉತ್ತರ ಪ್ರದೇಶದ ಬಂದಾ ರಾಜ್ಯವನ್ನು ಸ್ಥಾಪನೆ ಮಾಡಿದ.

ಮಸ್ತಾನಿಯಂತಹ ಪ್ರೀತಿಪಾತ್ರ ಪತ್ನಿಯೊಂದಿಗೆ ನಡೆಸಿದ ದಾಂಪತ್ಯ ಜೀವನದ ಸಾಮರಸ್ಯವು ಅವನ ಬದುಕಿಗೆ ಅಪಾರ ನೆಮ್ಮದಿಯನ್ನು ನೀಡಿತು. ಅದೊಂದು ಐತಿಹಾಸಿಕ ಪ್ರೇಮ ಕಥೆಯಾಗಬಹುದಿತ್ತು. ಆದರೆ ದುರಂತದಲ್ಲಿ ಕೊನೆಗೊಂಡಿತು. ಮತ್ತು ಬಖೈರ್ ಎಂದು ಕರೆಯಲಾಗುವ ಆಸ್ಥಾನದ ಕಡತಗಳಲ್ಲಿ ಎಲ್ಲಿಯೂ ತಪ್ಪಿ ಕೂಡ ಆಕೆಯ ಹೆಸರಿನ ಪ್ರಸ್ತಾಪವಾಗದಂತೆ ಅವಳ ಬಗೆಗಿನ ವಿವರಗಳನ್ನು ದುರುದ್ದೇಶಪೂರ್ವಕವಾಗಿ ಕೈಬಿಡಲಾಯಿತು. ಅವಳ ಬಗೆಗಿನ ಯಾವುದೇ ಮಾಹಿತಿ ಉಳಿಯದಂತೆ ವ್ಯವಸ್ಥಿತವಾಗಿ ನೋಡಿಕೊಳ್ಳಲಾಯಿತು. ಆದರೂ ಕೂಡಾ ಅವರಿಬ್ಬರ ಬದುಕು ಮತ್ತು ಪ್ರೀತಿ ಮೂರು ದಶಕಗಳ ಕಾಲ ಜನರ ಮನದಲ್ಲಿ ದಂತಕಥೆಯಾಗಿ ಉಳಿದಿದೆ. ಅಂದಿನ ರಾಜಕೀಯ ಏಳುಬೀಳು, ಯುದ್ಧದ ನಡುವೆ ಅರಳಿದ ಪ್ರೀತಿಯ ಕಿಡಿಗಳು, ಸಂಬಂಧದ ಆಪ್ತತೆಗಳು, ಜಾತಿಯ ಹೆಸರಿನ ಕ್ರೂರ ಗೋಡೆಗಳು, ತೀವ್ರ ಭಾವನಾತ್ಮಕವಾದ ವೈಯಕ್ತಿಕತೆ ಮತ್ತು ರೋಚಕ ಸಾರ್ವಜನಿಕತೆ? ಇವುಗಳಿಂದ ಕೂಡಿದ ಆ ಪ್ರಕರಣವು ಟೆಲಿವಿಷನ್ ಸೀರಿಯಲ್‌ಗೆ ಹೇಳಿಮಾಡಿಸಿದ ವಿಷಯವಾಗಿತ್ತು.

ಹೀಗಾಗಿ ಜನರ ಮನಸ್ಸಿನಲ್ಲಿ ಹಸಿರಾಗಿದ್ದ ಆ ವಿಷಯವು ಸುಮಾರು ಮೂರು ಶತಮಾನಗಳವರೆವಿಗೂ ಜನತೆಯ ನಡುವೆ ಜೀವಂತವಾಗಿದ್ದು 1955ರಲ್ಲಿ ಮರಾಠಿ ಭಾಷೆಯಲ್ಲಿ ಒಂದು ಚಲನಚಿತ್ರವಾಗಿ ಮೂಡಿಬಂದಿತು. ಇತಿಹಾಸಕಾರ ಎನ್.ಎಸ್.ಇನಾಮ್‌ದಾರ್ ಅವರ ಚಾರಿತ್ರಿಕ ಕಾದಂಬರಿ ಯಾಧಾರಿತ ಮರಾಠಿ ಸೀರಿಯಲ್ 'ರಾವ್' 1990ರಲ್ಲಿ ಪ್ರದರ್ಶಿತವಾಗಿ ಅಪಾರ ಜನಮನ್ನಣೆಯನ್ನು ಪಡೆಯಿತು. 2003ರಲ್ಲಿ ಸಂಜಯ್ ಲೀಲಾ ಬನ್ಸಾಲಿ ಬಾಜಿರಾವ್ ಮಸ್ತಾನಿ ಎಂಬ ಹೆಸರಿನ ಚಲನಚಿತ್ರವನ್ನು ಮಾಡುವುದಾಗಿ ಪ್ರಕಟಿಸಿದ್ದು, ಆ ಯೋಜನೆ ಇನ್ನೂ ಕಾರ್ಯಗತಗೊಂಡಿಲ್ಲ.

2012ರ ಜುಲೈ ತಿಂಗಳಲ್ಲಿ ಪುಣೆಯ ಪ್ರಭಾತ್ ರಸ್ತೆಯಲ್ಲಿರುವ ವೈಭವೋಪೇತ ಬಂಗಲೆಯ ಒಡೆಯ ಮತ್ತು ಮಹಾರಾಷ್ಟ್ರ ಸರ್ಕಾರದ ಸಲಹೆಗಾರನಾಗಿರುವ 73 ವರ್ಷದ ವಿನಾಯಕ ವಿಶ್ವನಾಥ ಪೇಶ್ವೆ ಬಹಾದುರ್ ಒಬ್ಬ ವಿಶೇಷ ಅತಿಥಿಯನ್ನು ಬರಮಾಡಿಕೊಳ್ಳಲು ನಿರೀಕ್ಷಿಸುತ್ತಿದ್ದ. ಆ ನಿರೀಕ್ಷೆಯ ಮೇರೆಗೆ ಆಗಮಿಸಿದಾತನೇ 25 ವರ್ಷ ವಯಸ್ಸಿನ ಉಮರ್ ಅಲಿ ಬಹಾದುರ್. ಅವರಿಬ್ಬರೂ ಬಾಲಾಜಿ ಬಾಜಿರಾವ್ ಮತ್ತು ಮಸ್ತಾನಿಯ ಎಂಟನೆಯ ಪೀಳಿಗೆಯವರಾಗಿದ್ದರು. ಉತ್ತರ ಪ್ರದೇಶದ ಹಡಪ್ಸರ್‌ನಲ್ಲಿ ಕಾರುಗಳ ಮಾರಾಟ ಮಳಿಗೆಯಲ್ಲಿ ಸೇಲ್ಸ್ ಆಫೀಸರ್ ಆಗಿರುವ ಉಮರ್‌ನನ್ನು ಅತ್ಯಂತ ಪ್ರೀತಿಯಿಂದ ಆಲಂಗಿಸಿದ ವಿನಾಯಕ ಪೇಶ್ವೆ, ಉಮರ್ ಮತ್ತು ಆತನ ಕುಟುಂಬದವರು ತಮ್ಮ ಪೇಶ್ವೆ ಕುಟುಂಬದ ಒಂದು ಶಾಖೆ ಎಂದು ಘೋಷಿಸುವುದರ ಮೂಲಕ ಮೂರು ಶತಮಾನಗಳ ಕೌಟುಂಬಿಕ ವೈರತ್ವವನ್ನು ಕೊನೆಗಾಣಿಸುವ ಯಶಸ್ವಿ ಪ್ರಯತ್ನವನ್ನು ಮಾಡಿದರು.

ಅವರಿಬ್ಬರೂ ತಮ್ಮ ಕುಟುಂಬದ ಮೂಲ ಎಳೆಯನ್ನು ಒಪ್ಪುವ ಮತ್ತು ಅದನ್ನು ಗೌರವಿಸುವ ಮೂಲಕ ಸೌಹಾರ್ದದ ಅನೇಕ ಜಂಟಿ ಪ್ರಯತ್ನಗಳನ್ನು ಆರಂಭಿಸಿದ್ದಾರೆ. ಪಬಾಲ್‌ನಲ್ಲಿರುವ ಮಸ್ತಾನಿಯ ಗೋರಿಯ ಪುನರ್ನವೀಕರಣ ಕಾರ್ಯ ಹಾಗೂ ಉಭಯ ಕುಟುಂಬಗಳು ಪರಸ್ಪರ ಸೇರುವುದರ ಮೂಲಕ ಉಭಯ ಕುಟುಂಬಗಳ ನಡುವೆ ಸೌಹಾರ್ದಯುತ ಸಂಬಂಧಗಳನ್ನು ಮೂಡಿಸುವತ್ತ ಶ್ರಮಿಸಬೇಕೆಂಬುದು ಅವರಿಬ್ಬರ ಮುಂದಿನ ಮನೋಗತ. ತನ್ನನ್ನು ತಾನೇ ಕೊಂಕಣಸ್ಥ ಬ್ರಾಹ್ಮಣ ಮುಸ್ಲಿಮ್ ಎಂದು ಕರೆದುಕೊಳ್ಳುವ ಉಮರ್, ಹೊಸ ಇತಿಹಾಸವನ್ನು ಸೃಷ್ಟಿಸುವ ಹುಮ್ಮಸ್ಸಿನಲ್ಲಿದ್ದಾನೆ.

ಆದರೆ, ಬಾಜಿರಾವ್‌ನನ್ನು ಆತನ ಕುಟುಂಬವು ಬೆಂಬಲಿಸಿದ್ದರೆ... ಮತ್ತು ಮಸ್ತಾನಿಯನ್ನು ಆತನ ವಿವಾಹಿತ ಪತ್ನಿ ಎಂದು ಪುಣೆಯ ಸಂಪ್ರದಾಯಸ್ಥ ಬ್ರಾಹ್ಮಣರು ಸಮ್ಮತಿಸಿದ್ದರೆ ಬಹುಶಃ ವಿಭಿನ್ನ ಇತಿಹಾಸ ಸೃಷ್ಟಿಯಾಗುತ್ತಿತ್ತೇ? ಇತಿಹಾಸದ ಈ ಬೆಳಕಿಂಡಿಯ ಬೆಳಕಿನಲ್ಲಿ ಸಮಕಾಲೀನ ಬದುಕಿನ ಸವಾಲುಗಳನ್ನು ಎದುರಿಸುತ್ತಿರುವ ಇಂದಿನವರಿಗೆ ಯಾವ ಉತ್ತರ ದೊರಕೀತು? ಖಾಪ್ ಪಂಚಾಯತಿಗಳು ಇನ್ನಷ್ಟು ಕ್ರೂರ ತೀರ್ಮಾನಗಳ ಮೂಲಕ ಜನರನ್ನು ಆಳುವ ವ್ಯವಸ್ಥಿತ ಹುನ್ನಾರಗಳನ್ನು ನಡೆಸುತ್ತಿರುವ ಈ ಸಂದರ್ಭದಲ್ಲಿ ಇತಿಹಾಸದ ಕಾಲ ಚಕ್ರವು ನಿಂತೇ ಹೋಗಿದೆಯೇ ಅಥವಾ ಇತಿಹಾಸವು ಮರುಕಳಿಸುತ್ತಿದೆಯೋ? ಎನ್ನುವ ಅನೇಕಾನೇಕ ಪ್ರಶ್ನೆಗಳನ್ನು ನಿಮ್ಮೆಲ್ಲರೊಡನೆ ಹಂಚಿಕೊಳ್ಳುತ್ತಿದ್ದೇನೆ.



● ಬಾನು ಮುಷ್ತಾಕ್



ಅಂಬಿ ಅನಾರೋಗ್ಯದ ಅಸಲೀ ಕತೆ

ಸ್ಪಿರಿಟ್ಟು ಸಿಗರೇಟು ಇಸ್ಪೀಟು..!

ಅದು ಅಂಬರೀಶ್ ದಿನಚರಿಯ ಯಾವುದೇ ದಿನದಂಥದ್ದೇ ಒಂದು ದಿನ. ಅವರ ಜೆ.ಪಿ.ನಗರದ ಬಂಗಲೆ ಯೆದುರು ಕಮ್ಮಿಯೆಂದರೂ ಅರವತ್ತೆಪ್ಪತ್ತರಷ್ಟು ಮಂದಿ ದೊರೆಯ ದರುಶನಕ್ಕೆಂಬಂತೆ ಕಾಯುತ್ತಿದ್ದಾರೆ. ಮನೆಯ ಒಳಗೆ ಅಂದರೆ ಹಾಲಿನಲ್ಲಿ ಏನಿಲ್ಲವೆಂದರೂ ಮೂವತ್ತು ಮಂದಿ ಕೂತಿರಬೇಕು. ಬಂದವರ ಪೈಕಿ ಬಹುತೇಕರು ಅಂಬಿ ಬೆಂಬಲಿಗರು. ವಿಶೇಷವಾಗಿ ಮಂಡ್ಯ ಭಾಗದಿಂದ ಏನೇನೋ ಕೆಲಸಕ್ಕೆಂದು ಬಂದ ರೈತಾಪಿಗಳೂ ಇದ್ದಾರೆ.

ಸಮಯ ಅಪರಾಹ್ನ ಹನ್ನೆರಡಾದರೂ 'ಅಣ್ಣ ಇನ್ನೂ ಎದ್ದಿಲ್ಲ...!' ಎಂದ ಮನೆಯವರಿಂದ ಬರುತ್ತಿದ್ದ ಉತ್ತರ ಕೇಳಿದ ದರ್ಶನಾರ್ಥಿಗಳೆಲ್ಲ ಇದ್ದಕ್ಕಿದ್ದಂತೆ ಎದ್ದು ನಿಲ್ಲುತ್ತಾರೆ. ಪಾಳೆಗಾರನೊಬ್ಬನ ದರ್ಬಾರಿನಂತೆ ಹಾಲ್‌ನಲ್ಲಿದ್ದ ಪರಮಾಪ್ತರು ಮತ್ತು ಹೊರಗೆ ಕಾಯುತ್ತಿದ್ದವರೆಲ್ಲ ಇದ್ದಕ್ಕಿದ್ದಂತೆ ಎದ್ದು ನಿಂತು ಇಡೀ ವಾತಾವರಣವೆಲ್ಲ ಮೌನ ಆವರಿಸುತ್ತಿದ್ದಂತೆ ಬಾಲ್ಕನಿಯಲ್ಲಿ ದೈತ್ಯ ಆಕೃತಿಯಂತೆ ಅಂಬಿ ಗೋಚರವಾಗುತ್ತಾರೆ. ಕೆದರಿದ ತಲೆಗೂದಲು, ಊದಿದ ಮುಖ, ಉರಿಯುವ ಕಣ್ಣುಗಳು, ಇನ್ನೂ ನಿದ್ದೆ ಬಿಟ್ಟಿಲ್ಲವೆಂಬಂತೆ ಕಣ್ಣುಜ್ಜಿಕೊಳ್ಳುತ್ತಲೇ ಮೆಟ್ಟಿಲಿಳಿಯುತ್ತಿದ್ದ ಅಂಬಿಯ ಮೈಮೇಲಿರುವುದು ಮೇಲೊಂದು ಟೀ ಶರ್ಟು ಮತ್ತೊಂದು ಬರ್ಮುಡಾ ನಿಕ್ಕರ್ ಮಾತ್ರ!

ಬಂದಿದ್ದೇ ಹಾಲಿನಲ್ಲಿದ್ದ ಸಿಂಹಾಸನದಂಥ ಸೋಫಾದಲ್ಲಿ ಅಂಗಾತ ಬಿದ್ದಂತೆ ಒರಗಿದ ಅಂಬಿ ಹೊರಗಿನ ಬೆಳಕಿಗೆ ಕಣ್ಣು ಕೊಡಲಾಗದೆ ತನ್ನೆರಡೂ ಕೈಗಳನ್ನು ಅಡ್ಡ ಹಿಡಿದು ಸುತ್ತುವರಿದಿದ್ದ ಅಷ್ಟೂ ಜನರೆದುರೇ ಸೋಫಾದ ಅಕ್ಕಪಕ್ಕ ಕೈಯಾಡಿಸುತ್ತಾರೆ. ಅದೇನನ್ನೋ ತಡಕಾಡಿದಂತೆ ಬೇಕಾದ್ದು ಸಿಗಲಿಲ್ಲ ಎಂದು ರೊಚ್ಚಿಗೆದ್ದಂತೆ ಇದ್ದಕ್ಕಿದ್ದಂತೆ ಕೆಂಡಾಮಂಡಲರಾಗಿ 'ಸೂ... ಮಕ್ಳಾ ಎಲ್ಲೋ ಸಿಗರೇಟು? ನಿಮ್ಮಮ್ಮನ್ನಾ... ಲೋಫರ್ ನನ್ ಮಕ್ಳಾ ಎಲ್ಲೋ ಸಿಗರೇಟು, ಸೂ.... ಮಕ್ಳು ನನ್ ಸಿಗರೇಟನ್ನೂ ಮಾರಕೊಂಡು ತಿಂತೀರೇನ್ರೋ.... ಥೂ...! ..!! ..!!!' ಎಂದು ವಾಚಾಮಗೋಚರ ಬಯ್ಯುತ್ತಲೇ ಕ್ಯಾಕರಿಸಿ ಉಗಿದುಬಿಟ್ಟರು.

ತ್ರಿಬ್ಬಲ್ ಫೈವ್!

ಇಷ್ಟಾಗುತ್ತಿದ್ದಂತೆ ಅಕ್ಕಪಕ್ಕ ಥರಗುಟ್ಟಿದ ಶ್ರೀನಿವಾಸ್, ರುದ್ರೇಗೌಡ, ಪರಮೇಶ್ ಥರದವರೆಲ್ಲ ಅಣ್ಣಾ ಸಿಗರೇಟು ಇಲ್ಲೇ ಇದೆ, ಅಲ್ಲಿದೆ, ಇಲ್ಲಿದೆ ಎಂದು ಹುಡುಕಾಡಿ ಮೇಲಿನ ಬೆಡ್‌ರೂಮಿನಿಂದ ಪ್ಯಾಕು ತ್ರಿಬ್ಬಲ್ ಫೈವ್ ಸಮೇತ ಲೈಟರನ್ನು ತಂದು ಎದುರಿಡುತ್ತಾರೆ. ಸಿಗರೇಟು ಸಿಕ್ಕಿದ್ದೇ ಸಿಟ್ಟಿಳಿದಂತೆ ಮೆತ್ತಗಾದ ಅಂಬಿ ಅದರಿಂದ ಒಂದನ್ನೆಳೆದು ಬೆಂಕಿ ಹತ್ತಿಸಿಕೊಂಡಿದ್ದೇ ಸುದೀರ್ಘ ಧಮ್ಮೊಂದನ್ನು ಎಳೆದು ಅಂಗಾತ ಬಿದ್ದಂತೆಯೇ ಸುರುಳಿಸುರುಳಿಯಾಗಿ ಹೊಗೆಬಿಟ್ಟು ದೀರ್ಘ ಉಸಿರೆಳೆದುಕೊಂಡು ಎದುರು ನಿಂತಿದ್ದವರನ್ನೆಲ್ಲ ಒಮ್ಮೆ ಕಣ್ಣುಬಿಟ್ಟು ನೋಡುತ್ತಿದ್ದಂತೆಯೇ ಮನೆಕೆಲಸದಾಕೆ ಬಂದಿದ್ದೇ ಬಕೆಟ್ಟು ತುಂಬ ನೀರಿನಿಂದ ನೆಲ ಒರೆಸುವ ಬಟ್ಟೆ ತೆಗೆದಿದ್ದೇ ನೆಲಕ್ಕೆ ಉಗಿದಿದ್ದ ಎಂಜಲನ್ನು ಒರೆಸಲಾರಂಭಿಸುತ್ತಾಳೆ!

ಇದಾಗಿ ಇಲ್ಲಿಗೆ ಹತ್ತು ವರ್ಷಗಳಾಗಿರಬೇಕು. ಆ ಹೊತ್ತಿಗೆ ಅಂಬಿ ಮಂಡ್ಯದ ಸಂಸದ. ಮಂಡ್ಯದಿಂದ ಬೆಳ್ಬೆಳಗ್ಗೆಯೇ ಬಂದು ಸೂರ್ಯ ನೆತ್ತಿಗೇರುವ ತನಕವೂ ಕೈಕಟ್ಟಿ ನಿಂತು ಕಾಯುತ್ತಿದ್ದವರೆಲ್ಲರೂ ಒಂದುಕ್ಷಣ ಅಂಬಿಯ ರುದ್ರಾವತಾರ ಕಂಡು ಬೆಚ್ಚಿಬಿದ್ದವರಿಗೆ ಅದರ ಮರುಗಳಿಗೆಯಲ್ಲೇ ಅಂಬಿಯ ಮತ್ತೊಂದು ಮುಖ ಗೊತ್ತಾಗುತ್ತದೆ. ಯಾರನ್ನೋ ಗುರುತು ಹಿಡಿದು ಕರೆದು 'ಈ ನನ್ ಮಗನಿಗೆ ಹತ್ತು ಸಾವಿರ ಕೊಟ್ಟು ಕಳಿಸು' ಎನ್ನುತ್ತಾರೆ. 'ಏನ್ ಗೌಡ್ರೇ... ಅಪರೂಪಕ್ಕೆ ಈ ಕಡೆ ಬಂದ್ರಿ?' ಎಂದಿದ್ದೇ ರೈತನೊಬ್ಬನ ಅರ್ಜಿಯನ್ನು ತನ್ನ ಸಹಾಯಕನಿಗೊಪ್ಪಿಸಿ ತಕ್ಷಣವೇ ಪತ್ರವೊಂದನ್ನು ಮಾಡಿಕೊಡುವಂತೆ ಆದೇಶಿಸುತ್ತಾರೆ.

ಬಂದವರೆಲ್ಲರಿಗೂ ಶಿಫಾರಸ್ಸು ಪತ್ರವೋ, ಅಧಿಕಾರಿಗಳಿಗೆ ಫೋನಾಯಿಸುವುದೋ, ಕೈಗೆ ಸಿಕ್ಕಷ್ಟು ಕಾಸು ಕೊಡುವುದೋ ಮಾಡುತ್ತಲೇ ನಡುನಡುವೆ ಪೋಲಿ ಜೋಕು, ತಮಾಷೆಯ ಬೈಗುಳ ಬಯ್ಯುತ್ತಲೇ ಬಂದ ಪ್ರತಿಯೊಬ್ಬರನ್ನೂ ನಗಿಸುತ್ತಲೇ ಬೀಳ್ಕೊಡುವುದು ಅಂಬಿಯ ಮತ್ತೊಂದು ಮುಖ!

ವಿಕ್ರಂ ಆಸ್ಪತ್ರೆಯಲ್ಲಿ

ಕಲಿಯುಗ ಕರ್ಣ, ಪಾಳೇಗಾರ, ಜಮದಗ್ನಿ, ಶುದ್ಧ ಒರಟ; ಇತ್ಯಾದಿ ಏನೆಲ್ಲ ಅಂಬಿ ಕುರಿತಂತೆ ಜನಕ್ಕೆ ತರಹೇವಾರಿ ನಂಬಿಕೆಗಳಿವೆಯೋ ಆ ಪೈಕಿ ಅತೀ ಹೆಚ್ಚು ಚರ್ಚೆಗೊಳಗಾಗಿದ್ದು ಅವರ ಖಾಸಗಿ ಖಯಾಲಿಗಳು. ಅಂಬಿ ಓರ್ವ ಚೈನ್ ಸ್ಮೋಕರ್, ಬೆಳ್ಬೆಳಗ್ಗೆಯೇ ಕುಡಿಯುತ್ತಾರೆ, ಹೊತ್ತಲ್ಲದ ಹೊತ್ತಲ್ಲೂ ಇಸ್ಪೀಟಿಗೆ ಕೂತುಬಿಡುತ್ತಾರೆ ಎಂದೆಲ್ಲ ಅವರ ಆಪ್ತವಲಯ ಕತೆ ಕಟ್ಟಿ ಹೇಳುತ್ತದೆ. ಇಸ್ಪೀಟು, ಸಿಗರೇಟು ಮತ್ತು ಸ್ಪಿರಿಟ್ಟು ಅವರ ಬದುಕಿನ ಅವಿಭಾಜ್ಯ ಅನುಬಂಧವಾಗೇ ಸಾಗಿಬಂದದ್ದು ಅಂತಿಮವಾಗಿ ಅವರ ವೃತ್ತಿಬದುಕಿನ ಉಚ್ಛ್ರಾಯ ಸ್ಥಿತಿಯನ್ನೇ ನುಂಗಲಾರಂಭಿಸಿದೆಯೇ?

ಅಂಬಿಗೀಗ ವಯಸ್ಸು ಅರವತ್ಮೂರು. ಆ ಹಾಟಿ ದೇಹ ಮತ್ತು ವರ್ಚಸ್ಸಿಗೆ ಹೋಲಿಸಿದರೆ ಈ ವಯಸ್ಸಲ್ಲಿ ಮುಖಕ್ಕೆ ಆಮ್ಲಜನಕದ ಕವಚ ತೊಟ್ಟು ವಾರಗಟ್ಟಲೇ ಆಸ್ಪತ್ರೆಯಲ್ಲಿ ನರಳುವಂಥ ದುರ್ಗತಿಯಿರಲಿಲ್ಲ. ಆದೂ ತನ್ನ ರಾಜಕೀಯ ಬದುಕಿನ ಉತ್ತುಂಗದಲ್ಲಿರುವಾಗಲೇ ಮರಣಾವಸ್ಥೆಯ ಮಾತಿಗೆ ತಲೆಕೊಡಬೇಕಾಗಿರಲಿಲ್ಲ. ಸುಖ ಸಂಪತ್ತು, ಕೀರ್ತಿ, ಅಧಿಕಾರ ಎಲ್ಲವೂ ಒಟ್ಟೊಟ್ಟಿಗೆ ಕೈಗೂಡಿದ ಗಳಿಗೆಯಲ್ಲೇ ಅಂಬಿಗೆ ಆರೋಗ್ಯ ಕೈಕೊಟ್ಟಿದೆ.



ವೆಂಟಿಲೇಟರ್‌ನಲ್ಲಿ ಅಂಬಿ

ಅದೃಷ್ಟವಿನ್ನೂ ಅಂಬಿಯ ಪರವಾಗೇ ಇದೆ. ಬಹುಶಃ ವಿಕ್ರಂ ಆಸ್ಪತ್ರೆಯ ವೈದ್ಯರ ಲೆಕ್ಕಾಚಾರ ನಿಜವಾಯಿತೆಂದರೆ ಫೆಬ್ರವರಿ 27ರ ಶಿವರಾತ್ರಿಯಂದೇ ವೆಂಟಿಲೇಟರ್‌ನಿಂದ ಅಂಬಿಗೆ ಬಿಡುಗಡೆಯಾಗುತ್ತದೆ.

ಒಮ್ಮೆ ತೀವ್ರ ನಿಗಾ ಘಟಕದಿಂದ ಅಂಬಿ ಹೊರಬಿದ್ದರೆಂದರೆ ಅದೊಂದು ಪುನರ್ಜನ್ಮವೆಂಬಂತೆ ಟೀವಿಗಳು ಬೊಬ್ಬೆ ಹಾಕುವುದಕ್ಕೂ ಕಾರಣವಿದೆ. ಕಳೆದ ಐದಾರು ವರ್ಷಗಳಿಂದ ಅಂಬಿ ಬಗ್ಗೆ ಅತೀಹೆಚ್ಚು ಚರ್ಚೆಯಾಗಿದ್ದೇ ಅವರ ಅನಾರೋಗ್ಯ. ಪ್ರಾರಂಭದಲ್ಲಿ ಕುತ್ತಿಗೆಗೆ ಅದೇನೋ ಪೈಪು ಹಾಕಿ ಉಸಿರಾಡುತ್ತಿದ್ದಾರೆಂಬ ಸುದ್ದಿ ಬಂತು. ಇದಾಗಿದ್ದು ಇಲ್ಲಿಗೆ ಆರು ವರ್ಷಗಳ ಹಿಂದೆ. ಅದಾದನಂತರ ಲೀವರ್ ಸಮಸ್ಯೆಯೆಂಬ ವದಂತಿ ಹಬ್ಬಿತು. ತದನಂತರ ಕಿಡ್ನಿ ಸಮಸ್ಯೆಯ ಸುದ್ದಿ ಬಂತು. ಯಾವುದೋ ಆಸ್ಪತ್ರೆಯಲ್ಲಿದ್ದಾರಂತೆ. ಡಾಕ್ಟರ್ ಕುಡಿಯದಂತೆ ಎಚ್ಚರಿಸಿದ್ದಾರಂತೆ. ಅಂಬಿ ಅದ್ಯಾವುದೋ ಯೋಗ ಮಾಡುತ್ತಿದ್ದಾರಂತೆ. ನಡೆಯುವುದೇ ಕಷ್ಟವಂತೆ. ಚಿಕಿತ್ಸೆಗೆಂದು ಸಿಂಗಾಪೂರ್‌ಗೆ ಹೋಗಿದ್ದಾರಂತೆ- ಹೀಗೆ ಪದೇಪದೇ ಕೇಳಿಬರುತ್ತಿದ್ದ ಅಂಬಿ ಅನಾರೋಗ್ಯದ ವದಂತಿಗಳಿಗೆ ಪೂರಕವಾಗೇ ವರನಟ ರಾಜ್, ವಿಷ್ಣು ಥರದ ಹಿರೀಕರ ಸಾವುಗಳಾದವು. ಅಂಬಿಯ ದೇಹ ಲಕ್ಷಣಗಳಲ್ಲೂ ಬದಲಾವಣೆಗಳಾದವು. ಮುಖ ಅಗತ್ಯಕ್ಕೂ ಹೆಚ್ಚಿಗೆ ಊದಿಕೊಂಡಿತು. ತಲೆಕೂದಲು ಬೆಳ್ಳಗಾಯಿತು. ಕೊಂಚ ಅಸಹ್ಯ ಎನ್ನುವಷ್ಟು ದಪ್ಪಗಾದ ಅಂಬಿಯನ್ನು ಕಂಡ ಪ್ರತಿಯೊಬ್ಬರಿಗೂ ಬಯಸದೆ ಹೋದರೂ ಯಾವುದೋ ಅಪಾಯವೊಂದರ ವಾಸನೆ ಹೊಡೆಯುತ್ತಲೇ ಇತ್ತು.

ನವೆಂಬರ್‌ನ ಆ ದಿನ...

ಅದು ನಿಜವಾಗಿದ್ದು ಇಲ್ಲಿಗೆ ಮೂರು ತಿಂಗಳ ಹಿಂದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದು ಸಿದ್ದು ಮುಖ್ಯಮಂತ್ರಿಯಾಗಿದ್ದೇ ಪ್ರತಿಷ್ಠಿತ ವಸತಿ ಖಾತೆಗೆ ಸಚಿವರಾದ ಅಂಬಿಯನ್ನು


ವಿಕ್ರಂ ಆಸ್ಪತ್ರೆ




ವಿಕ್ರಂ ಆಸ್ಪತ್ರೆಯೆದುರು ಅಭಿಮಾನಿಗಳು

ಇಂಥ ಅಭಿಮಾನಿಗಳಿಗಾದರೂ ಅಂಬಿ ಬದುಕಬೇಕಲ್ಲವೇ !

ಅಂಬಿ ಅನಾರೋಗ್ಯದ ಆತಂಕದ್ದೇ ಒಂದು ತೂಕವಾದರೆ ಅವರ ಅಭಿಮಾನಿಗಳ ಅನುಬಂಧದ್ದೇ ಮತ್ತೊಂದು ತೂಕ. ಅಂಬಿ ವಿಕ್ರಂ ಆಸ್ಪತ್ರೆ ಸೇರಿ ಇವತ್ತಿಗೆ (ಫೆ.27) ಒಂದು ವಾರವಾಯಿತು. ದಿನದ ಯಾವುದೇ ...ಳಿಗೆಯಲ್ಲಿ ಮಸಂತನಗರದ ವಿಕ್ರಂ ಆಸ್ಪತ್ರೆಯೆದುರು ಕಮ್ಮಿಯೆಂದರೂ ನೂರು ಮಂದಿ ಅಭಿಮಾನಿಗಳ ಹಿಂದಿರುತ್ತದೆ. ಕೆಲವೊಮ್ಮೆ ಸಾವಿರದ ಲೆಕ್ಕದಲ್ಲಿ ...ಮಾಯಿಸುವ ಅಂಬಿ ಅಭಿಮಾನಿಗಳಿಗೆಂದೇ ಗೊರಗುಂಟೆಪಾಳ್ಯದ ಹುಟ್ಟಾ ಅಂಬಿ ಅಭಿಮಾನಿ ವಿ.ಸಿ. ದೇವರಾಜ್ ಯಾನೇ ಅಂಬಿರಾಜ ಆಸ್ಪತ್ರೆಯೆದುರಿಗೇ ಶಾಮಿಯಾನಾ ಒಂದನ್ನು ಹಾಕಿದ್ದಾರೆ.

ಆಸ್ಪತ್ರೆಯೆದುರಿನ ಶಾಮಿಯಾನಾದಲ್ಲಿ ಪ್ರತಿನಿತ್ಯ ಕಾಣುವ ಮತ್ತೊಬ್ಬ ಕಟ್ಟಾ ಅಭಿಮಾನಿಯೆಂದರೆ ಅದು ಮಂಡ್ಯ ಕೀಲಾರದ ಸಿಂಹಾದ್ರಿ ಫಾರ್ಮ್ ಹೌಸಿನ ಮಾಲಿಕ ರುದ್ರೇಗೌಡ. ಅಣ್ಣನ ಆರೋಗ್ಯ ಸರಿಹೋಯಿತೆಂದರೆ ಇಡೀ ಮಂಡ್ಯದ ಬಡವರಿಗೆಲ್ಲರಿಗೂ ಅನ್ನದಾನ ಇಟ್ಟುಕೊಳ್ತೀನಿ ಎಂದು ಆದಿಚುಂಚನಗಿರಿಗೆ ಹರಕೆ ಹೊತ್ತಿದ್ದೀನಿ ಎನ್ನುವ ರುದ್ರೇಗೌಡರ ಜೊತೆ ಮಂಡ್ಯದ ಹುಟ್ಟಾ ಅಂಬಿ ಅಭಿಮಾನಿಗಳದ್ದೇ ತಂಡವಿದೆ. ಈ ಪೈಕಿ ಕಾಂಗ್ರೆಸ್ ಮುಖಂಡ ಉಮ್ಮಡಹಳ್ಳಿ ಶಿವಪ್ಪ ಕೀಲಾರದ ಸಮಾಜ ಸೇವಕ ಸೋಮೇಗೌಡ, ಮತ್ತೊಬ್ಬ ಕಾಂಗ್ರೆಸ್ ಮುಖಂಡ ಹುಲ್ಲಾಳು ಸಿದ್ಧಾರೂಢ ಮುಂತಾದವರೆಲ್ಲ ಆ ಕಾಲದಿಂದಲೂ ಅಂಬಿಯನ್ನು ಆರಾಧಿಸಿಕೊಂಡೇ ಬಂದವರು.

ಇವರಲ್ಲದೆ ಮಾಕಳಿ ಪರಮೇಶ್, ಶಿವನಹಳ್ಳಿ ಶ್ರೀನಿವಾಸ್, ಗುರುಮೂರ್ತಿಯಂಥ ಅಂಬಿ ಭಕ್ತರು ಏನೋ ಕಳಕೊಂಡವರಂತೆ ಕಂಗಾಲಾಗಿ ಕುಳಿತಿದ್ದಾರೆ. ಎಲ್ಲೆಂದರಲ್ಲಿ ಹೋಮ-ಹವನ, ಹರಕೆ, ಕಟೌಟಿಗೆ ಅಭಿಷೇಕ ಮಾಡಿ ಅಂಬಿಯ ಒಳಿತಿಗಾಗಿ ಕಣ್ಣೀರಿಡುವ ಇಂಥ ಅಭಿಮಾನಿಗಳಿಗಾದರೂ ತನ್ನ ಆರೋಗ್ಯ ಕಾಪಾಡಿಕೊಳ್ಳದಿದ್ದರೆ ಹೇಗೆ?











...ಬಿಕೂತ ಬೆಂಬಲಿಗರ ದೊಡ್ಡ ಹಿಂಡೇ ಇತ್ತು. ರಾಜ್ಯಾದ್ಯಂತ ...ತವರಿಗೆ ಮನೆ ಕಟ್ಟಿಸಿಕೊಡುತ್ತೇನೆಂದು ಕಲಿಯುಗ ಕರ್ಣನ ...ನಲ್ಲೇ ಅಂಬಿ ಘೋಷಿಸಿದ್ದರು. ಅದು 2013ರ ...ಂಬರ್ ತಿಂಗಳಿರಬೇಕು. ಅದೊಂದು ಬೆಳಗ್ಗೆ ಇದ್ದಕ್ಕಿದ್ದಂತೆ ...ದೆ ಹಿಡಿದುಕೊಂಡು ಮಲಗಿದ್ದಲ್ಲಿಂದಲೇ ವಿಕಾರವಾಗಿ ...ಚಿಕೊಂಡರು.

ವಿಪರೀತ ಕೆಮ್ಮು. ಉಸಿರಾಡಲು ಹೋದರೇನೇ ಎದೆ ...ಡಿದುಕೊಂಡಂಥ ಯಾತನೆ. ಉಸಿರೆಳೆದುಕೊಳ್ಳುತ್ತಿದ್ದಂತೆಯೇ ...ಕಿತ್ತು ಬರುತ್ತಿತ್ತು. ಎಷ್ಟೇ ಕೆಮ್ಮಿ ಕಫ ಉಗುಳ ...ದರೂ ನಿಲ್ಲದ ಕಫದೊಳಗೆ ರಕ್ತದ ಬಣ್ಣ. ಗಾಬರಿಗೆ ...ಬಿದ್ದ ಮನೆಯವರೆಲ್ಲ ಅಂಬಿ ಫ್ಯಾಮಿಲಿ ವೈದ್ಯ ಡಾ. ...ವೀಶ್‌ರನ್ನು ಕರೆಸಿದ್ದಾರೆ. ಬಂದು ಎದೆಗೆ ಸ್ಟೆತಾಸ್ಕೋಪು ...ಇಡಿದ ಡಾ. ರವೀಶ್ ತಕ್ಷಣವೇ ಆಂಬುಲೆನ್ಸ್ ಕರೆಸಿ ...ಬಿಯನ್ನು ವಿಕ್ರಂ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಲ್ಲಿ ...ದು ವಾರ ಪೂರ್ತಿ ಮಲಗಿದ್ದ ಅಂಬಿಗೆ ವಿಕ್ರಂ ಆಸ್ಪತ್ರೆಯ ...ದ್ಯರು ಕಟ್ಟುನಿಟ್ಟಾಗೇ ಸಿಗರೇಟು ಬಿಡುವಂತೆ ತಾಕೀತು ...ಮಾಡಿದ್ದಾರೆ.

ಅಲ್ಲಿಂದಾಚೆಗೆ ಹೆಚ್ಚೂಕಮ್ಮಿ ಸಿಗರೇಟು ಸೇದುವುದನ್ನು ...ಸಿಯೇ ಬಿಟ್ಟ ಅಂಬಿ ಕೊಂಚ ಗೆಲುವಾಗಿದ್ದಾರೆ. ...ಸಿಕ್ಕವರಿಗೆಲ್ಲ ನಾನು ಸಿಗರೇಟು ಬಿಟ್ಟೆ, ಇನ್ನು ಕೆಲವೇ ...ಗಳಲ್ಲಿ ಕುಡಿಯುವುದನ್ನೂ ಬಿಡುತ್ತೇನೆ ಎಂದೆಲ್ಲ ...ಳಿಕೊಂಡಿದ್ದಾರೆ. ಇದಾಗಿ ಮೂರು ತಿಂಗಳ ತನಕ ...ಬಿ ಸಿಗರೇಟು ಸೇದಿದ್ದನ್ನು ಕಂಡವರಿಲ್ಲ. ಆದರೆ ಇಲ್ಲಿಗೆ ...ತ್ತು ದಿನಗಳ ಹಿಂದೆ ಅದ್ಯಾರೋ ನಾರಾಯಣ್ ಎಂಬ ...ದ್ಯಮಿಯೊಬ್ಬರ ಅನಾರೋಗ್ಯ ಕೈಕೊಟ್ಟು ಅವರಿನ್ನು ...ದುಕುವುದೇ ಕಷ್ಟ ಎಂದಾದಾಗ 'ಇದು ತನ್ನ ಬದುಕಿನ ...ಕಡೆಯ ಪಾರ್ಟಿ. ಇನ್ನು ಮುಂದೆ ಬದುಕಿರುತ್ತೇನೋ ...ಸಾವೋ ಗೊತ್ತಿಲ್ಲ. ನೀನು ಬರದೇ ಹೋದರೆ ನನ್ನ ...ಕ್ಕೆ ಶಾಂತಿ ಇರೋಲ್ಲ...' ಎಂದು ಉದ್ಯಮಿ ನಾರಾಯಣ್ ...ಗರೆದಿದ್ದಾರೆ.

ಈಗಲ್‌ಟನ್‌ನ ಪಾರ್ಟಿ

ಎಷ್ಟೆಂದರೂ ಅಂಬಿ ಸ್ನೇಹಜೀವಿ ತಾನೆ? ಮೈಸೂರು ...ಬಿಡದಿ ಬಳಿಯ ಈಗಲ್‌ಟನ್ ಎಂಬ ಗಾಲ್ಫ್ ಕ್ಲಬ್‌ನಲ್ಲಿ ...ದ ಪಾರ್ಟಿಗೆ ಕೊಂಚ ತಡವಾಗಿಯೇ ಬಂದಿದ್ದಾರೆ. ...ದ್ಯಮಿ ನಾರಾಯಣ್, ಮಂಡ್ಯದ ಕೆಲ ಮರಿನಾಯಕರು ...ತ್ತು ನೈಸ್ ಖೇಣಿಯಿದ್ದ ಆ ಪಾರ್ಟಿಯಲ್ಲಿ ಅಂಬಿ ...ಗೆ ಪ್ರಿಯವಾದ ಬ್ಲಾಕ್‌ಲೇಬಲ್ ಬ್ರಾಂಡಿನ ಸ್ಕಾಚ್ ...ದಿದ್ದಾರೆ. ಇನ್ನೇನು ಪಾರ್ಟಿ ಮುಗಿಯಬೇಕೆನ್ನುವಷ್ಟರಲ್ಲಿ ...ನಾರಾಯಣ್‌ರನ್ನು ಅಪ್ಪಿಕೊಂಡಿದ್ದೇ 'ಕಲ್ಲಿ ...ಹುಂಗಿದ್ದೀಯಲ್ಲಾ... ಯಾಕೋ ಸಾಯೋ ಮಾತಾಡ್ತೀಯಾ' ...ವಿದ್ದೇ ಗದ್ಗದಿತರಾಗಿ ಕೊಡೋ ಇಲ್ಲಿ ಎಂದು ...ಸಿಗರೇಟೊಂದನ್ನು ಎಳೆದುಕೊಂಡು ಸ್ಟೈಲಾಗಿ ಲೈಟರ್ ...ಹಚ್ಚಿ ಧಮ್ಮೊಂದನ್ನು ದೀರ್ಘವಾಗಿ ಎಳೆದು ಆಕಾಶಕ್ಕೆ ...ಬಿಟ್ಟಿದ್ದಾರೆ.

...ಆಟವು ಆರಂಭವಾಗಿದ್ದೇ ಅಲ್ಲಿಂದ. ಸತತ ಮೂರು ...ಗಳಿಂದ ಒಂದೇ ಒಂದು ಧಮ್ಮೆಳೆಯದೇ ಸ್ವಚ್ಛಂದವಾಗಿ ...ಉಸಿರಾಡುತ್ತ ಗೆಲುವಾಗಿದ್ದ ಅಂಬಿ ಸೇದಿದ ಸಿಗರೇಟು ...ಈಗಲ್‌ಟನ್ ಪಾರ್ಟಿಗೇ ಕೊನೆಯಾಗಬೇಕಿತ್ತು. ...ಆಗಲಿಲ್ಲ. ಹೇಗೂ ಮೂರು ತಿಂಗಳಿಂದ ಸೇದಿಲ್ಲವಲ್ಲ ...ದೇ ಸಿಗರೇಟ್ಗೆ ಬಿದ್ದರು. ಅದರ ಮರುದಿನಕ್ಕೆ ಮತ್ತೊಂದು. ...ಅದರ ಮರುದಿನಕ್ಕೆ ಎರಡು. ಹೀಗೆ ದಿನೇದಿನೇ ಸೇದುತ್ತಿದ್ದ ...ಸಿಗರೇಟುಗಳ ಸಂಖ್ಯೆ ಮತ್ತಷ್ಟಾಗುತ್ತಲೇ ಹೋಯಿತು. ...ವಿಪರೀತ ಕೆಮ್ಮು ಮರುಕಳಿಸಿತು.

ಈ ಹಂತದಲ್ಲಾದರೂ ಅಂಬಿ ಎಚ್ಚೆತ್ತುಕೊಳ್ಳಬೇಕಿತ್ತು. ಅದು ತ್ರಿಬ್ಬಲ್ ಫೈವ್ ಸಿಗರೇಟು. ಕಳೆದ ಮೂವತ್ತು-ನಲವತ್ತು ವರ್ಷಗಳಿಂದ ಅವರ ಬದುಕಿನ ಅವಿಭಾಜ್ಯ ಅಂಗದಂತೆಯೇ ಸಾಗಿಬಂದದ್ದು ಇಸ್ಪೀಟು, ಸಿಗರೇಟು ಮತ್ತು ಸ್ಪಿರಿಟ್ಟು. ಬ್ಲಾಕ್‌ಲೇಬಲ್ ಸ್ಕಾಚ್ ಅಂದರೇನೇ ಅಂಬಿಗೆ ಪಂಚಪ್ರಾಣ. ಸ್ಕಾಚ್‌ಗೆ ಐಸ್ ತುಣುಕುಗಳನ್ನು ತುಂಬಿಸಿಕೊಂಡು ಗುಟುಕರಿಸುತ್ತಲೇ ತ್ರಿಬ್ಬಲ್ ಫೈವ್ ಸಿಗರೇಟಂಟಿಸಿ ಧಮ್ಮೆಳೆಯುವುದು ಅಂಬಿಯ ಲೈಫ್‌ಸ್ಟೈಲಾಗಿ ಹೋಯಿತು. ಅದಕ್ಕೆ ತಕ್ಕಂತೆಯೇ ವಾರಕ್ಕೊಮ್ಮೆಯಾದರೂ ಇಸ್ಪೀಟು ಇರಲೇಬೇಕು.

ಕ್ಯೂಬನ್ ಸಿಗಾರ್

ಇಸ್ಪೀಟು, ಸಿಗರೇಟು, ಸ್ಪಿರಿಟ್ಟುಗಳಿಂದಾಗಿಯೇ ಅಂಬಿಗೆ ಕಾಶ್ಮೀರದ ಮುಖ್ಯಮಂತ್ರಿಯಾಗಿದ್ದ ಫಾರೂಕ್ ಅಬ್ದುಲ್ಲಾ, ಹಿಂದಿ ನಟ ಶತ್ರುಘ್ನ ಸಿನ್ಹಾ, ಚಿರಂಜೀವಿ, ಮೋಹನ್‌ಬಾಬು, ರಜನಿಕಾಂತ್ ಥರದ ಗೆಳೆಯರು ಸಿಕ್ಕರಾದರೂ ಅಂಬಿ ಮಾತ್ರ ಅದಕ್ಕೊಂದು ಮಿತಿ ಹಾಕಿಕೊಳ್ಳಲೇ ಇಲ್ಲ. ಮೊದಮೊದಲು ತ್ರಿಬ್ಬಲ್ ಫೈವ್ ಐಷಾರಾಮಕ್ಕೋ ಪ್ರತಿಷ್ಠೆಗೋ ಅಂತಿದ್ದದ್ದು ಕಾಲಕ್ರಮೇಣ ಜನ್ಮಕ್ಕಂಟಿದ ಶಾಪವಾಗಿತ್ತು. ಕನಿಷ್ಠ ಬ್ರಾಂಡಿಯಾದರೂ ಸಿಗರೇಟಿಗೆ ಸಂಗಾತಿಯಾಗಿದ್ದರೆ ಇಷ್ಟೊಂದು ಕಫ ಕಟ್ಟುತ್ತಿರಲಿಲ್ಲ. ಬ್ಲಾಕ್‌ಲೇಬಲ್ ಸ್ಕಾಚಿಗೆ ಐಸ್‌ತುಣುಕು ತುಂಬಿಸಿಕೊಂಡು ಹೀರಿಬಿಟ್ಟರೆ ಶೀತಕ್ಕೆ ಎಂಥವರಿಗೂ ಕಫ ಕಟ್ಟುತ್ತದೆ. ಅಂಥಾದ್ದರಲ್ಲಿ ಚೈನ್‌ಸ್ಮೋಕರ್ ಅಂಬಿಗೆ ಶೀತವಾಗದೆ, ಧಮ್ಮು ಕಟ್ಟದೆ ಇರುತ್ತಾ?

ಇಲ್ಲಿಗೆ ಆರು ವರ್ಷದ ಹಿಂದೆಯೇ ಉಸಿರಾಟದ ಸಮಸ್ಯೆಯಾದಾಗ ಅಪೋಲೋ ಆಸ್ಪತ್ರೆಯಲ್ಲಿ ಕೃತಕ ಉಸಿರಾಟದ ವ್ಯವಸ್ಥೆ ಮಾಡಲಾಗಿತ್ತು. ಪದೇಪದೇ ಶ್ವಾಸಕೋಶದ ಸಮಸ್ಯೆ ಕಾಣಿಸಿಕೊಳ್ಳತೊಡಗಿತ್ತು. 2008ರ ಹೊತ್ತಿಗೆ ಸಿಗರೇಟು ಮುಟ್ಟಲೇಬಾರದೆಂದು ವೈದ್ಯರು ಕಟ್ಟುನಿಟ್ಟು ಮಾಡಿದ್ದರು. ಆವತ್ತು ಒಂದೆರಡು ತಿಂಗಳ ಮಟ್ಟಿಗೆ ಸಿಗರೇಟು ಬಿಟ್ಟಿದ್ದ ಅಂಬಿ ರೇಸ್‌ಕೋರ್ಸ್‌ನ ಪಾರ್ಟಿಯೊಂದರಲ್ಲಿ ಕ್ಯೂಬನ್ ಸಿಗಾರ್ ಸೇದುವ ಮೂಲಕ ಮತ್ತೆ ಧಮ್ಮಿನ ಹಂಗಿಗೆ ಬಿದ್ದರು. ತ್ರಿಬ್ಬಲ್ ಫೈವ್‌ನಂತೆಯೇ ಕ್ಯೂಬನ್ ಸಿಗಾರ್ ಅವರಿಗೆ ಅಚ್ಚುಮೆಚ್ಚು. ಬೇಡಬೇಡವೆಂದರೂ ಕರೆದು ಇಸ್ಪೀಟಿಗೆ ಕೂರಿಸಿಕೊಳ್ಳುವ ಗೆಳೆಯರ ಹಿಂಡು. ಕುದುರೆ ರೇಸು, ಮಲ್ಯ ಖೇಣಿಯಂಥ ಶೋಕಿಲಾಲರ ಸಂಘದಿಂದ ಹೇಗೆ ಅಂಬಿ ಹೊರಬರುವುದು ಸಾಧ್ಯವಾಗಲಿಲ್ಲವೋ ಹಾಗೇ ರಕ್ತಗತವಾಗಿದ್ದ ವ್ಯಸನಗಳಿಂದಲೂ ಹೊರಬರಲಾಗಲಿಲ್ಲ.

2013ರ ನವೆಂಬರ್‌ನಲ್ಲಿ ಇನ್ನು ಸಿಗರೇಟಿನ ಸಹವಾಸವೇ ಬೇಡವೆಂದು ಮೂರು ತಿಂಗಳುಗಳ ಕಾಲ ನಿರಾಳವಾಗಿ ಉಸಿರಾಡುತ್ತಿದ್ದ ಅಂಬಿ 2014ರ ಫೆಬ್ರವರಿಯಲ್ಲಿ ಮತ್ತೆ ಸಿಗರೇಟು ಕೈಗೆತ್ತಿಕೊಂಡಾಗಲೇ ಅವರ ಆಪ್ತ ಬಳಗ ಆತಂಕಗೊಂಡಿತ್ತು. ಅದು ನಿಜವಾಗಿದ್ದು ಮೊನ್ನೆ ಫೆಬ್ರವರಿ 21ರ ಶುಕ್ರವಾರದಂದು. ಒಂದು ವಾರದಿಂದ ಹಿಂದಿನಂತೆ ಕೆಮ್ಮಲಾರಂಭಿಸಿದ್ದ ಅಂಬಿ ಶುಕ್ರವಾರದ ರಾತ್ರಿ ಹೊತ್ತಿಗೆ ಉಸಿರಾಡುವುದೇ ಕಷ್ಟವೆಂದು ಎದೆ ಹಿಡಿದುಕೊಂಡು ಪ್ರಜ್ಞೆ ತಪ್ಪಿದ್ದಾರೆ. ಭೀತಿಗೆ ಬಿದ್ದ ಸುಮಲತಾ ವಿಕ್ರಂ ಆಸ್ಪತ್ರೆಗೆ ಕರೆದೊಯ್ಯುವ ಹೊತ್ತಿಗೆ ಕಾಲ ಮಿಂಚಿತ್ತು. ಶ್ವಾಸಕೋಶದ ಸೋಂಕು ವಿಪರೀತಕ್ಕೇರಿ ಉಸಿರಾಡುವುದೇ ದುಸ್ತರವಾಗಿತ್ತು.

ತಪ್ಪದ ಆತಂಕ



ಇನ್ನೆಲ್ಲಿ ಯಡವಟ್ಟಾಗುತ್ತೋ ಎಂದು ಮುಖಕ್ಕೆ ಕೃತಕ ಉಸಿರಾಟದ ಕವಚ ತೊಡಿಸಿದ ವಿಕ್ರಂ ಆಸ್ಪತ್ರೆಯ ವೈದ್ಯರಿಗೆ ದಿನೇದಿನೇ ಹೊಸ ಹೊಸ ಸಮಸ್ಯೆಗಳು ಎದುರಾದವು. ಒಂದೆಡೆ ಬೀಪಿ, ಮತ್ತೊಂದೆಡೆ ಶ್ವಾಸಕೋಶದ ಸೋಂಕು, ಇನ್ನೊಂದೆಡೆ ಸಕ್ಕರೆ ಕಾಯಿಲೆಯಿಂದಾಗಿ ಲೀವರ್ ನಿಷ್ಕ್ರಿಯವಾಗಿತ್ತು. ವಿಕ್ರಂ ಆಸ್ಪತ್ರೆಯ ತೀವ್ರ ನಿಗಾದಲ್ಲಿ ಸತತ ಮೂರು ದಿನಗಳ ಕಾಲ ಪ್ರಜ್ಞೆಯಿಲ್ಲದೆ ಬಿದ್ದುಕೊಂಡಿದ್ದ ಅಂಬಿಯ ಕಿಡ್ನಿಗಳಿಗೂ ಸೋಂಕು ತಗುಲಿ ಫೆಬ್ರವರಿ 24ರ ಸೋಮವಾರದ ಹೊತ್ತಿಗೆ ಅವರ ದೇಹದಿಂದ 11 ಲೀಟರ್‌ಗಳಷ್ಟು ನೀರನ್ನು ಹೊರತೆಗೆಯಲಾಯ್ತು.

ಅಂಬಿ ಆಸ್ಪತ್ರೆ ಸೇರಿ ಇವತ್ತಿಗೆ ಒಂದು ವಾರವಾಯ್ತು. ಆದಿಚುಂಚನಗಿರಿ ಸ್ವಾಮೀಜಿ ಮೊದಲಾಗಿ ಮುಖ್ಯಮಂತ್ರಿಯತನಕ ಪ್ರತಿಯೊಬ್ಬರೂ ಆರೋಗ್ಯ ವಿಚಾರಣೆಗೆಂದು ವಿಕ್ರಂ ಆಸ್ಪತ್ರೆಗೆ ಬರುತ್ತಿದ್ದಾರಾದರೂ ಅಂಬಿ ಮಾತ್ರ ವೆಂಟಿಲೇಟರ್‌ನಿಂದ ಹೊರಬರುತ್ತಿಲ್ಲ. ಇವತ್ತು ಅಂದರೆ ಫೆಬ್ರವರಿ 27ಕ್ಕೆ ಬಂದ ಒಂದೇ ಒಂದು ಸಂತೋಷದ ಸುದ್ದಿಯೆಂದರೆ ಅಂಬಿ ಕಣ್ಣುಬಿಟ್ಟು ಎದುರಿದ್ದವರನ್ನು ಗುರುತಿಸುತ್ತಿದ್ದಾರಾದರೂ ಮಾತಾಡುವ ಸ್ಥಿತಿಯಲ್ಲಿಲ್ಲ. ಅಲ್ಲಿಗೆ ಅಂಬಿಯ ಅನಾರೋಗ್ಯದ ಕುರಿತಂತೆ ಕವಿದ ಆತಂಕ ಕರಗಿದಂತೆಯೇ ನಿಜ. ಅಪಾಯವಿನ್ನೂ ತಪ್ಪಿಲ್ಲ.


ಬದುಕಿಗಿಂತ ವ್ಯಸನಗಳು ಅಮೂಲ್ಯವೇನಲ್ಲ. ಚಟ್ಟಿ ಸುಖಕ್ಕೆ ಕಟ್ಟಬೇಕಾದ ದಂಡ ಕೂಡ ಸಣ್ಣದೇನಲ್ಲ. ಹೊತ್ತ ಹೊಣೆ, ಸಿಕ್ಕ ಅಧಿಕಾರ, ನಂಬಿದ ಜನ, ಪ್ರಾಣಕ್ಕೆ ಪ್ರಾಣ ಕೊಡುವ ಅಭಿಮಾನಿ ಬಳಗದ ಮುಂದೆ ತ್ರಿಬ್ಬಲ್ ಫೈವ್, ಬ್ಲಾಕ್‌ಲೇಬಲ್ ಯಾವ ತೃಣ? ಅಂಬಿಗಿದು ಅರ್ಥವಾಗಬೇಕು. ಕನಿಷ್ಠ ತನ್ನನ್ನು ನಂಬಿದವರಿಗಾದರೂ ಅಂಬಿ ಬದುಕಬೇಕು.

ಏಕೆಂದರೆ ನಾಡಿಗೊಬ್ಬನೇ ಅಂಬಿಯೇ ಹೊರತು ಮತ್ತೊಬ್ಬನಿಲ್ಲ!

ಮತ್ತೊಬ್ಬ ಅಂಬಿಯನ್ನು ತರಬಹುದಾಗಿದ್ದರೆ ಅಭಿಮಾನಿಗಳೇಕೆ ಈ ಪಾಟ ಕಣ್ಣೀರಿಡುತ್ತಿದ್ದರು? ಜನರ ಪ್ರೀತಿಗಿಂತ ಮಿಗಿಲಾದ ಸುಖ ಸಿಗರೇಟಿನಲ್ಲಿದೆಯಾ?

● ರಾ.ಸೋಮನಾಥ್

ಮಹಿಳಾ ವಿಶೇಷಾಂಕ




ಎಳೆಯ ಮನಸುಗಳು ಮತಾಂಧತೆಯಲ್ಲಿ ಕಳೆದುಹೋಗದಿರಲಿ

ಯುವಜನತೆ (ಯುವತಿಯರ ಸಹಿತವಾಗಿ) ಕೋಮುವಾದ ಮತ್ತು ಜಾತೀಯತೆಗೆ ವೇಗವಾಗಿ ಬಲಿಯಾಗುತ್ತಿದೆ. ಜನಪರ, ಜೀವಪರ ಹೋರಾಟಗಳ ಭಾಗವಾಗಬೇಕಿದ್ದ ಯುವಶಕ್ತಿ ಜಾತ್ಯತೀತತೆ, ಪರಮತ ಸಹಿಷ್ಣುತೆಯನ್ನು ಮೈಗೂಡಿಸಿಕೊಂಡಿರಬೇಕಾದ ಯುವಪೀಳಿಗೆ ಮತೀಯತೆಯನ್ನು ಅಂತರ್ಗತ ಮಾಡಿಕೊಳ್ಳುವ ವೇಗವನ್ನು ಗಮನಿಸಿದರೆ ಇದು ಮುಂದಿನ ರಕ್ತಸಿಕ್ತ ಇತಿಹಾಸಕ್ಕೆ ನಾವೇ ಬರೆದುಕೊಳ್ಳುತ್ತಿರುವ ಮುನ್ನುಡಿ ಎಂದು ಊಹಿಸಿಕೊಳ್ಳಲೂ ಭಯವಾಗುತ್ತಿದೆ.

ಮೂರು ನಾಲ್ಕು ವರ್ಷಗಳ ಹಿಂದಿನ ಘಟನೆ. ಮುದ್ದಾದ ಕೈಬರಹದಲ್ಲಿ ನನ್ನ ಕಚೇರಿಯ ವಿಳಾಸಕ್ಕೆ ನನಗೆ ಪತ್ರವೊಂದು ಬಂದಿತ್ತು. ಪತ್ರ ವ್ಯವಹಾರಗಳು ಇಲ್ಲವಾಗುತ್ತಿರುವ ದಿನಗಳಲ್ಲೇ ಬಂದಂತಹ ಅಪರೂಪದ ಖಾಸಗಿ ಪತ್ರವನ್ನು ಸಹಜ ಕುತೂಹಲದಿಂದಲೇ ತೆರೆದೆ. ಸೊಗಸಾದ ಕನ್ನಡದಲ್ಲಿ ಸಾಹಿತ್ಯಭರಿತ ಭಾಷೆಯಲ್ಲಿ ಬರೆದ ನಾಲ್ಕಾರು ಪುಟಗಳಷ್ಟಿದ್ದ ಓಲೆ ಅದರೊಳಗಿತ್ತು. ಪದವಿಪೂರ್ವ ತರಗತಿಯಲ್ಲಿ ಓದುತ್ತಿರುವ ಕಿಶೋರಿಯೊಬ್ಬಳು ತನ್ನ ಮನದ ತೊಳಲಾಟಗಳನ್ನು ಅತ್ಯಂತ ಭಾವುಕವಾಗಿ ಮತ್ತು ಆಪ್ತವಾಗಿ ಅದರಲ್ಲಿ ತೋಡಿಕೊಂಡಿದ್ದಳು. ನಾನು ಆಗೊಮ್ಮೆ ಈಗೊಮ್ಮೆ ಬರೆಯುತ್ತಿರುವ ಕೆಲ ಲೇಖನಗಳನ್ನು ಓದಿ ಆಕೆಯ ಎಲ್ಲ ಸಮಸ್ಯೆಗಳಿಗೆ ನಾನು ಪರಿಹಾರ ಕೊಡಬಲ್ಲವಳು ಎಂದು ತಿಳಿದುಕೊಂಡೋ ಏನೋ, 'ನನ್ನಲ್ಲಿ ಈ ದಿನಗಳಲ್ಲಿ ತುಂಬಾ ದೇಶಪ್ರೇಮ ಮೂಡುತ್ತಿದೆ, ಓದಿಗಿಂತ ಹೆಚ್ಚಾಗಿ ನನ್ನ ಗಮನ ದೇಶದ ಹಿತಾಸಕ್ತಿಯತ್ತಲೇ ವಾಲುತ್ತಿದೆ, ನಾನು ನನ್ನ ದೇಶಕ್ಕೆ ಏನನ್ನಾದರೂ ಕೊಡಬೇಕು, ನನಗೆ ದಾರಿ ತೋರಿಸಿ' ಎಂದು ಸಮಸ್ಯೆಯನ್ನು ನಿವೇದಿಸಿಕೊಂಡಿದ್ದಳು. ಜತೆಗೆ, 'ನಾನೀಗ ಕತೆ ಕವನಗಳನ್ನು ಬರೆಯಲು ಆರಂಭಿಸಿರುವೆ, ಅದು ನನಗೆ ಅಪಾರ ಆನಂದವನ್ನು ಕೊಡುತ್ತಿದೆ' ಎಂದು ಬರೆಯುತ್ತಾ, ನನ್ನ ಮೇಲೆಯೇ ಪುಟ್ಟ ಕವನವೊಂದನ್ನು ಬರೆದು ಕಳುಹಿಸಿದ್ದಳು. ಇನ್ನೂ ಹದಿಹರೆಯದ ಹುಡುಗಿ, ಚೆನ್ನಾಗಿ ಓದಿ ತನ್ನ ವ್ಯಕ್ತಿತ್ವವನ್ನು ವಿಕಸನಗೊಳಿಸಿ ಕೊಂಡು ಸುಂದರ, ಸುಭದ್ರ ಭವಿಷ್ಯವನ್ನು ಕಟ್ಟಿಕೊಳ್ಳಬೇಕಾದ, ತನ್ನ ಬರವಣಿಗೆಯ ಶಕ್ತಿಯನ್ನು ಸರಿಯಾದ ದಿಕ್ಕಿಗೆ ಹರಿಸಿದರೆ ಒಂದು ಒಳ್ಳೆಯ ಸಾಹಿತ್ಯ ಪ್ರತಿಭೆಯಾಗಬಹುದಾದ ಹುಡುಗಿ ಈ ಹರೆಯದಲ್ಲಿಯೇ 'ಓದು ಬೇಡವೆನಿಸುತ್ತಿದೆ, ದೇಶದ ಬಗೆಗಿನ ಚಿಂತೆಯೇ ಅಧಿಕವಾಗುತ್ತಿದೆ' ಎಂದರೆ ಯಾರಿಗೆ ತಾನೇ ದಿಗಿಲಾಗದೆ ಇರಲು ಸಾಧ್ಯ?

ಪ್ರತಿಷ್ಠಿತ ಕಾಲೇಜಿನ ಪದವಿಪೂರ್ವ ವಿದ್ಯಾರ್ಥಿಯೊಂದಿಗೆ ಹದಿಹರೆಯದ ಶಿಕ್ಷಣದ ತರಬೇತಿ ನೀಡಲು ಹೋದಾಗಿನ ಸಂಗತಿ ಇದು. ತರಬೇತಿಯ ಕೊನೆಯ ಭಾಗದಲ್ಲಿ 'ನೀವು ನಿಮ್ಮ ಆದರ್ಶ ವ್ಯಕ್ತಿಯನ್ನಾಗಿ ಯಾರನ್ನು ಸ್ವೀಕರಿಸಲು ಇಷ್ಟಪಡುತ್ತೀರಿ?' ಎಂದು ಕೇಳಿದಾಗ, ಹೆಚ್ಚಿನ ವಿದ್ಯಾರ್ಥಿಗಳು ಕಿರಣ್ ಬೇಡಿ, ಇಂದಿರಾ ಗಾಂಧಿ, ಅಬ್ದುಲ್ ಕಲಾಂ ಎಂದೆಲ್ಲಾ ಹೆಸರಿಸಿದರೆ, ನಾಥೂರಾಮ್ ಗೋಡ್ಸೆ ಎಂದಿದ್ದಳು ಕೊನೆಯ ಬೆಂಚಿನಲ್ಲಿದ್ದ ಪುಟ್ಟ ಹುಡುಗಿ! ಆಘಾತದಿಂದ ಕೊಂಚ ಸಾವರಿಸಿಕೊಂಡು 'ಆ ವ್ಯಕ್ತಿ ನಿಮಗೇಕೆ ಇಷ್ಟ?' ಎಂದು ಕೇಳಿದರೆ, 'ಗಾಂಧಿ ಒಳ್ಳೆಯವರಲ್ಲ, ಅವರನ್ನು ಕೊಂದು ಒಳ್ಳೆಯ ಕೆಲಸ ಮಾಡಿದ್ದಾರೆ. ದೇಶ ಉದ್ಧಾರವಾಗಬೇಕಾದರೆ ಇಂಥವರೆಲ್ಲ ಇರಲೇಬಾರದು' ಎಂದಳು ಕೊಂಚವೂ ಅಳುಕದೆ! 'ನಿಮಗೆ ಇದನ್ನೆಲ್ಲ ಯಾರು ಹೇಳಿಕೊಟ್ಟರು?' ಎಂದು ಮತ್ತೆ ಪ್ರಶ್ನಿಸಿದರೆ, 'ನಮ್ಮ ಮನೆಯಲ್ಲಿ ಇಂತಹ ಹಲವಾರು ಪುಸ್ತಕಗಳಿವೆ, ನಾನು ಅವನ್ನೆಲ್ಲಾ ಓದಿದ್ದೇನೆ' ಎಂದು ಮುಗ್ಧವಾಗಿ ಅಂದಿದ್ದಳು. ಪ್ರೀತಿ ಸೆಲೆಯನ್ನು ತನ್ನ ಪುಟ್ಟ ಎದೆಗೂಡಿನೊಳಗೆ ಜೋಪಾನ ಮಾಡಬೇಕಾಗಿದ್ದ ಹುಡುಗಿ ಎಂತಹ ಕ್ರೌರ್ಯವನ್ನು ಒಪ್ಪಿಕೊಳ್ಳುತ್ತಿದ್ದಾಳೆ ಎಂಬುದನ್ನು ಜೀರ್ಣಿಸಿಕೊಳ್ಳಲು ಸಾಕಷ್ಟು ಸಮಯವೇ ಹಿಡಿಯಿತು. ಕೊಲೆಗಡುಕನೊಬ್ಬನನ್ನು ತನ್ನ ಆದರ್ಶವೆಂದು ಒಪ್ಪಿಕೊಳ್ಳುವ ಮನೋಭೂಮಿಕೆಗೆ ಆಕೆಯನ್ನು ಸಿದ್ಧಗೊಳಿಸಿದವರಾದರೂ ಯಾರು?

ನಾನು ಚಿಕ್ಕವಳಾಗಿದ್ದಾಗಿನ ಘಟನೆ. ಅಪ್ಪಟ ಮಾನವೀಯ ವಿಚಾರಗಳಿಗೆ ತೆರೆದುಕೊಳ್ಳುವಂತಹ ಕೌಟುಂಬಿಕ ಪರಿಸರದಲ್ಲಿ ಬೆಳೆದ ನಾನು ಹೈಸ್ಕೂಲಿಗೆ ಹೋಗುವಾಗ, ದಾರಿಯಲ್ಲಿ ಸಿಗುವ ಚರ್ಚ್ ಒಂದನ್ನು ಹಾದು ಹೋಗಬೇಕಾಗಿತ್ತು, ಬಿಳಿಯ ನಿಲುವಂಗಿಯನ್ನು ತೊಟ್ಟು ನಗುತ್ತಾ ನಿಂತಿರುತ್ತಿದ್ದ ಅಲ್ಲಿನ ಪಾದ್ರಿಯನ್ನು ಕಂಡರೆ ನನಗೂ ನನ್ನ ಗೆಳತಿಯರಿಗೂ ಅದೇನೋ ವಿಪರೀತ ಭಯ. ಭಯ ಯಾಕೆಂದರೆ, 'ಅವರು ಮತಾಂತರ ಮಾಡುತ್ತಾರೆ' ಎಂಬ ಭಯಾನಕ ಸುದ್ದಿಯನ್ನು ನಮ್ಮ ತಲೆಯೊಳಗೆ ಅದ್ಯಾರೋ ತುಂಬಿದ್ದರು. ನಿಜ ಹೇಳಬೇಕೆಂದರೆ, ಅತ್ಯಂತ ಸಾತ್ವಿಕ ಸ್ವಭಾವದ ಆ ಪಾದ್ರಿ ಮಾನವೀಯತೆಯ ಮೂರ್ತಿಯಾಗಿದ್ದರು. ಮಕ್ಕಳೆಂದರೆ ಅಪಾರ ಪ್ರೀತಿ. ಯಾವ ರೀತಿಯಿಂದ ನೋಡಿದರೂ ಅವರಲ್ಲಿ ಕೆಡುಕು ಕಾಣುವುದು ಸಾಧ್ಯವಿರಲಿಲ್ಲ, ಕ್ರಿಸ್‌ಮಸ್ ದಿನಗಳಲ್ಲಿ ಅವರು ಕರೆದುಕೊಡುತ್ತಿದ್ದ ತಿಂಡಿ ತಿನಿಸುಗಳನ್ನು ತಿನ್ನುವಾಗ ನಮ್ಮನ್ನು ಮತಾಂತರದ ಭೂತ ಕಾಡುತ್ತಿರಲಿಲ್ಲ, ಚರ್ಚ್‌ನ ಆಸುಪಾಸಿನಲ್ಲಿ ಕ್ರೈಸ್ತ ಕುಟುಂಬಗಳೇ ಇದ್ದುದರಿಂದ ಹಬ್ಬಗಳು ದನ ತಿನ್ನುವವರಾದುದರಿಂದ ಅವರಲ್ಲಿ ನೀರು ಸಹ ಕುಡಿಯಬಾರದು ಎನ್ನುವ 'ಸತ್ಯ'ವೂ ನಮಗಾಗಲೇ ತಿಳಿದಿತ್ತು! ಹಾಗಾಗಿ ಬಿರುಬೇಸಗೆಯ ದಿನಗಳಲ್ಲಿ ಬಾಯಾರಿಕೆ ತಡೆಯಲಾಗದಿದ್ದಾಗ ಮತ್ತೆ ಆ ಪಾದ್ರಿ ನೀಡುತ್ತಿದ್ದ ತಣ್ಣನೆಯ



ನೀರನ್ನು ಕುಡಿಯುವಾಗಲೂ ಮತಾಂತರದ ಭಯ ನಮ್ಮಲ್ಲಿರುತ್ತಿರಲಿಲ್ಲ. ನಮಗೆ ಬೇಕಾದುದೆಲ್ಲವೂ ಕೈಸೇರಿದ ನಂತರ ತಟ್ಟನೆ ಮತಾಂತರ ನೆನಪಾಗಿ ಒಂದೇ ಉಸಿರಿಗೆ ಅಲ್ಲಿಂದ ಓಟ ಕೀಳುತ್ತಿದ್ದೆವು. ಮತಧರ್ಮಗಳ ವಾಸನೆಯೇ ಇಲ್ಲದ ಕುಟುಂಬವೊಂದರಲ್ಲಿ ಬೆಳೆದ ನನ್ನ ಮಗು ಮನಸ್ಸಿನಲ್ಲೂ ಆ ಸಜ್ಜನ ಪಾದ್ರಿಯನ್ನು ಗುಮಾನಿಯಿಂದ ನೋಡುವಂತೆ ಮಾಡಿದ, ದನದ ಮಾಂಸ ತಿನ್ನುವವರನ್ನು ಅಸ್ಪೃಶ್ಯರ ಸಾಲಿನಲ್ಲಿ ನಿಲ್ಲಿಸುವಂತೆ ಮಾಡಿದ ಅಂಶವಾದರೂ ಯಾವುದು? ದೀರ್ಘ ಕಾಲದವರೆಗೆ ನನ್ನನ್ನು ಕಾಡಿದ ಪ್ರಶ್ನೆಯಿದು.


ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯೊಂದರಲ್ಲಿ ನನ್ನೊಬ್ಬ ಮಾಧ್ಯಮ ಮಿತ್ರರು ಒಂದಷ್ಟು ಹೊತ್ತು ಮಾತಾಡಲು ಸಿಕ್ಕಿದ್ದರು. 'ಬಹುತೇಕ ಮಾಧ್ಯಮಗಳು ಬಲಪಂಥೀಯ ಒಲವಿನಿಂದಲೇ ಬರೆಯುತ್ತಿವೆಯಲ್ಲಾ... ನೀವು ಬ್ಯೂರೋ ಮುಖ್ಯಸ್ಥರಲ್ಲವೇ, ಏನಾಗಿದೆ ನಿಮಗೆಲ್ಲಾ?' ಅಂದೆ. ತಟ್ಟನೆ, 'ಮೇಡಮ್, ಪತ್ರಿಕೋದ್ಯಮ ಕಲಿಯ ಹೊರಡುವ ಹೆಚ್ಚಿನ ವಿದ್ಯಾರ್ಥಿವಿದ್ಯಾರ್ಥಿನಿಯರು ಎಡಪಂಥೀಯ ಚಿಂತನೆಗಳನ್ನು ತಮ್ಮೊಂದಿಗೆ ಒಯ್ಯುತ್ತಾರೆ. ಅಲ್ಲಿಂದ ಹೊರಬರುವಾಗ ಬಲಪಂಥೀಯರಾಗಿ ಹೊರಬರುತ್ತಾರೆ. ನಿಮಗಿದು ತಿಳಿದಿರಲಿ' ಎಂದು ಮಾತು ಮುಗಿಸಿದ್ದರು. ಆ ದಿನಗಳಲ್ಲೇ ಲೇಖಕ ಬಿ.ಎಂ.ಬಶೀರ್ ಅವರು ಬಲಪಂಥೀಯ ವಿಚಾರಧಾರೆಗಳೊಂದಿಗೆ ತಮ್ಮ ಪತ್ರಿಕೆಯಲ್ಲಿ ಕೆಲಸ ಮಾಡಲು ಬರುವ ವರದಿಗಾರರನ್ನು 'ಸರಿ ಮಾಡಲು' ಪಡುವ ಪಡಿಪಾಟಲುಗಳನ್ನು ಕುರಿತು ಓದಿದ್ದೆ, ಸಂವಿಧಾನ, ಅದರ ಆಶಯ, ಬಹುಸಂಸ್ಕೃತಿ, ಕೋಮು ಸೌಹಾರ್ದ ಇತ್ಯಾದಿಗಳ ಕುರಿತು ಕಲಿತು ಜನರನ್ನು ತಿದ್ದುವ, ಬದಲಾಯಿಸುವ, ಸಮಾಜದ ತಲ್ಲಣಗಳಿಗೆ ಸ್ಪಂದಿಸುವ ಕನಸು ಕಾಣುವ ಜೀವಪರ ಚೇತನಗಳಾಗಿ ಮೂಡಬೇಕಾದವರು ರೂಪುಗೊಳ್ಳುತ್ತಿರುವ ಪರಿಯನ್ನು ನೋಡುವಾಗ ವಿಷಾದವೆನಿಸಿತು.

ದೇಶಪ್ರೇಮ, ದೇಶಸೇವೆ, ದೇಶೋದ್ಧಾರ ಇತ್ಯಾದಿ ತುಡಿತಗಳು ಎಲ್ಲರಲ್ಲೂ ಇರಬೇಕಾದದ್ದೇ. ಆದರೆ, ಓದುವ ವಯಸ್ಸಿನಲ್ಲಿ ತಾವು ಮಾಡಬೇಕಾದ ನಿರ್ದಿಷ್ಟ ಕೆಲಸಗಳನ್ನು ನಿರ್ಲಕ್ಷಿಸಿದರೆ ಕಳೆದ ಕಾಲ ಮತ್ತೆ ಮರಳುವುದಿಲ್ಲ, ದೇಶ, ಭಾಷೆ, ಜಾತಿ ಎಂದೆಲ್ಲ ತಲೆ ತುಂಬಿಸಿಕೊಂಡು ಓದಿನಲ್ಲಿ ಹಿಂದೆ ಬಿದ್ದರೆ ವ್ಯಕ್ತಿಗತ ವಿಕಸನದ ಗತಿ ಏನಾದೀತು? ಎಳೆಯ ಪ್ರಜೆಗಳೆಲ್ಲರೂ ಇದೇ ಜಾಡಿನಲ್ಲಿ ಸಾಗಿದರೆ ದೇಶದ ಕತೆ ಏನಾದೀತು? ಇತ್ತೀಚಿನ ದಿನಗಳಲ್ಲಿ ಆಶ್ಚರ್ಯಕರ ರೀತಿಯಲ್ಲಿ ಕರ್ನಾಟಕದ ಯುವಜನತೆ (ಯುವತಿಯರ ಸಹಿತವಾಗಿ) ಕೋಮುವಾದ ಮತ್ತು ಜಾತೀಯತೆಗೆ ವೇಗವಾಗಿ ಬಲಿಯಾಗುತ್ತಿದೆ. ಜನಪರ, ಜೀವಪರ ಹೋರಾಟಗಳ ಭಾಗವಾಗಬೇಕಿದ್ದ ಯುವಶಕ್ತಿ ಜಾತ್ಯತೀತತೆ, ಪರಮತ ಸಹಿಷ್ಣುತೆಯನ್ನು ಮೈಗೂಡಿಸಿಕೊಂಡಿರಬೇಕಾದ ಯುವಪೀಳಿಗೆ ಮತೀಯತೆಯನ್ನು ಅಂತರ್ಗತ ಮಾಡಿಕೊಳ್ಳುವ ವೇಗವನ್ನು ಗಮನಿಸಿದರೆ ಇದು ಮುಂದಿನ ರಕ್ತಸಿಕ್ತ ಇತಿಹಾಸಕ್ಕೆ ನಾವೇ ಬರೆದುಕೊಳ್ಳುತ್ತಿರುವ ಮುನ್ನುಡಿ ಎಂದು ಊಹಿಸಿಕೊಳ್ಳಲೂ ಭಯವಾಗುತ್ತಿದೆ.

ಸ್ವತಂತ್ರ ಆಲೋಚನೆ ಮತ್ತು ವಿವೇಚನೆಯ ಶಕ್ತಿ ಇನ್ನೂ ಮೂಡಿರದ ಕೋಮಲ ಹರೆಯದಲ್ಲಿ ಹುಟ್ಟುವ ಆಲೋಚನೆಗಳ ಮೇಲೆ ನಿಯಂತ್ರಣ ಸಾಧಿಸದಿದ್ದರೆ ಅವು ಧುರಂತಗಳಿಗೆ ಕಾರಣವಾಗಬಹುದು ಎಂಬುದಕ್ಕೆ ಅಸಂಖ್ಯ ಉದಾಹರಣೆಗಳು ನಮ್ಮ ಮುಂದಿವೆ. ಕೇವಲ ಹರೆಯದ ಕಾರಣದಿಂದಾಗಿ ಉಂಟಾಗುವ ಇಂತಹ ಭಾವನೆಗಳನ್ನು ಬಡಿದೆಬ್ಬಿಸಿ ಇಂತಹ ಮಂದಿಯನ್ನು ತಪ್ಪು ದಾರಿಗೆಳೆಯುವುದು, ದುರುಪಯೋಗಪಡಿಸಿಕೊಳ್ಳುವುದು ಚಿಟಿಕೆ ಹೊಡೆದಷ್ಟೇ ಸುಲಭ. ಮಕ್ಕಳ ಮನಸ್ಸು ಹಸಿ ಮಣ್ಣಿನ ಹಾಗೆ ಎಂಬುದು ಎಲ್ಲರಿಗೂ ಗೊತ್ತು, ಅದರ ಮೇಲೆ ಏನು ಬರೆದರೂ ಅದು ಯಥಾರೂಪದಲ್ಲಿ ಪಡಿಮೂಡುತ್ತದೆ ಎಂಬುದೂ ಗೊತ್ತು. ಇಷ್ಟು ಗೊತ್ತಿದ್ದೂ ಈಗ ಆಗುತ್ತಿರುವುದೇನು? ಮಕ್ಕಳೆಂಬ ಬಣ್ಣ ಬಣ್ಣದ ಹೂಗಳಿರುವ ತೋಟಕ್ಕೆ ಕೋಮು ಎಂಬ ವಿಷಕ್ರಿಮಿಯನ್ನು ದಾಟಿಸಿಬಿಡಲಾಗಿದೆ. ಈ ವಿಷಕ್ರಿಮಿಯಿಂದಾಗಿ ಆ ತೋಟದಲ್ಲಿ ಯಾವ ಹೂವುಗಳೂ ಸುಂದರವಾಗಿ ಅರಳಲಾರವು. ಕ್ರಮೇಣ ಯಾವ ಗಿಡಗಳೂ ಉಳಿಯಲಾರವು.

ಉದಾಹರಣೆಗೆ ಕರ್ನಾಟಕದ ಕರಾವಳಿಯಲ್ಲಿ ನಡೆಯುತ್ತಿರುವ ಗಂಡಾಂತರಕಾರಿ ವಿದ್ಯಮಾನಗಳನ್ನೇ ಗಮನಿಸಿ. ಇಲ್ಲಿ ಹದಿಹರೆಯದ ಶಾಲಾಮಕ್ಕಳ ಮನಸ್ಸಿನಲ್ಲಿ ದೊಡ್ಡ ಪ್ರಮಾಣದಲ್ಲಿ ಕೋಮು ವಿಷವನ್ನು ತುಂಬಲಾಗುತ್ತಿದೆ. ಸಂಘಪರಿವಾರದ ಶಕ್ತಿಗಳು ಹಗಲುರಾತ್ರಿಯೆನ್ನದೆ ಈ ದುಷ್ಟ ಕಾರ್ಯದ ಹಿಂದೆ ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ಭಗತ್‌ಸಿಂಗ್, ಸ್ವಾಮಿ ವಿವೇಕಾನಂದ ಎಲ್ಲರನ್ನೂ ಈ ಕೆಲಸಕ್ಕೆ ಬಳಸಿಕೊಳ್ಳಲಾಗುತ್ತಿದೆ. ನಾಥೂರಾಮ್ ಗೋಡ್ಸೆ, ಸಾವರ್ಕರ್ ಮೊದಲಾದವರನ್ನು ಹೀರೋಗಳಾಗಿ ಮತ್ತು ಮಹಾತ್ಮ ಗಾಂಧಿ, ನೆಹರೂ ಮೊದಲಾದವರನ್ನು ವಿಲನ್‌ಗಳಾಗಿ ಬಿಂಬಿಸಲಾಗುತ್ತಿದೆ. ಪ್ರತಿಯೊಂದು ಶಾಲಾ ಕಾಲೇಜುಗಳಲ್ಲಿಯೂ ಈ ಮೂಲಭೂತವಾದಿ ಸಂಘಟನೆಗಳು ತಮ್ಮ ವಿಷ ಜಾಲ ಹರಡುತ್ತಿವೆ. ಜಾತಿ, ಮತ ಭೇದಗಳನ್ನು ಮರೆತು ಒಂದಾಗಿ ಕಲಿಯಬೇಕಾದ ವಿದ್ಯಾದೇಗುಲಗಳಲ್ಲಿ ಕೋಮು ಆಧಾರದಲ್ಲಿ ಮಕ್ಕಳನ್ನು ವಿಭಜಿಸಲಾಗುತ್ತಿದೆ. ಸಂಘಪರಿವಾರದ ಅಧಿಕಾರ ರಾಜಕಾರಣಕ್ಕೆ ಈ ಮಕ್ಕಳನ್ನು ಬಳಸಿಕೊಂಡು ಅವರನ್ನು ಬೀದಿಗೆ ತರಲಾಗುತ್ತಿದೆ (ತಳ್ಳಲಾಗುತ್ತಿದೆ). ಸಂಘರ್ಷಕ್ಕೆ ಪ್ರಚೋದಿಸಲಾಗುತ್ತಿದೆ. ಚಿಲ್ಲರೆ ವಿಷಯಗಳಿಗೆ ಅವರು ಕೋಮು ನೆಲೆಯಲ್ಲಿ ಹೊಡೆದಾಡಿಕೊಂಡು ಪೊಲೀಸ್ ಠಾಣೆ ಸೇರಿ ಹತ್ತಾರು ಕೇಸುಗಳನ್ನು ಜಡಿಸಿಕೊಂಡು ಕೋರ್ಟ್‌ಕಚೇರಿಗೆ ಅಲೆಯುವಂತೆ, ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲುವಂತೆ ಮಾಡಲಾಗುತ್ತಿದೆ (ಪೊಲೀಸ್ ಠಾಣೆಯಲ್ಲಿ ಒಮ್ಮೆ ಕೇಸು ದಾಖಲಾಯಿತೆಂದರೆ ಮುಂದೆ ತಮ್ಮ ಔದ್ಯೋಗಿಕ ಭವಿಷ್ಯದ ಮೇಲೆ ಯಾವ ಪರಿಣಾಮ ಉಂಟಾಗುತ್ತದೆ ಎಂಬ ಸತ್ಯ ಈ 'ದೇಶಪ್ರೇಮಿ' ಮಕ್ಕಳಿಗೆ ಗೊತ್ತಿಲ್ಲ. ಸೂತ್ರಧಾರರು ಅವರಿಗೆ ಈ ಸತ್ಯವನ್ನು ಹೇಳುವುದೂ ಇಲ್ಲ). ಶೈಕ್ಷಣಿಕವಾಗಿ ಅವರು ಕಳೆದುಕೊಳ್ಳುತ್ತಿರುವುದರ ಬಗ್ಗೆ ಯಾರಿಗೂ ಕಾಳಜಿ ಇಲ್ಲ. ಈ ಮಕ್ಕಳನ್ನು 'ದೇಶಸೇವೆ'ಗೆ ಛೂಬಿಟ್ಟು ಅವರ ಭವಿಷ್ಯದ ಜತೆಗೆ ಚೆಲ್ಲಾಟವಾಡುತ್ತಿರುವ ಸೂತ್ರಧಾರ ಮೇಲ್ವರ್ಗದವರಾದರೋ ತಮ್ಮ ಮೇಲೆ ಪೆಟ್ಟಿ ಕೇಸುಗಳೂ ದಾಖಲಾಗದಂತೆ ಬುದ್ಧಿವಂತಿಕೆಯಿಂದ ಕಾರ್ಯಾಚರಿಸುತ್ತಾರೆ! ಅವರ ಮಕ್ಕಳು ದೇಶದ ಮತ್ತು ವಿದೇಶದ ಅತ್ಯುನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಓದು ನಡೆಸಿ ಕೈ ತುಂಬ ಸಂಬಳ ತರುವ ಕೆಲಸಗಳನ್ನು ಹಿಡಿದು ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ದೇಶಕ್ಕಾಗಿ ಹೋರಾಡುವ ಮಹತ್ತರ ಹೊಣೆಯನ್ನು ಸಮಾಜದ ಬಡ ಮತ್ತು ತಳಸಮುದಾಯಗಳ ಮಕ್ಕಳ ಮೇಲೆ ಹೊರಿಸಿ ಅವರೆಲ್ಲ ನಿಶ್ಚಿಂತೆಯಿಂದಿದ್ದಾರೆ.

ಮಕ್ಕಳಲ್ಲಿ ಸರ್ವ ಸಮಭಾವ ಮತ್ತು ಸಾಮರಸ್ಯದ ಗುಣ ಅಭಿಜಾತವಾಗಿಯೇ ಬಂದಿರುತ್ತದೆ. ಆದರೆ, ಹಿರಿಯರಾದ ನಾವು ಅವರಿಗೆ ಎಂತಹ ಪರಿಸರ ಒದಗಿಸಿಕೊಡುತ್ತೇವೆ ಎಂಬುದರ ಮೇಲೆ ಅವರು ತಮ್ಮ ಮನಸ್ಸಿನ ಮುಗ್ಧತೆಯನ್ನು ಪರಿಶುದ್ಧತೆಯನ್ನು ಉಳಿಸಿಕೊಳ್ಳುವುದು ಸಾಧ್ಯ. ಮಕ್ಕಳ ಕೋಮಲ ಮನಸ್ಸಿನಲ್ಲಿ ಜಾತಿ, ಮತ, ಭಾಷೆ ಭೇದಗಳ ವಿಷಬೀಜ ಬಿತ್ತಿ ದ್ವೇಷಾಸೂಯೆಗಳನ್ನು ಉಣಿಸಿದರೆ ಗೋಡ್ಸೆಯಂತಹ ಜೀವವಿರೋಧಿಗಳು ಸಂಸ್ಕೃತಿಯ ಹೆಸರಿನಲ್ಲಿ ಹೆಣ್ಣುಮಕ್ಕಳನ್ನು ಅಟ್ಟಾಡಿಸಿ ಹೊಡೆಯುವ ಸಮಾಜ ವಿರೋಧಿಗಳೆಲ್ಲ ಅವರಿಗೆ ಆದರ್ಶಪ್ರಾಯರಾಗಿಯೇ ಕಂಡುಬರುತ್ತಾರೆ. ಇದಕ್ಕಾಗಿ ಆ ಎಳೆಯರನ್ನು ದೂರುವ ಹಾಗಿಲ್ಲ, ಒಂದು ಆರೋಗ್ಯಪೂರ್ಣ ಸಮಸಮಾಜ ಭವಿಷ್ಯದಲ್ಲಿ ರೂಪುಗೊಳ್ಳಬೇಕಾದರೆ ಯುವಜನತೆ ತಮ್ಮ ಕೆಲಸಗಳನ್ನು ನಿಷ್ಠೆಯಿಂದ ಮಾಡುವುದಕ್ಕಿಂತ ದೊಡ್ಡ ದೇಶಸೇವೆ ಇನ್ನೊಂದಿಲ್ಲ ಎನ್ನುವುದನ್ನು ಮತ್ತೆ ಮತ್ತೆ ನೆನಪಿಸುತ್ತಾ ಅವರು ತಲುಪಬೇಕಾದ ಗುರಿಯನ್ನು ಆಗಾಗ ವಿಚಾರಿಸುತ್ತಾ ಸರಿಯಾದ ದಿಕ್ಕಿಗೆ ಅವರನ್ನು ತಿರುಗಿಸುತ್ತಿರಬೇಕು. ಮಕ್ಕಳು ಹೀಗೆ ಬೆಳೆದಾಗ ಸಹಜವಾಗಿಯೇ ಅವರು ಮಾಡುವ ಎಲ್ಲ ಕೆಲಸವೂ ನಿಜವಾದ ದೇಶಸೇವೆಯಾಗುತ್ತದೆ. ಗೋಡ್ಸೆ, ಮೋದಿಯಂಥವರು ಯಾರು? ಅವರ ದೇಶಪ್ರೇಮ ಎಂತಹದು? ಅವರ ನಿಜವಾದ ಹುನ್ನಾರ ಏನು? ಎಂಬುದನ್ನು ವಿಶ್ಲೇಷಿಸಬಲ್ಲವರಾಗುತ್ತಾರೆ. ಆದ್ದರಿಂದ ಯಾರದೋ ಅಜೆಂಡಾಗಳಿಗೆ ಯಾರ್‍ಯಾರೋ ಬಲಿಯಾಗುತ್ತಿರುವ ಈ



ಸಂಕ್ರಮಣ ಕಾಲದಲ್ಲಿ ಎಳೆಯ ಮನಸುಗಳು ಮತಾಂಧತೆಯಲ್ಲಿ ಕಳೆದು ಹೋಗದಂತೆ ಅವರ ಮಗುತನವನ್ನು ನಿರಂತರವಾಗಿ ಸಂರಕ್ಷಿಸಿಕೊಂಡು ಹೋಗುವ ಹಾದಿಗಾಗಿ ನಾವು ಹುಡುಕಾಟ ನಡೆಸಬೇಕಿದೆ.

● ಗುಲಾಬಿ ಬಿಳಿಮಲೆ

ಮಹಿಳಾ ವಿಶೇಷಾಂಕ

ಬ್ಲೌಸು ಯಾಕೆ ಹಾಕಬೇಕು?

ಒಂದು ಸೀರೆ ಉಡುವ ಎಪಿಸೋಡಿನಿಂದ ...ನ್ನೊಂದು ಸೀರೆ ಉಡುವ ಎಪಿಸೋಡಿನ ನಡುವೆ ಒಂದು ...ತ್ತು ದಪ್ಪ ಆಗುವುದು ಪ್ರಕೃತಿಯ ನಿಯಮ ಎಂಬ ...ರ್ಮಾನಕ್ಕೆ ಬಂದಿದ್ದೇನೆ. ಎಷ್ಟೇ ದಪ್ಪ ಆದರೂ ಕ್ಷಮಿಸಿ ...ವಧಾನವಾಗಿ ಸುತ್ತಿಕೊಳ್ಳುತ್ತದೆ ಸೀರೆ. ಆದರೆ ಸೀರೆಗೆ ...ಜ್ಯಾಪಟ್ಟೆ ಕಾಂಟ್ರಾಸ್ಟು ಈ ತರಲೆ ಬ್ಲೌಸು. ಎರಡನೆಯ ...ದರ ಚರ್ಮದೋಷಾದಿಯ ಈ ವಸ್ತ್ರ ಅರ್ಧ ...ಟಿಮೀಟರ್ ದೇಹದ ಸುತ್ತಳತೆ ಹೆಚ್ಚಾದರೂ ತೋಳ ...ಏಲೇರದೆ, ಹುಕ್ಕು ಹಾಕಿಕೊಳ್ಳಲು ಬಿಡದೆ, ಉಸಿರು ...ಟ್ಟಿಸಿ ಸ್ಟ್ರೈಕು ಮಾಡಿಬಿಡುತ್ತದೆ. ಈ ರಗಳೆ ಬಲ್ಲ ಕೆಲ ...ಣ ಟೈಲರುಗಳು ಬಿಚ್ಚಿ ಅಗಲ ಮಾಡಿಕೊಳ್ಳಲು ...ನುಕೂಲ ಆಗುವ ಹಾಗೆ ಮೂರು ಎಕ್ಸಟ್ರಾ ಹೊಲಿಗೆ ...ಹಾಕಿರುತ್ತಾರೆ.

ಟೈಟಾದ ಬ್ಲೌಸು ತಿಂದ ಫಜೀತಿಯೊಂದು ಬಜ್ಜಿ ಬೋಂಡಾ ...ನವು ಮಾಡಿಕೊಳ್ಳುವಂಥ ಸಂದರ್ಭ ತಂದಿಟ್ಟಾಗೆಲ್ಲ ...ಭಿಜ್ಞಾನ ಶಾಕುಂತಲಾ' ನಾಟಕದ ಮೊದಲ ಅಂಕ ...ಷಾಗುತ್ತದೆ. ಕಳ್ಳನ ಹಾಗೆ ಮರದ ಸಂದಿಯಿಂದ ಮೊದಲ ...ರಿ ದುಷ್ಯಂತ ಶಕುಂತಲೆಯನ್ನು ನೋಡುವ ದೃಶ್ಯ. ...ಖಿತೆ ಪ್ರಿಯಂವದೆ ವಲ್ಕಲ(ನಾರು ಬಟ್ಟೆ)ಯನ್ನು ತುಂಬ ...ಟ್ ಕಟ್ಟಿಬಿಟ್ಟಿದ್ದಾಳೆ, ಸ್ವಲ್ಪ ಸಡಿಲ ಮಾಡು ಅಂತ ...ಂತಲೆ ಅನಸೂಯೆಯನ್ನು ಕೇಳುತ್ತಾಳೆ. ಆಗ ಪ್ರಿಯಂವದೆ ...ನ್ನನ್ಯಾಕೆ ಬೈಯುತ್ತೀಯ ಕಣೆ, ತಪ್ಪು ನಿನ್ನ ಉಕ್ಕುವ ...ಯೌವ್ವನದ್ದು" ಅಂತ ನಗುತ್ತಾ ಹೇಳುತ್ತಾಳೆ. ತಕ್ಷಣಕ್ಕೂ ...ತ್ತಿ ಹಾಗೆ ನಮ್ಮ ದುಷ್ಯಂತ ತನ್ನ ಮಾಮೂಲಿ ಹೆಣ್ಣಿನ ...ರ್ಣನೆಗೆ ಇಳಿದುಬಿಡುತ್ತಾನೆ. ದುಂಬಿ ಹೊಡೆಯುವ ...ತಿಯ ಹೀರೋಗೆ ಮರುಳಾದ ಆ ಶಕುಂತಲೆ ಅದು ...ಗೆ ಎಲ್ಲಿಗೆ ಯಾಕೆ ಕಟ್ಟಿಕೊಂಡಿದ್ದಳೋ ದೇವರೇ ಬಲ್ಲ, ...ಮ್ಮ ಕ್ಯಾಲೆಂಡರ್ ಚಿತ್ರಗಳ ಪ್ರಕಾರವಂತೂ ಎದೆಗೆ ಒಂದು ...ಟ್ಟೆ ಸುತ್ತಿ ಹಿಂದೆ ಒಂದು ಗಂಟು ಬಿಗಿಯುವುದು ...ಣಿ ಸ್ಟೈಲು. ಸಡಿಲ ಮಾಡಲು ಸರಾಗ. ಆ ಚಾಲಾಕಿ ...ತಿನ ಪ್ರಿಯಂವದೆ 'ಸ್ವಲ್ಪ ತುಪ್ಪ ಹಾಲು ಜಾಸ್ತಿಯಾಗಿ ...ದಿದ್ದೀ' ಅಂತಲೇ ಶಕುಂತಲೆಗೆ ಹಿಂಟ್ ...ಡುತ್ತಿದ್ದಿರಬೇಕು ಅಂತ ನನ್ನ ಅನುಮಾನ. ಪೆದ್ದು ...ಶಿವ ದುಷ್ಯಂತನಿಗೆ ಅದೇ ಧ್ಯಾನ. ಆದ್ದರಿಂದ ಈ ...ಕ್ಷ್ಮಗಳು ಗೊತ್ತಾಗಿರಲಿಕ್ಕಿಲ್ಲ. ಆಗಿನ ದುಷ್ಯಂತನ ವರ್ಣನೆ ...ಂದ ಹಿಡಿದು ಈಗಿನ 'ಚೋಲಿ ಕೆ ಪೀಚೆ'ಯವರೆಗೆ ...ದಾ ಸೂಕ್ಷ್ಮಗೀಕ್ಷ್ಮ ಏನೂ ಇಲ್ಲ.


ಆ ಪುರಾಣ ಎಲ್ಲ ಹಾಗಿರಲಿ, ಈ ನಮ್ಮ ಸದ್ಯದ ...ತ್ತಳತೆ ಪ್ರಾಬ್ಲಮ್ ಪರಿಹರಿಸಲಿಕ್ಕೆ ನನ್ನ ಗೆಳತಿಯೊಬ್ಬಳು ...ಉಪಾಯ ಕಂಡುಹಿಡಿದಿದ್ದಾಳೆ. ಟೈಟ್ ಆಗಿ ಹಾಕದೇ ...ಟ್ಟ ಟೀಶರ್ಟುಗಳನ್ನು ಸೀರೆಯ ಬ್ಲೌಸಿನ ಬದಲು ...ಕಿಕೊಳ್ಳುತ್ತಾಳೆ. ಈಗ ಮಾರ್ಕೆಟ್ಟಿನಲ್ಲಿ ಸ್ಟ್ರೆಚ್ ಬ್ಲೌಸುಗಳೂ ...ವೆ. ಹಿಂದೆ ಲಾಡಿ ಕಟ್ಟುವ ರಾಜಾಸ್ಥಾನೀ ಸ್ಟೈಲಿನ ...ಸುಗಳು, ಸ್ವೆಟ್ಟಿ ಬ್ಲೌಸುಗಳು ಇವೆಯಾದರೂ ಅವನ್ನು ...ತ್ತು ಪಾಲು ಹಾಕಿಕೊಳ್ಳುವುದು ಊಟ ಬಿಟ್ಟು ಸೊರಗಿ ...ತ್ಣಗಾದ ಜೀರೋ ಸೈಜ್ ಹುಡುಗಿಯರೇ ಅನ್ನುವುದು ...ರ್ಯಾಸ. ಇನ್ನು ಶರ್ಟಿನ ಹಾಗೆ ದೊಗಳೆ ದೊಗಳೆ ...ತ್ತ ಬ್ಲೌಸುಗಳ ಕಾಲ ನಮ್ಮಜ್ಜಿಯ ಜೊತೆಗೇ ಮುಗಿದಿದೆ. ...ಟ್ಟಲ್ಲಿ 'ಎಲಿಗೆಂಟ್' ಅಂತ ಕರೆಸಿಕೊಳ್ಳುವ ಬಹುಪಾಲು ...ಸುಗಳು ಉಸಿರು ಕಟ್ಟಿಸುವ ಜಾತಿಯವೇ. "ಯಾರು ...ಡುಹಿಡಿದರು ಗೆಳತೀ ಇದೇನಿದು ಕವಚ ಕಂಚುಕ ...ಡುವ ತವಕ, ಬಿಟ್ಟರೆ ಕುಹಕ..." ಅನ್ನುವ ಪ್ರತಿಭಾ



ನಂದಕುಮಾರ್ ಸಾಲು ನೆನಪಿದೆಯಾ?

ಕಂಡುಹಿಡಿದದ್ದು ಯಾರು ಅಂತ ಅಷ್ಟೊಂದು ಸ್ಪಷ್ಟ ಯಾರಿಗೂ ಗೊತ್ತಿದ್ದ ಹಾಗಿಲ್ಲ. ಹೊಲಿದ ಬಟ್ಟೆಗಳನ್ನು ತೊಡುವ ಸಂಪ್ರದಾಯ ಭಾರತಕ್ಕೆ ಬಂದದ್ದು ಲೇಟಾಗಿ ಅನ್ನುವುದು ಒಂದು ವಾದ. ವಿಧವಿಧವಾದ ಬಟ್ಟೆ ಹೊಲಿಯುವ ವಿನ್ಯಾಸಗಳು ಬಂದದ್ದು ಮುಘಲರೊಂದಿಗೆ ಅನ್ನುತ್ತಾರೆ. ಮುಂದೆ ವಿಕ್ಟೋರಿಯಾ ಕಾಲದ ಮಡಿವಂತ ಬ್ರಿಟಿಷರು ನಮ್ಮ ಮೇಲೆ ನೀತಿ-ಅನೀತಿಗಳ ಹೊಸ ಮಾನದಂಡಗಳನ್ನು ಹೇರುತ್ತಾ ಹೋದ ಹಾಗೆ ಈ ಬ್ಲೌಸು, ಸೆರಗು ಇತ್ಯಾದಿ 'ಮಾನ ಮುಚ್ಚುವ' ವಸ್ತ್ರಗಳ ಮಹತ್ವವೂ ಏರುತ್ತಾಹೋಯಿತು. ಮೈತುಂಬ ಸೆರಗು ಹೊದ್ದ ಗುಬ್ಬಳಿ ತೋಳಿನ ಬ್ಲೌಸಿನ ರಾಜಮನೆತನದ ಹೆಂಗಸರ ಹಳೆಯ ಫೋಟೋಗಳಲ್ಲಿ ಈ ವಿಕ್ಟೋರಿಯನ್ ಛಾಪು ಕಾಣುತ್ತದೆ. ಹಾಗೆ ಆದಾಗ ಮುಚ್ಚಿದ್ದರ ಬಗೆಗಿನ ಕುತೂಹಲವೂ ಹೆಚ್ಚುತ್ತಾ ಹೋಗಿರಲೇಬೇಕು. ಬಿಳಿ ಸೀರೆ ಉಡಿಸಿ, ಮೇಲೆ ಮಳೆ ಸುರಿಸಿ ನೃತ್ಯ ಮಾಡಿಸುವ ನಮ್ಮ ಭವ್ಯ ಪರಂಪರೆಯೇ ಅದಕ್ಕೆ ಸಾಕ್ಷಿ. ಇನ್ನೊಂದು ವಾದದ ಪ್ರಕಾರ 'ಚೋಲಿ' ಅನ್ನುವ ಪದದ ಮೂಲ ದಕ್ಷಿಣದ ಚೋಳಾ ರಾಜವಂಶ. ಕಲ್ಹಣನ ರಾಜತರಂಗಿಣಿಯಲ್ಲಿ ದಕ್ಷಿಣದ ಪ್ರಚಲಿತವಿದ್ದ ಹೆಂಗಸರ ಮೇಲು ಉಡುಗೆ ರಾಜನ ಫರ್ಮಾನಿನ ಅನ್ವಯ ಕಾಶ್ಮೀರದಲ್ಲಿ ಬಳಕೆಗೆ ಬಂದು ಅಂತ ಉಲ್ಲೇಖವಿದೆಯಂತೆ! ನಾನು ಕಲ್ಹಣನನ್ನು ಓದಿಲ್ಲ, ಅದೇನಿದ್ದರೂ 'ಗೂಗಲ್ ಸರ್ಚ್'ದತ್ತ ಜ್ಞಾನ. ಆದ್ದರಿಂದ ಈ ಚೋಳರ ಕಥೆಯ ಬಗ್ಗೆ ಗಟ್ಟಿ ಗೊತ್ತಿಲ್ಲ.

ಕಂಡುಹಿಡಿದದ್ದು ಯಾರೇ, ಯಾವಾಗಲೇ ಇರಲಿ, ಒಂದಂತೂ ಖಚಿತ. ನಮ್ಮ ದೇಶದಲ್ಲಿ ಏನನ್ನಾದರೂ - ಪುಟಗೋಸಿ ಬ್ಲೌಸೂ ಸೇರಿದಂತೆ - ಕೆಳಜಾತಿಯವರಿಗೆ, ಹೆಂಗಸರಿಗೆ ಕಾಟ ಕೊಡಲಿಕ್ಕೆ ಬಳಸಿಕೊಳ್ಳಬಹುದು. ಕೆಲವು ಜಾತಿಯ ಹೆಂಗಸರು ಬ್ಲೌಸು ಹಾಕುವ ಹಾಗಿಲ್ಲ, ಗಂಡ ಸತ್ತವರು ಬ್ಲೌಸು ಹಾಕುವ ಹಾಗಿಲ್ಲ ಇತ್ಯಾದಿ ನಿಯಮಗಳಿದ್ದ ಕಾಲ ಬಹಳ ಹಿಂದಿನದೇನೂ ಅಲ್ಲ. ಬ್ಲೌಸು ಬೇಡ ಅಂದರೆ ಒಂದು ಕಾಟ ತಪ್ಪಿ ಉಸಿರಾಟ ನಿರಾಳ ಆಯಿತಲ್ಲ ಅನ್ನುವ ಹಾಗೂ ಇಲ್ಲ. ಮಾನಮರ್ಯಾದೆ ಇರುವವರು ಬ್ಲೌಸು ಹಾಕಿಕೊಳ್ಳುತ್ತಾರೆ ಅಂತ ಹೇಳಿ ನಂತರ ಕೆಲವರು



ಮಾತ್ರ ಹಾಕಿಕೊಳ್ಳಬಾರದು ಅಂತ ನಿಷೇಧ ಹೇರಿದರೆ ಏನರ್ಥ? ಇದಕ್ಕೆ ಒಂದು ಉದಾಹರಣೆ ಕೇರಳದಲ್ಲಿ ಟ್ರಾವೆಂಕೂರಿನಲ್ಲಿ ಮೇಲು ವಸ್ತ್ರ ಧರಿಸುವ ಹಕ್ಕಿಗಾಗಿ ನಾಡಾರ್ ಮಹಿಳೆಯರು ನಡೆಸಿದ ಹೋರಾಟ. ಕೇರಳದಲ್ಲಿ 19ನೇ ಶತಮಾನದವರೆಗೂ ಕೆಳಜಾತಿಯ ಪುರುಷ ಮತ್ತು ಮಹಿಳೆಯರಿಬ್ಬರಿಗೂ ಮೇಲ್ಜಾತಿಯವರ ಎದುರು ಮೇಲು ವಸ್ತ್ರ ತೊಟ್ಟು ಓಡಾಡುವ ಹಕ್ಕು ಇರಲಿಲ್ಲ. ಹಾಗೆ ತೊಡುವುದು ಮೇಲ್ಜಾತಿಗೆ ಅವಮಾನ ಮಾಡಿದಂತೆ ಎಂದು ಪರಿಗಣಿಸಲಾಗುತ್ತಿತ್ತು. ಇದಕ್ಕೆ ವಿರುದ್ಧವಾಗಿ ಅನೇಕ ನಾಡಾರರು ಕ್ರಿಶ್ಚಿಯನ್ ಧರ್ಮ ಸ್ವೀಕರಿಸಿದ್ದೂ ಹೌದು. 'ಚನ್ನಾರ್ ರಿವೋಲ್ಟ್' ಎಂದು ಪ್ರಸಿದ್ಧವಾದ ಈ ಹೋರಾಟದಲ್ಲಿ ಮೇಲುವಸ್ತ್ರ ಧರಿಸಿದ ಮಹಿಳೆಯರನ್ನು ಬೆತ್ತಲುಗೊಳಿಸುವ ಪ್ರಕರಣಗಳೂ ನಡೆದವು. 1859ರಲ್ಲಿ ನಾಡಾರ್ ಮಹಿಳೆಯರೆಲ್ಲರಿಗೂ ಮೇಲುವಸ್ತ್ರ ತೊಡುವ ಹಕ್ಕು ಇದೆ ಎಂದು ರಾಜ ಘೋಷಿಸುವವರೆಗೂ ಗಲಾಟೆ, ಹಿಂಸೆ ನಡೆಯಿತು. ನಾಯರ್ ಮಹಿಳೆಯರೂ 20ನೆಯ ಶತಮಾನದ ಮೊದಲ ಭಾಗದವರೆಗೆ ಮೇಲುವಸ್ತ್ರ ತೊಡುತ್ತಿರಲಿಲ್ಲ. ಇನ್ನೂ ಕೆಳಗಿನ ಸ್ತರದ ಮಹಿಳೆಯರ ಬ್ಲೌಸು ತೊಡುವ ಅಥವಾ ಬಿಡುವ ಹಕ್ಕು, ಆಯ್ಕೆಗಳ ಬಗ್ಗೆಯಂತೂ ಪ್ರಶ್ನೆ ಕೇಳುವ ಹಾಗೂ ಇಲ್ಲ.. ನಿಜವಾಗಿಯೂ 'ಚೋಲಿ ಕೆ ಪೀಚೆ' ಜಾತಿ, ಜನಾಂಗ, ಧರ್ಮ, ಸಂಸ್ಕೃತಿ ಎಲ್ಲ ಹೊಸೆದುಕೊಂಡು ಕಗ್ಗಂಟಾದ ನೀತಿ-ಅನೀತಿ-ನೈತಿಕತೆಗಳ ಬೆಟ್ಟದಷ್ಟು ದೊಡ್ಡ ಮುಗಿಯದ ಕಥನವೇ ಇದೆ!

ಈಗ ನಮ್ಮ ಆಧುನಿಕ ಯುಗದಲ್ಲಿ, ಸರ್ವತಂತ್ರ ಸ್ವತಂತ್ರ ಭಾರತದಲ್ಲಿ ಹೆಂಗಸರ ಮೇಲಿನ ಅತ್ಯಾಚಾರ ಅನಾಚಾರಗಳಿಗೆ ಯಾವ ಬರ ಇಲ್ಲವಾದರೂ ಬ್ಲೌಸು ಯಾರು ಹಾಕಬಹುದು ಯಾರು ಹಾಕಬಾರದು ಅಂತಲಂತೂ ರೂಲ್ಸು ಇಲ್ಲದಿರುವುದು ಹೆಣ್ಣು ಜನ್ಮದ ಪುಣ್ಯ. ಸದಾ ಸುತ್ತಳತೆಯ ಪ್ರಾಬ್ಲಮ್ ಎದುರಿಸುವ ಹೆಂಗಳೆಯರು ಹಳ್ಳಿಯಿಂದ ದಿಲ್ಲಿಯವರೆಗೆ ಫ್ರೀ ಸೈಜ್ ಚೂಡಿದಾರಿನಲ್ಲಿ ಫ್ರೀಡಂ ಕಂಡುಕೊಂಡಿದ್ದೇವೆ. ಆದರೆ ಬ್ರಾ ಬರ್ನಿಂಗ್ ರೀತಿಯಲ್ಲಿ ಇನ್ನೂ ಮಂದಿರಾ ಬೇಡಿಯೂ ಸೇರಿದಂತೆ ಯಾರೂ ಬ್ಲೌಸ್ ಬರ್ನಿಂಗ್ ಮಾಡುವ ಸಾಹಸಕ್ಕೆ ಕೈಹಾಕಿಲ್ಲ. ಆಗೀಗ ಯಾರದೋ ಮದುವೆಗೋ ಅಥವಾ ಸೀರೆಯೆಂಬ ಶ್ರೇಷ್ಠ ವಸ್ತ್ರ ಕತ್ತೆಗೂ ಸೌಂದರ್ಯ ತಂದುಕೊಡಬಲ್ಲದು ಅನ್ನುವ ಭ್ರಮೆಯಲ್ಲೋ ಸೀರೆ-ಬ್ಲೌಸು ಧರಿಸುತ್ತೇವೆ - ಆ ಜಾಣ ಟೈಲರ್ರಿಗೆ ಉಧೋ ಹೇಳಿ.

● ಶ್ರೀ

ನನ್ನ ಮುಡಿಯ ಬಿಲ್ವಪತ್ರೆ

ಬಿಲ್ವಪತ್ರೆ
ಕಣ್ಣಪ್ಪನ ಕೊಡುಗೆಯ ಭಕ್ತಿಯೆಂದು
ಶಿವನಿಗೆ ಪ್ರೀತಿಯೆಂಬರು

ನನ್ನ ಮನೆಯ ದೇವರ ಕೋಣೆಯಲ್ಲಿ
ಅಗಲಿರುವ ನನ್ನ ಪ್ರೀತಿಯ ಕಂದನೇ ಶಿವ;
ಸತ್ಯ, ಸೌಂದರ್ಯ.

ಅವನು ಮಣ್ಣಾದ ರುದ್ರಭೂಮಿಯ ಸ್ಥಳದಿಂದೆದ್ದ
ಒಂದು ಸುಂದರ ಬಿಲ್ವಪತ್ರೆ, ಸಸಿ.
ಈಗ ಅಂಗಳದಲ್ಲಿ ನಿಂತು ಗಿಡವಾಗಿದೆ
ಹುಣ್ಣಿಮೆಯ ಎಲೆಗಳ ಹಸಿರೊಡಲು ಬೆಳೆಯುತ್ತಿದೆ

ಅವನು ನಿರ್ಗಮಿಸಿ ಹದಿಮೂರು ವರ್ಷ
ಮುಗಿದು ಹದಿನಾಲ್ಕಕ್ಕೆ ಬಿದ್ದ ದಿನದಂದು
ಎಂದಿನಂತೆ ಬಿಲ್ವಪತ್ರೆಯನ್ನು ಭಕ್ತಿಯಿಂದ

ಗಿಡದಿಂದ ಬಿಡಿಸಿ ಕಂದನ ನಗುವ
ಭಾವಚಿತ್ರಕ್ಕೆ ಮುಡಿಸಿದೆ

ಕಣ್ಣಲ್ಲಿ ಕಂಬನಿಯ ಪಸೆ
ಕಂದ "ಅಮ್ಮ ನಿನಗಾಗಿ ನಾನಿದ್ದೇನೆ"
ಎಂಬಂತೆ ಭಾಸವಾಗಿ ಕರುಳು ಚುರುಗುಟ್ಟುವ ಘಳಿಗೆ
ಅಮ್ಮನ ಮೌನ ಪ್ರಾರ್ಥನೆ ಕಂದನಲ್ಲಿ-
"ಹೌದು ಕಂದ. ಈ ಪ್ರಪಂಚದಲ್ಲಿ ಸತ್ಯ ಉಳಿಸು
ನಿನ್ನ ಮೊಗದ ನಿಷ್ಕಲ್ಮಶ ನಗುವಿನಂತೆ...."

ಅಮ್ಮನ ಪ್ರಾರ್ಥನೆ ಕಂದನ ಮುಟ್ಟಿತೋ
ಎಂಬಂತೆ ಅದ್ಭುತ ಅಚ್ಚರಿಯೊಂದು ಜರುಗಿದ್ದು
ಕಂದನಿಗೆ ಮುಡಿಸಿದ ಬಿಲ್ವಪತ್ರೆ
ಕಂಪಿಸಿ ಕೆಳಗೆ ಬಿತ್ತು

ಆ ಎಸಳನ್ನು ಪ್ರಸಾದಂತೆ ಕಣ್ಣೊತ್ತಿಕೊಂಡು




ಭಕ್ತಿಯಿಂದ ಮುಡಿಗಿರಿಸಿಕೊಂಡಿರುವೆ
ಕಂದನ ಯಾವುದೋ ಅಂಶ ನನ್ನ ಚೇತನ ಸೇರಿದಂತೆ

ಅವನ ನಸುನಗು ನನ್ನ ಮೊಗದಲ್ಲಿ
ಪ್ರಪಂಚದ ಎಲ್ಲ ಭ್ರಷ್ಟತೆಯೂ ನೀಗಲಿ
ಎಂಬ ಸಂವೇದನೆಯ ದೀಕ್ಷೆ ತೊಟ್ಟಿರುವೆ
ಮುಡಿಗೆ ಹೂವನ್ನೇ ಮುಡಿಯಬೇಕೆಂಬ ನಿಯಮವನ್ನು
ಮುರಿದಿರುವೆ!

ಭಕ್ತಿಯೆಂಬುದು ಶುದ್ಧ ಖಾಸಗಿ.

● ಜ್ಯೋತಿ ಗುರುಪ್ರಸಾದ್






ಅವಳ ಉದ್ಧಾರ

ದಕ್ಷಿಣ ಕನ್ನಡದಲ್ಲಿ ಹುಟ್ಟಿ ಬೆಳೆದ ಸರಸ್ವತಿಬಾಯಿ ರಾಜವಾಡೆ (1913-94) ಅವರು ಬಹುಮುಖಿ ಪ್ರತಿಭೆ ಆಗಿದ್ದರು. ಬಡ ಹುಡುಗಿ ಆಗಿದ್ದಾಗ ಅವರು ಮನೆಗೆಲಸ ಮಾಡುತ್ತಿದ್ದರು. ಅಪಾರ ಸೌಂದರ್ಯವನ್ನು ಹೊಂದಿದ್ದ ಅವರು ಆನಂತರ ರಂಗಭೂಮಿಯಲ್ಲಿ, ಮುಂಬೈನ ಮೂಕಿ ಸಿನಿಮಾಗಳಲ್ಲೂ ನಟಿಸಿದರು. ಹಾಡುಗಾರ್ತಿಯಾಗಿ ದೇಶ ಸುತ್ತಿದರು. ಬಿಹಾರ ಕಲೆಕ್ಟರ್‌ನನ್ನು ಮದುವೆಯಾಗಿ ಶ್ರೀಮಂತ ಜೀವನ ನಡೆಸಿದರು. ಮೊದಲು ತಮಿಳಿನಲ್ಲಿ ಆಮೇಲೆ ಕನ್ನಡದಲ್ಲಿ ಕತೆಗಳನ್ನು ಬರೆದರು. ಮಾಸ ಪತ್ರಿಕೆಯನ್ನೂ ನಡೆಸಿದರು. ಕೊನೆಗೆ ವೈರಾಗ್ಯಶಾಲಿಯಾಗಿ, ತನ್ನೆಲ್ಲ ಐಶ್ವರ್ಯವನ್ನು ದಾನ ಮಾಡಿ ತಮ್ಮ 81ನೇ ವಯಸ್ಸಿನಲ್ಲಿ ತೀರಿಕೊಂಡರು.



ಖ್ಯಾತ ಲೇಖಕಿ ವೈದೇಹಿ ಅವರು ಸರಸ್ವತಿಬಾಯಿ ಅವರ ಬದುಕು ಮತ್ತು ಬರಹಗಳನ್ನು 'ಮುಂತಾದ ಕೆಲ ಪುಟಗಳು' ಎಂದು ನಿರೂಪಿಸಿ ಸಂಪಾದಿಸಿದ್ದಾರೆ. ಆ ಪುಸ್ತಕದಲ್ಲಿರುವ ಸರಸ್ವತಿಬಾಯಿ ರಾಜವಾಡೆ ಅವರು ಬರೆದಿದ್ದ ಒಂದು ಕತೆ ಇಲ್ಲಿದೆ....

ಸರಸ್ವತಿಬಾಯಿ ರಾಜವಾಡೆ



ಕತೆ

ಪತಿತೆಯೊಬ್ಬಳು ವಿಧವಾಶ್ರಮದ ಮುಂದೆ ನಿಂತಿದ್ದಳು. 'ಭಗಿನಿ, ಸಂಕೋಚ ಪಡಬೇಡ. ಬಾ, ಒಳಗೆ ಬಾ. ನಿನ್ನ ಮನೆಯೇ ಎಂದು ತಿಳಿ. ಸಮಾಜರೂಪೀ ಕರಾಳ ರಾಕ್ಷಸನಿಂದ ನಿಮ್ಮಂಥವರನ್ನು ರಕ್ಷಿಸಲೆಂದೇ ಈ ಆಶ್ರಮದ ಸ್ಥಾಪನೆಯಾಗಿರುತ್ತದೆ.'

ಪತಿತೆಯ ಕಣ್ಣುಗಳಲ್ಲಿ ನೀರು ತುಂಬಿತು. ಆಹ! ತನ್ನದಲ್ಲದ-ತನ್ನೊಂದು ಸಣ್ಣ ಅಪರಾಧಕ್ಕಾಗಿ ಮನೆಯಿಂದಲೇ ಹೊರದೂಡಿ, ಬೀದಿಯ ಭಿಕಾರಿಣಿಯನ್ನಾಗಿ ಮಾಡಿದ ತನ್ನವರೆಲ್ಲಿ! ಸಹೋದರ ವಾಂಛೆಯಿಂದ ಅನಾಥಳಾದ ತನ್ನನ್ನು ಬರಮಾಡಿಸಿಕೊಳ್ಳುತ್ತಿರುವ ಈ ಮಹಾತ್ಮರೆಲ್ಲಿ!

ಅವಳು ಆಶ್ರಮದ ವ್ಯವಸ್ಥಾಪಕರನ್ನು ಹಿಂಬಾಲಿಸಿದಳು. ವಿಶಾಲವಾದೊಂದು ಕೊಠಡಿ. ಆಶ್ರಮದ ಕಾರ್ಯನಿರ್ವಾಹಕ್ಕಾಗಿ ಮೀಸಲಾಗಿಟ್ಟುದೆಂದು ಕಂಡೊಡನೆ ತಿಳಿದುಬರುವಂಥ ವ್ಯವಸ್ಥೆಯುಳ್ಳದಾಗಿತ್ತು, ವ್ಯವಸ್ಥಾಪಕರು, ತಮ್ಮ ಆಸನದಲ್ಲಿ ಕುಳಿತು, ಮೇಜಿನ ಮೇಲಿದ್ದ ದಾಖಲೆಯ ಪುಸ್ತಕವನ್ನು ತೆಗೆದರು.

'ನಿನ್ನ ಊರಾವುದು ತಾಯಿ?'

'ಚಿಂತಾಮಣಿ.'

'ಹೆಸರು?'

'ಗೋಪಿ.'

'ವಯಸ್ಸು?'

'ಇಪ್ಪತ್ತಮೂರು.'

'ಮಕ್ಕಳಾಗಿದ್ದುವೆ?'

'.....'

'ಹೇಳಮ್ಮ, ನಾಚುಗೆ ಬೇಡ.'

'ಈ ಸ್ಥಿತಿಗೆ ಬಂದು ಹತ್ತು ವರ್ಷಗಳಾಗುತ್ತ ಬಂದವು. ನನ್ನ ಭಾಗ್ಯವು ಹಾಳಾದಾಗ ನಾನು ಇನ್ನೂ ಪ್ರಾಯಕ್ಕೆ ಬಂದಿರಲಿಲ್ಲ....'

'ಸರಿ; ಬಾಲವಿಧವೆ. ಆದರೆ ಇದೀಗ ಮನೆಯವರು ಕೈಬಿಡಲು ಕಾರಣವೇನು ತಿಳಿಸಬಹುದೆ?'

'...ನನ್ನ ಭಾವನವರು... ನನಗೀಗ ಏಳು ತಿಂ-ಗ-ಳು.'

'ನಮ್ಮ ಆಶ್ರಮದ ಸಂಗತಿಯು ನಿನಗೆ ಹೇಗೆ ತಿಳಿಯಿತು ತಾಯಿ?'

'ಪತ್ರಿಕೆಗಳ ಜಾಹೀರಾತಿನ ಮೂಲಕ.'

'ನಿನಗೆ ಓದು ಬರಹವುಂಟೆ?'

'ಶಾಲೆಗೆ ಹೋದವಳಲ್ಲ. ಆದರೂ ಓದಿ ಅರ್ಥಮಾಡಿಕೊಳ್ಳುವಷ್ಟು ತಿಳಿಯುತ್ತದೆ.'

'ಸರಿ. ಯಾವ ಚಿಂತೆಯೂ ಇಲ್ಲದೆ ನೀನಿನ್ನು ಸುಖವಾಗಿರಬಹುದು. ಪ್ರಕೃತ ಮಾತೃಮಂದಿರ ವಿಭಾಗದಲ್ಲಿ ನಿನ್ನನ್ನಿರಿಸುವೆವು. ಅಲ್ಲಿ ಮಾತೆಯು ನಿನ್ನನ್ನು ನಿಶ್ಚಯವಾಗಿಯೂ ಪ್ರೀತಿಸುವರು.'

* * * *

ವಿಧುರನೊಬ್ಬನು ವಿಧವಾಶ್ರಮದ ಮುಂದೆ ನಿಂತನು. 'ದಯಮಾಡಿಸಬೇಕು ರಾಯರು. ತಮ್ಮದೇ ಸಂಸ್ಥೆ ಇದೆಂದು ತಿಳಿಯಬೇಕು. ಸಂಕೋಚ ಮಾಡಬಾರದು. ಒಳಕ್ಕೆ ಬರೋಣವಾಗಲಿ.'

ವಿಧುರನು ವ್ಯವಸ್ಥಾಪಕನನ್ನು ಹಿಂಬಾಲಿಸಿದನು. ಇಬ್ಬರೂ ಏಕಾಂತಕ್ಕೆ ನಡೆದರು.

'ನಿಮ್ಮ ಪ್ರಸಿದ್ಧ ಪತ್ರಿಕೆಯ ಪ್ರಕಾರ ನಾನು ಬಂದಿರುವುದಾಗಿದೆ. ದೊಡ್ಡಮನೆ, ಬೇಕಾದ ಸಂಪತ್ತು; ಮಕ್ಕಳಿಲ್ಲ, ಆವಳು ಹೋಗಿ ವರ್ಷವಾಯಿತು. ಇದ್ದಾಗಲೂ ಕಾಯಿಲೆ; ಸಂಸಾರ ಸುಖವಿಲ್ಲ, ಪ್ರಾಯ ಮೀರಿದರೂ ಒಂದು ಆಸೆ-ಒಂದು ಭ್ರಾಂತಿ-ಒಂದಾದರೂ ಮಗುವಾಗಿ ಸಂಪತ್ತಿಗೆ ವಾರಸು ದೊರೆಯುವುದೋ, ಪಿತೃಋಣ ತೀರೀತೋ ಏನೋ ಎಂದು! ಸಣ್ಣ ಹುಡುಗಿಯನ್ನು ಮದುವೆಯಾಗುವ ಪ್ರಾಯ ಮೀರಿತು ನೋಡಿ!'

'ಛೇ, ರಾಯರೇ! ತಮಗೆ ಪ್ರಾಯ ಸಂದಿರುವುದೆಂದು ಹೇಳಿದುದಾರು? ಹೆಚ್ಚಾದರೆ ಐವತ್ತೋ! ಸಂದೇಹ. ಶಾಸ್ತ್ರಿವನಾತ್ಯರು ನೋಡಿ, ಐವತ್ತರಲ್ಲಿ ಪಟ್ಟಾಭಿಷೇಕವೆನ್ನುವರು. ತಮ್ಮಂತಹವರ ಸಹಾಯವಾಗಲೆಂದೇ-ಅನಾಥರಿಗೆ ದಾರಿಗಾಣಿಸಲೆಂದೇ ನಾವೀ ಆಶ್ರಮವನ್ನು ಬಹುಶ್ರಮದಿಂದ ನಡೆಸುತ್ತಾ ಬರುತ್ತಿದ್ದೇವೆ. ತಮ್ಮಂಥಾ ಎಷ್ಟೊಂದು ಸದ್ಗೃಹಸ್ಥರು ನಮ್ಮಿಂದ ಸಂತೋಷ ಕಾಣಲಿಲ್ಲ! ಎಷ್ಟೊಂದು ಅನಾಥ-ಅಬಲೆಯರು ಮಕ್ಕಳು ಮರಿಗಳನ್ನು ಹಡೆದು ಸಮಾಜದಲ್ಲಿ ಗೌರವ ಸ್ಥಾನವನ್ನು ಹೊಂದಲಿಲ್ಲ! ಎಲ್ಲ ಈಶ್ವರ ಕೃಪೆ! ತಮ್ಮ ಸುಖಕ್ಕಾಗಿ, ತಾವು ಇಷ್ಟಪಡುವ ಪ್ರಾಣಿಯನ್ನು ಆರಿಸಿಕೊಳ್ಳಬಹುದು. ಬಾಲವಿಧವೆಯರು, ಪ್ರೌಢ ವಿಧವೆಯರು, ಮಕ್ಕಳ ತಾಯಂದಿರು, ಗರ್ಭವತಿಯರು- ಇವರಲ್ಲಾರಾದರೂ ಸರಿಯೆ, ತಮ್ಮ ಕೋರಿಕೆಗೆ ಬಂದೊಡನೆ ತಮ್ಮ ಗೃಹಿಣಿಯೆಂದು ತಿಳಿಯಿರಿ.'

'ಅದೆಲ್ಲಾ ಸರಿಯೆ, ನನಗೆ ಪ್ರಾಯ ಬಂದ, ಒಂಟಿ ಸ್ತ್ರೀಯೇ ಆಗಬೇಕಾಗಿದೆ. ತಮ್ಮ ಖರ್ಚು ಏನು ತಗುಲಬಹುದು?'

'ತಮ್ಮಂಥವರು ಹಾಗೆ ಕೇಳಬಾರದು. ಅನಾಥೋದ್ಧಾರಕ್ಕಾಗಿ ವ್ಯಯಿಸಲ್ಪಡುವ ಹಣ. ಅದು ಎಷ್ಟಾದರೇನು? ತಾವು ಇಷ್ಟಪಟ್ಟಷ್ಟು.'

'ಐನೂರು?'

'ರಾಯರೇ!'

'ಹೋಗಲಿ, ಸಾವಿರ.'

'ತಾವು ತಮ್ಮ ಗೋಪಿಯನ್ನು ನೋಡಬೇಕು. ಸುರಸುಂದರಿ. ಸದ್ಗುಣಿ; ಮಗಳಂತೆ ವರ್ಷದಿಂದ ಸಾಕಿದ್ದೇವೆ. ಅವಳ ಕೂದಲು ಮುಡಿಯ ಬೆಲೆಯಿಲ್ಲ ರಾಯರೆ ತಮ್ಮ ಸಾವಿರ! ಅದೋ, ಇತ್ತ ಈ ಕಿಟಕಿಯ ಕಡೆಗೆ ಬನ್ನಿ, ಅಲ್ಲಿ ನೋಡಿ. ತುಲಸಿಗೆ ನೀರೆರೆಯುತ್ತಾಳಲ್ಲಾ, ಅವಳೇ ನಾಳೆ ತಮ್ಮ ಗೃಹಿಣಿಯಾಗತಕ್ಕವಳು! ತಮ್ಮಂತಹ ಶ್ರೀಮಂತರನ್ನು ಸೇರಿ ಅವಳ ಹಾಳಾದ ಭಾಗ್ಯವು ಬೆಳಗಲಿ!'

'ಏನು!... ಅವಳೆ? ನನ್ನವಳು? ಇರಲಿ. ಮರುಮಾತಿಲ್ಲದೆ ಐದು ಸಾವಿರವೆಂದು ಒಪ್ಪಿಕೊಂಡೆನು. ನಿಮ್ಮ ಆಶ್ರಮವು ಚಿರಸ್ಥಾಯಿಯಾಗಲಿ. ಇಂಥಾ ಸ್ತ್ರೀಯರು ನಿಮ್ಮ ಆಶ್ರಮದಲ್ಲಿ ಇನ್ನೂ ಹೆಚ್ಚಲಿ. ಆರ್ಯ ವಿಧಿರೀತ್ಯಾ ನಾಳೆಯೇ ಶುಭಮುಹೂರ್ತವಾಗಬಹುದೇ?'

'ತಮ್ಮ ಆಜ್ಞೆಗೆ ವಿರೋಧವೇ?'

'ನಮಸ್ಕಾರ!'

'ನಮಸ್ಕಾರ.'

* * * *

ಆಶ್ರಮದ ಬಯಲಲ್ಲಿ ಅವರಿಬ್ಬರು ಮಾತಾಡುತ್ತಿದ್ದರು.

'ಮಗು, ತಾಯಿ! ನೀನು ದುಃಖಿಸುವುದೇಕೆ?'

'ಅಯ್ಯೋ, ನನ್ನನ್ನು ಇಲ್ಲೇ ಇರಗೊಡಿ. ಏನೋ, ಬಲಪ್ರಯೋಗದಿಂದಾಗಿ ಮಾತ್ರ ನಾನು ಪತಿತೆಯಾದೆನಲ್ಲದೆ, ಆತ್ಮಸಾಕ್ಷಿಯಾಗಿ ನನಗೆ ಪೂರ್ವಸಂಪ್ರದಾಯದಲ್ಲಿ ನಂಬಿಕೆಯೂ, ಭಕ್ತಿಗೌರವಗಳೂ ಇವೆ. ಆತ್ಮತಃ ನಾನು ಪರಿಶುದ್ಧಳು-ಹಾಗೆಯೇ ಸಾಯುವವರೆಗೂ ಇರಬೇಕೆಂದು ನನ್ನ ಆಸೆ. ಅದನ್ನೇಕೆ ಕೆಡಿಸುವಿರಿ? ಇಷ್ಟು ದಿನ ತಾಯಿತಂದೆಯರಂತೆ ಸಾಕಿ ಕೊನೆಗೆ ಬಿಟ್ಟುಹಾಕುವಿರಾ? ಸ್ವೇಚ್ಛೆಯಿಂದಲ್ಲದೆ, ಆಶ್ರಮದಲ್ಲಿ ಬಲಪ್ರಯೋಗ ಮಾಡಲ್ಪಡುವುದಿಲ್ಲವೆಂದು ಕೇಳಿದ್ದೆ. ಅದು ಸುಳ್ಳೆ?'

'ಏನು ಹುಚ್ಚ ಮಗು ನೀನು! ಇಷ್ಟು ಚಿಕ್ಕ ಪ್ರಾಯ! ಪ್ರಪಂಚವೆಲ್ಲಾ ಆನಂದಸಾಗರದಲ್ಲಿ ಓಲಾಡುತ್ತಿದೆ! ಇಂಥಾ ರೂಪ! ಬದಲು ಪತಿಯ ಪ್ರೀತಿಯೇನೆಂಬುದರ ಕಲ್ಪನೆ ಕೂಡ ಇಲ್ಲದವಳು! ಹಾಗೆಲ್ಲಾ ಹಚ್ಚಿಕೊಳ್ಳಬಾರದು. ದೊಡ್ಡ ಮನೆ ಸೇರುವೆ. ಬೇಕಾದ ಸಂಪತ್ತು, ಒಳ್ಳೆ ಗುಣಗೃಹಸ್ಥ. ಅಲ್ಲದೆ ಒಬ್ಬಂಟಿಗ. ಅತ್ತೆ ಮಾವಂದಿರ ಕಾಟವಿಲ್ಲ, ಸವತಿ ಮಕ್ಕಳ ಉಪದ್ರವವಿಲ್ಲ, ಸ್ವತಂತ್ರಳಾಗುವೆ. ನೀನು ಸುಖಪಟ್ಟರೆ ನಮಗೆ ಆನಂದ. ನಿಮ್ಮಂಥವರ ಉದ್ಧಾರವೇ ನಮ್ಮ ಆಶ್ರಮದ ಧ್ಯೇಯ! ಅಲ್ಲದೆ ಆಜನ್ಮ ನೀವೆಲ್ಲರೂ ಇಲ್ಲೇ ಕುಳಿತುಕೊಂಡರೆ ನಮ್ಮಿಂದ ಸಾಕಲು ಸಾಧ್ಯವಾಗುವುದೆ ತಾಯಿ? ಗತಿ ಇಲ್ಲದವರಿಗೆ ಗತಿಕಾಣಿಸಲೆಂದು ಮಾತ್ರ ಈ ಆಶ್ರಮ ಮಗು! ಅಲ್ಲಗಳೆದರೆ ನಮ್ಮನ್ನು ನಿಷ್ಠೂರರೆಂದು ತಿಳಿಯಬೇಕಾಗಿ ಬಂದೀತು!'

'ಹಾಗಾದರೆ ಅಮ್ಮಾಜಿಯವರ ಉಪದೇಶದ ಅರ್ಥವೇನು?'

'ವ್ಯಭಿಚಾರ ಮಾತ್ರ ದೋಷವಮ್ಮಾ. ಒಬ್ಬನೊಂದಿಗೆ ಜೀವ ನಿರ್ವಾಹಕ್ಕಾಗಿ ಸಂಸಾರ ಮಾಡುವುದು ತಪ್ಪಲ್ಲ. ನಿನ್ನ ಹೊಸ ಪತಿಯೊಂದಿಗೆ ಪತಿವ್ರತೆಯರ ತತ್ವಗಳನ್ನು ನೀನು ಅನುಸರಿಸಿದರೆ ನಿನಗೆ ಮೋಕ್ಷವು ನಿಶ್ಚಯ.'

'ನನ್ನ ಮಗುವಿನ ಗತಿ?'

'ಎಲ್ಲಿಯ ಮಗು ತಾಯಿ? ಅದು ಅನೀತಿಯ ಸಾಕ್ಷಿ. ಒಬ್ಬ ಕಾಮುಕನ ವಾಸನಾಪಿಂಡ! ಅದು ಆಶ್ರಮದಲ್ಲೇ ಉಳಿಯಲಿ! ಅನಾಥಬಾಲಕರೊಂದಿಗೆ ಬೆಳೆದು ಕಲಾಶಾಲೆಯಲ್ಲಿ ಕಲಿತು, ಪ್ರಸಿದ್ಧಿಗೆ ಬರಲಿ. ಅದನ್ನು ನೀನು ಹೆತ್ತಿರುವೆಯೆಂದು ಯಾರಲ್ಲೂ ಪ್ರಸ್ತಾಪಿಸಬೇಡ. ನಿನ್ನ ಜೀವನದಲ್ಲಿ ಅದೊಂದು ಅಜ್ಞಾತಸಂಭವವಾಗಿರಲಿ.'

ಅವಳಿನ್ನೇನು ಮಾತಾಡಲು ಸಾಧ್ಯ? ಅವಳದ್ದೇನು ನಡೆಯಬಹುದು? ಮಾರನೆ ದಿನ ಆಶ್ರಮದ ವ್ಯವಸ್ಥಾಪಕರು ಎಡಕೈಯಲ್ಲಿ ಐದು ಸಾವಿರದ ಥೈಲಿಯನ್ನು ಹಿಡಿದುಕೊಳ್ಳುವಾಗ ಬಲಕೈಯು ಗೋಪಿಯನ್ನೊಪ್ಪಿಸಿ ಮುದುಕನ ಕೈಯನ್ನು ಹಿಡಿಸಿತು.


* * * *

ನೂತನ ಸಂಸಾರವು ಸಾಗುತ್ತಿರುವಾಗ ಒಂದು ದಿನ ನಟ್ಟಿರುಳಲ್ಲಿ 'ಬೆಡಗುಗಾತಿ! ಸಾಕು ನಿನ್ನ ಬಿನ್ನಾಣವೆಲ್ಲ, ಕುಡಿಯಬಾರದಂತೆ-ಕುಡಿದರೆ ಕೆಟ್ಟು ಹೋಗುವುದೇನು? ನಾನು ಗಳಿಸಿಟ್ಟ ಹಣವನ್ನು, ನಾನು ಉಪಭೋಗಿಸದೆ ಯಾರಿಗಿಡಲಿ? ನಿನ್ನನ್ನು ಕಟ್ಟಿಕೊಂಡು ವರ್ಷವಾಯಿತು. ಒಂದು ಮಗುವಾದರೂ ಹುಟ್ಟಿದ್ದರೆ ಸಾರ್ಥಕವಾಗುತ್ತಿತ್ತು. ಬಾಳಿನ ನೋವನ್ನು ಮರೆಯಲು ಕುಡಿಯುತ್ತಿದ್ದರೆ ನಿನ್ನದೇನು ನಷ್ಟ? ಅಧಿಕಪ್ರಸಂಗ ಮಾಡಿದೆಯಾದರೆ ಒದೆ ತಿನ್ನಬೇಕಾದೀತು.'

'ಅಯ್ಯೋ, ಹಾಗಲ್ಲ-ಕುಡಿತವು ಕೆಟ್ಟದೆಂದು ಕೇಳಿದ್ದೆ. ಹಣ ಹಾಳಾಗಲಿ, ಆದಾಗಲೇ ದೇಹವನ್ನೆಲ್ಲಾ ಕೆಡಿಸಿಕೊಂಡಿರುತ್ತೀರಿ. ಇನ್ನು ಕುಡಿದು, ಆತ್ಮವನ್ನೂ ಏಕೆ ಹಾಳು ಮಾಡಿಕೊಳ್ಳಬೇಕೆಂದಿಷ್ಟೆ ನಾನು ಹೇಳುವುದು... ಮತ್ತೆ ನಿಮಗೆ ಹೇಳಲು ನನಗೇನು ಅಧಿಕಾರವಿದೆ?'

'ನನ್ನಾತ್ಮವು ಅದೆಂದೋ ಹಾಳಾಗಿಹೋಗಿದೆ. ಮೇಲಾಗಿ ನಿನ್ನಂತಹ ಗೊಡ್ಡು ಹೆಣದೊಂದಿಗೆ ಸಂಸಾರ! ಇನ್ನೇನು ಬೇಕು ನನ್ನಾತ್ಮ ಹಾಳಾಗಲಿಕ್ಕೆ? ಕುಡಿತವು ನನಗೆ ಹೊಸತಲ್ಲ. ಹೆಚ್ಚು ಹರಟಬೇಡ. ಹೋಗಾಚೆ! ನಿನ್ನನ್ನು ಹೊರದೂಡಿದರೇನು? ನೀನಾರು ನನಗೆ ಉಪದೇಶ ಮಾಡಲಿಕ್ಕೆ? ನನಗೇನು? ಹಣವುಂಟು-ನಿನ್ನಂಥ ಹತ್ತು ಮಂದಿಯೂ ಇದ್ದಾರೆ. ನಿನ್ನಂತಹ ಗೊಡ್ಡಿಗೆ ತೆರಲಿಲ್ಲವೆ ಐದು ಸಾವಿರ?'

'ಸುಮ್ಮನೆ ಏಕೆ ಗೊಡ್ಡು-ಗೊಡ್ಡು ಎನ್ನುತ್ತೀರಿ? ನಿಮ್ಮಾತ್ಮವು ಒಪ್ಪುತ್ತದೆಯೇ? ಅಥವಾ ನೆರೆಕರೆಯವರ ಕಣ್ಣಿಗೆ ಮಣ್ಣು ಹಾಕಲು ಹೇಗೆ ಹೇಳುವಿರಿ? ನಾನು ಗೊಡ್ಡು ಎಂಬುದಕ್ಕೆ ಸಿದ್ಧಾಂತವೇನು? ಹೊರನೋಟಕ್ಕೆ ಗಂಡಹೆಂಡರಂತಿದ್ದರೆ ನಮ್ಮದು ತಂದೆಮಕ್ಕಳಂತಹ ಸಂಬಂಧ. ಹೇಳಿ-ನನ್ನ ದೇಹವನ್ನು ಪತ್ನೀ ರೂಪದಿಂದ, ಸ್ಪರ್ಶಿಸಬೇಕಾದ ರೀತಿಯಲ್ಲಿ, ಸ್ಪರ್ಶಿಸಿರುತ್ತೀರೆ? ಹಾಗಿದ್ದ ಮೇಲೆ ನನ್ನನ್ನು ಗೊಡ್ಡು ಎಂದು ಹೇಗೆ ನಿರ್ಧರಿಸಿದಿರಿ? ನಾನು ಹೇಗೂ ಪತಿತೆ; ಎಂದಮೇಲೆ ನನಗೆ ನಾಚುಕೆಯೇನು? ನಾನು ಗೊಡ್ಡಾಗಿ ಇದ್ದಿದ್ದರಾದರೂ ಸಮಾಜದಲ್ಲಿ ನನಗೆ ಸ್ಥಾನವಿರುತ್ತಿತ್ತೋ ಏನೊ! ಹಾಗಿರುತ್ತಿದ್ದರೆ ನಿಮ್ಮಲ್ಲಿಗೇಕೆ ಬರುತ್ತಿದ್ದೆ? ನಾನು ಗರ್ಭಿಣಿಯಾದ ದೋಷವೇ ನನ್ನನ್ನು ಪತಿತೆಯನ್ನಾಗಿ ಮಾಡಿತು- ನಾನು ಗೊಡ್ಡಲ್ಲ- ನನ್ನ ಮಗು ಆಶ್ರಮದಲ್ಲಿ ಬೆಳೆಯುತ್ತಿದೆ... ಮುದ್ದಾದ ಮಗು...'



'ಏನು!... ನೀನು ವ್ಯಭಿಚಾರಿಣಿಯೇ? ಭಲೆ-ನಿನ್ನಂತಹ ...ಳಿಗೆ ನಾನು ಐದು ಸಾವಿರ ತೆತ್ತೆನೆ? ಆ... ಮಗನೇಕೆ ...ನಗೆ ಈ ವಿವರವನ್ನು ತಿಳಿಸಲಿಲ್ಲ! ಪಾಪಿ! ನನ್ನ ಐದು ...ವಿರ!'

'ಯಾರಲ್ಲಿ ಕೇಳುತ್ತೀರಿ? ನಿಮ್ಮಲ್ಲಿ ನಾನು ಬೇಡಿದೆನೆ? ...ರಿಗೆ ಕೊಟ್ಟಿರಿ? ಯಾಕೆ ಕೊಟ್ಟಿರಿ? ನನಗೇನು ಗೊತ್ತು? ...ನ್ನನ್ನು ಗೋಳು ಹೊಯ್ದು ಫಲವಾದರೂ ಏನು? ನಾನು ...ನಾಥೆ-ಪತಿತೆ-ಅದೃಷ್ಟಹೀನೆ-ತಮ್ಮನ್ನು ಸೇರಿಯೂ ...ಖದಿಂದ, ಗೌರವದಿಂದ ಇರಲು ಭಾಗ್ಯವಿಲ್ಲದ ...ಕಾರಿಣಿ...'

ಎರಡು ಒದೆಗಳು!

'ಸುಖ! ಇನ್ನಾವ ಸುಖ ಬೇಕು ನಿನಗೆ? ಉಣ್ಣಲಿಲ್ಲವೆ? ...ಡಲಿಲ್ಲವೆ? ಮೇಲಾಗಿ ನನ್ನಲ್ಲಿ ಅಧಿಕಾರ ಮಾಡುತ್ತೀ. ...ಡನೆಂದು ಹಂಗಿಸುತ್ತೀ. ರಾಕ್ಷಸಿ-ಕುಲಟೆ-ನಡೆ-ಬಿಡು ನನ್ನ ...ನೆಯನ್ನು- ಬಿಟ್ಟು ಹೊರದು.'

'ದೇವರೆ! ಎಲ್ಲಿಗೆ ಹೋಗಲಿ- ಈ ಅಪರಾತ್ರೆಯಲ್ಲಿ...!!!'

'ಅಲ್ಲಿಗೆ, ನಿನ್ನ ಮಗುವಿನ ತಂದೆಯಲ್ಲಿಗೆ, ಓಡು... ...ದು ಸಾವಿರ! ಬೆಳಗಾಗಲಿ; ಅವನನ್ನೊಂದು ಕೈ ...ಡುವೆನು'

ಕುಡುಕನು ಅವಳನ್ನು ಹೊರದಬ್ಬಿ ಬಾಗಿಲು ...ಕಿಕೊಂಡನು. ಅವಳು ಪುನಃ ನಿರಾಶ್ರಿತೆ!

* * * *

ಅದೇ ರಾತ್ರಿ ದಾರಿಯಲ್ಲಿ,

'ಏ, ಅಮ್ಮಾ, ಯಾರು ನೀನು- ಈ ರಾತ್ರಿಯಲ್ಲಿ ...ಕೆ ಬೀದಿಯಲ್ಲಿ ಅಲೆಯುತ್ತೀ?'

'ವಿಧಿಯಪ್ಪಾ, ವಿಧಿ! ಅದನ್ನೆಲ್ಲಾ ಏನು ಕೇಳುತ್ತೀ- ...ನೇನೆಂದು ಹೇಳಲಿ?'

'ನೀನು ಚಂದಾಗಿದ್ದೀಯಲ್ಲಾ?'

'......'

'ಏನಮ್ಮಾ ಮಾತಾಡುವುದಿಲ್ಲ, ನಿನ್ನನ್ನು ನೋಡಿದರೆ, ...ನಗೆ ಲಾತು ಕೊಟ್ಟು ಬಂದವಳೆಂದು ತೋರುತ್ತದೆ. ...ಗಿದ್ದರೆ ಚಿಂತೆ ಬೇಡ. ಮಹಬೂಬಿ ಭಲೇ ಸಂತೋಷ ...ಡ್ತಾಳು. ಬರುತ್ತೀಯಾ ಅಲ್ಲಿಗೆ ಹೋಗೋಣ?'

'ಯಾರಪ್ಪಾ, ಅದು, ಮಹಬೂಬಿಯೆಂದರೆ?'

'ಅದೆಲ್ಲಾ ನಿನಗೆ ಯಾಕೆ? ಬಾ, ಭಲೇ ರಂಗಿನಲ್ಲಿ ...ಲು ಕಳೆಯಬಹುದು.'

'ನಡೆಯಪ್ಪಾ; ಇಡೀ ಮುಳುಗಿದವರಿಗೆ ಛಳಿಯೇನು? ...ಗುವುದೆಲ್ಲಾ ಆಗಲಿ. ಪ್ರಪಂಚದ ನಿಜ ಸ್ವರೂಪವಾದರೂ ...ಗಿದೆ ನೋಡೋಣ!'

'ಒಳ್ಳೆ ಜಾಣೆಯಮ್ಮಾ ನೀನು; ಹೀಗೆ ಬಾ.'

* * * *

ಮಹಬೂಬಿಯ ಮನೆಗೆ ಹೋದ ಮೇಲೆ:

'ಬೂಬಾಜಾನ್, ನೋಡು ನಿನಗೊಂದು ಹಕ್ಕಿ!'

'ಯಾರೆಜೋ, ಅದು! ಏನಿದು ಬೊಬ್ಬೆ...' ಆದರೆ, ...ವಳನ್ನು ನೋಡುತ್ತಲೇ, 'ಆಹಾ, ಇದಾರು! ಭಲೆ ...ಬಿಯಾಗಿದ್ದಾಳಲ್ಲಾ! ಬಾ, ಬಾಯೀ, ನೀನು ನನ್ನ ಮಗಳು! ... ಹೀಗೆ ಬಾ.'

ಅವಳೇನೆಸ್ಸುವಳು? ಅಲಂಕೃತವಾದ ಮನೆಯನ್ನೊಮ್ಮೆ ...ವಾದ ದೃಷ್ಟಿಯಿಂದ ನೋಡಿದಳು. ಅವಳಿಗೆ ತನ್ನ ...ದಿನ ದಿನಗಳು ಅಲ್ಲಿ ಹೇಗೆ ಕಳೆಯಲಿದೆಯೆಂಬುದರ ...ವಾಯಿತು. ಮಾರನೇ ದಿನವೇ ಅವಳ ಕಾರ್ಯಕಮವು ...ದಾಗುವುದು.

ಶಿಢವಾಶಮದಿಂದ ಆದುದು ಇದೇ ಏನು?

ಅವಳ ಉದ್ಧಾರ!

● ಸರಸ್ವತಿಬಾಯಿ ರಾಜವಾಡೆ

ಬಹುರೂಪಿಗಳ ದಿನಚರಿಯಲ್ಲಿ



ಚುಮುಚುಮು ಬೆಳಕೇ
ದೇವರು ಎದ್ದರು ಭಿಕ್ಷಾಕೆ!
ಸೂರ್ಯಗೆ ನಮಿಸಿ ನೀರನು ಚಿಮುಕಿಸಿ
ಬಸ್ ಸ್ಟ್ಯಾಂಡಿನ ಬಯಲಲ್ಲಿ ಜಾಗರಗೈದವರು

ನದಿ ತಟದ ಜನರಲ್ಲ, ಗುಡಿ - ಗುಡಿಸಲುಗಳಿಲ್ಲ
ಊರಬೀದಿಯ ಇರುವೆಗಳು
ಚಂದ್ರನದಿಂಬ ಸೂರ್ಯನ ಕಣ್ಣು
ಮಂಜಿನ ಬಣ್ಣವ ಕಲಿಸಿದರು ಹರುಕು ಬಟ್ಟೆಗಳ ಗಬಾಳಲಿಟ್ಟು
ದೇವರ ಉಡುಪನು ಧರಿಸಿದರು
ಛದ್ಮವೇಷದ ದೇವರುಗಳು ದೇವರ ಕಥೆಯನು ಸಾರುವರು
ರಾಮ ರಾಮ ರಾಮಾಂಜನೇಯರು ಲಕ್ಷ್ಮಣ ಸೀತೆಯರು


ಕಾಡಿಗೆ ಅಟ್ಟಿ ಮಾತೆಯನು
ಕರುಣೆಯ ಕಣ್ಣಿಗೆ ತುಂಬುವರು
ಶೂರ್ಪನಖಿಯ ಮೊಲೆಮೂಗನು ಕತ್ತರಿಸಿ
ರಾಮನ ಮಹಿಮೆಯ ಸಾರುವರು
ರಾಮ ರಾಮ ರಾಮ ಭಕ್ತರು ಆಂಜನೇಯರು

ನಿಜದ ರೂಪಕೆ ಜಂಗಮ ಜೋಳಿಗೆ
ತಂಗುಳನ್ನಕೆ ಚಾಚಿದ ನಾಲಗೆ
ಹೊಟ್ಟೆಗೊಂದು ಸಾಧನ ದೇವರು! ಶಕುನಕ್ಕೊಂದು ಹಕ್ಕಿ!!
ಬಸ್ಮವಾದಂತೆ ಬಸ್ಮಾಸುರರು ತಿಳಿಯಲಿಲ್ಲ ಅವತಾರಗಳ ಗುಟ್ಟು
ಒಳಗೂಹೊರಗೂ ರಂಗತಾಲೀಮು ರೂಪಾಂತರದ ಗಳಿಗೆ

ನಿಜದ ಅರಿವು ಅವತಾರಗಳ ಅನಾವರ
ದಕ್ಕಿದಲಿವ್ಯ. ಕರವನ ಗುತ್ತು ಅಭಿನಯವಿಲ್ಲ ನಿಜದ ಹಾಕತ್ತು

...ಚ್ಚರಾಗುವ್ಯದೆಂದರೆ,
ಹುತ್ತವನ್ನು ಬೇಧಿಸಿದಂತೆ ಮರಮರಗಳ ಅಸುರಗಳ
ಋಷಿ ಮೂಲಕೆದಕಿ ನದಿಮೂಲನರುಸಿ
ಜೀವನ್ಮುಖಿ ಪಯಣ! ತಾಮ್ರಲದ ದುಗುಡ
ದಾನ - ಧರ್ಮದ ಗುಟ್ಟು ವಾಮನನ ಸುಟ್ಟು
ಬೆಳಕೆಂದು ನಂಬಿಸಿದ ಬೆಂಕಿಯನು ನಂದಿಸಿ
ಬೆಳೆದ ಬೆಳೆಯು ನಾವುಣ್ಣುವ ಅನ್ನ; ಎಡೆಯಲ್ಲ ದೇವರಿಗೆ
ದೇವರೆಂಬುದು ಹೊಟ್ಟೆಪಾಡಿನ ಆಟ ಮನುಷ್ಯ ಕಲ್ಪನೆಯು
ಅಭಿನಯಿಸಿ ಅಭಿನಯಿಸಿ ನೆಲೆ ಇಲ್ಲದಂತಾದವರು
ಕಣ್ಣ ಮುಂದಿನ ಸಾಕ್ಷಿ.........
'ಉದರ ನಿಮಿತ್ತಂ ಬಹುಕೃತವೇಷಂ'
ಬದಲಾದ ದಿನಚರಿಯಲ್ಲಿ ಅವತಾರಗಳ ಬಯಲು
ದೇವರುಗಳಿಗೆ ದೇವರುಗಳ ಸವಾಲು!!!

● ಡಾ|| ಅನಸೂಯ ಕಾಂಬಳೆ



09 ⏮ ಅಹಲ್ಯೆ ಮತ್ತು ಚಿಗಮ

ಬೇಗ ಪೇಟೆಗೆ, ಬೊಂಬಾಯಿಗೆ ಮರುಳಾಗುವವರು. ಹೀಗೆ ಓಡಿಬಂದೆ, ಇಷ್ಟು ದಿನ ಅವನೊಡನೆ ಇದ್ದೆ, ಏಳುವಾಗ ಅವನಿರಲಿಲ್ಲ, ಹಾಗಾಗಿ ಕೆಲಸ ಹುಡುಕಿಕೊಂಡು ಬಂದೆ- ಮುಂತಾಗಿ ಯಾವ ಸಂಕೋಚವೂ ಇಲ್ಲದೆ ಹೇಳುತ್ತಿದ್ದರು ಬೇರೆ. ಚಿಗಮ ಬೊಂಬಾಯಿಗೆ ಹೋಗಿ ಅಲ್ಲಿ ಒಬ್ಬ ಸೇಠ್ ಮನೆಯಲ್ಲಿ ಉಪಪತ್ನಿ ಆಗಿ ಇದ್ದಳಂತೆ. ಬೊಂಬಾಯಿಯಲ್ಲಿ ಶ್ರೀಮಂತರಿಗೆ ಸೇಠ್ ಎನ್ನುವ ಕ್ರಮವಿದೆ. ನಮ್ಮಲ್ಲಿ ಧಣಿಗಳು, ಸಾಹುಕಾರರು ಎನ್ನುತ್ತೇವಲ್ಲ ಹಾಗೆ. ಅಂತಹ ಒಬ್ಬ ಸೇಠ್ ಮನೆಯಲ್ಲಿಯೇ ನನ್ನ ಚಿಕ್ಕಪ್ಪನೂ ಕೆಲಸ ಮಾಡುತ್ತಿದ್ದದು. ಚಿಕ್ಕಪ್ಪನ ಸೇಠ್ ಸಿನಿಮಾಕ್ಕೆ ಸ್ಕ್ರಿಪ್ಟ್ ಬರೆಯುತ್ತಿದ್ದರು. ಒಬ್ಬ ಅಯ್ಯರ್ ಅವರು. ನಾನೊಂದು ಸಲ ಚಿಕ್ಕಪ್ಪ ಮಾತುಂಗದಲ್ಲಿ ಇದ್ದಾಗ ಅವರ ಮನೆಗೆ ಹೋಗಿದ್ದೆ. ಮೊದಲ ಮಹಡಿಯಲ್ಲಿನ ಮನೆ. ಹಜಾರ ಮಂಚಗಿಂಚ ಉಯ್ಯಾಲೆ ಎಲ್ಲ ಇತ್ತು. ನಾನು ಹೋದ ಸಮಯಕ್ಕೆ ಸರಿಯಾಗಿ ಸೇಠ್ ಮದ್ರಾಸಿಗೆ ಹೋಗಿದ್ದರಿಂದ ಅಲ್ಲಿ ನಮ್ಮಿಬ್ಬರದೇ ಸಾಮ್ರಾಜ್ಯವಾಗಿ ಬಿಟ್ಟಿತ್ತು.

ಯಾಕೋ ಬಹುಶಃ ಒಂದೇ ಉಸಿರಿಗೆ ಚಿಗಮನ ಕತೆ ಹೇಳಲು ಆಗುತ್ತಿಲ್ಲ. ಇದೆಲ್ಲ ಸೇರಿಕೊಳ್ಳುತ್ತಿದೆ... ದೊಡ್ಡ ಮಾವ ಇದಕ್ಕೂ ಮೊದಲೇ ಬೊಂಬಾಯಿ ಸೇರಿದ್ದರೆಂದೆನಷ್ಟೆ? ಸೇಠ್ ಮನೆಯಲ್ಲಿದ್ದಾಗ ಚಿಗಮ ಈ ಮಾವನಿಗೆ ನಿಲುಗನ್ನಡಿ, ಗ್ರಾಮೋಫೋನು, ಬಟ್ಟೆ, ದಿಂಬುಗಳು, ಸೋಫಾ ಅದೂ ಇದೂ ಎಲ್ಲ ಕೊಟ್ಟಿದ್ದಳಂತೆ. ಅವರು ತೆಗೆದುಕೊಂಡಿದ್ದರಂತೆ. ನಡುವೆ ಒಮ್ಮೆ ಊರಿಗೆ ಬಂದಿದ್ದಳಂತೆ. ಆದರೆ ಯಾರೂ ಅವಳನ್ನು ಒಳಗೆ ಸೇರಿಸಿಕೊಳ್ಳಲಿಲ್ಲವಂತೆ. ಹೊರಗೆ ಹೊರಗೇ ಊಟ ತಿಂಡಿ ಕೊಟ್ಟರಂತೆ. ಕಾಶಿ ಚಿಗಮನ ಮನೆಯಲ್ಲಿ ಮಾತ್ರ ಒಳಗೆ ಕರೆದಿದ್ದರಂತೆ. ಏನೇ ಇರಲಿ, ಸೇಠ್ ಮನೆಯಲ್ಲಿ ಸುಖವಾಗಿಯೇ ಇದ್ದಳು ಚಿಗಮ. ಯಾವ ತಾಪತ್ರಯವೂ ಇಲ್ಲದೆ. ಸಮೃದ್ಧಿಯಲ್ಲಿ, ತನಗೆ ಬೇಕಾದ ಹಾಗೆ. ಹಾಗೆ ಇದ್ದವಳಿಗೆ ಮತ್ತೆ ಏನಾಯಿತೋ- ಆ ಮನೆಯಲ್ಲಿ ಮದ್ದು ಹಾಕಿದರು ಅಂತಲೂ ಹೇಳುತ್ತಾರೆ. ವಾಸ್ತವವಾಗಿ ಏನು ನಡೆಯಿತು, ಯಾರಿಗೂ ತಿಳಿಯದು. ಅವಳನ್ನು ಅಲ್ಲಿಂದ ಹೊರಹಾಕಿದರು. ಆಕೆ ಹುಚ್ಚು ಹಿಡಿದು ರಸ್ತೆ ರಸ್ತೆ ತಿರುಗುತ್ತಿದ್ದಳು.

ನನ್ನ ಅಜ್ಜಿ ಬೊಂಬಾಯಿಯಲ್ಲಿಯೇ ಆ ಸಮಯ ಒಬ್ಬರ ಮನೆಯಲ್ಲಿ ಮಗುವನ್ನು ನೋಡಲಿಕ್ಕೆ ಇದ್ದರು. ಒಂದು ದಿನ ಅಜ್ಜಿ ಮಗುವನ್ನು ಆಡಿಸಿಕೊಂಡು ಟೆರೇಸಿನ ಮೇಲೆ ಬಂದಾಗ ಇದ್ದಕ್ಕಿದ್ದ ಹಾಗೆ "ಅಮ್ಮಾ..." ಅಂತ ಗಟ್ಟಿಯಾಗಿ ಕಿರುಚಿ ಕರೆದದ್ದು ಕೇಳಿಸಿತಂತೆ. ನೋಡಿದರೆ ಮಗಳು ವೆಂಕಮ್ಮ! ಅಜ್ಜಿಗೆ ಗುರುತು ಸಿಕ್ಕದ್ದೇ ತಕ್ಷಣ ತಲೆ ತಪ್ಪಿಸಿಕೊಂಡರಂತೆ. ಎಲ್ಲಾದರೂ ಅವಳು ಒಳಗೆ ಬಂದರೆ, ತನ್ನ ಕೆಲಸ ಹೋದರೆ ಎಂಬ ಭಯದಲ್ಲಿ ಎಷ್ಟೋ ಹೊತ್ತು ಹೊರಗೆ ಬರಲೇ ಇಲ್ಲವಂತೆ. ಚಿಗಮ ಯಾಕೆ ಅಲ್ಲಿಗೆ ಬಂದಿದ್ದಳೋ. ಅಲ್ಲಿಂದ ಮತ್ತೆಲ್ಲಿಗೆ ಹೋದಳೋ. ಅದಾಗಿ ಕೆಲಸಮಯದ ಮೇಲೆ ಎಲ್ಲೋ ಒಂದು ಕಡೆ ರಸ್ತೆಯ ಮೇಲೆ ಅನಾಥ ಸ್ಥಿತಿಯಲ್ಲಿ ಬಿದ್ದುಕೊಂಡಿದ್ದವಳನ್ನು ಸ್ವಯಂಸೇವಕರು ಎತ್ತಿ ಆಸ್ಪತ್ರೆಗೆ ಸೇರಿಸಿದರಂತೆ. "ಸ್ವಯಂ ಸೇವಕರು" ಎಂಬ ಶಬ್ದ ಕೇಳಿದ್ದೇ ಆಗ ನಾನು. ಇಂಥವರ ಸೇವೆಗಾಗಿ ಸ್ವಯಂ ಸೇವಕರು ಇರುತ್ತಾರೆ ಅಂತ ತಿಳಿದದ್ದು ಕೂಡ ಆಗಲೇ.

ಆಸ್ಪತ್ರೆಗೆ ಹಾಕಿದ ಸ್ವಯಂ ಸೇವಕರು ಚಿಗಮನಲ್ಲಿ ನಿಮ್ಮ ಮನೆಯವರು ಯಾರು ಅಂತ ಕೇಳಿದರೆ ಮೊದಲೇನೋ ಮಾತುಂಗದಲ್ಲಿ ತನ್ನ ಹಿರಿಯಣ್ಣ ಇದ್ದಾನೆ ಅಂತ ಮನೆಯ ಗುರುತು ಹೇಳಿದವಳು, ಆಮೇಲೆ ಏನೋ ಕಂಡಿರಬೇಕು. -ಯಾರೂ ಇಲ್ಲ ಅಂದುಬಿಟ್ಟಳು. ಆದರೂ ಸ್ವಯಂಸೇವಕರು ಅವಳು ಮೊದಲು ಹೇಳಿದ ಆಧಾರದಲ್ಲಿ ಸಂಬಂಧಿಕರಿಗಾಗಿ ಹುಡುಕಾಡಿದರು. ಹುಡುಕಿ ಹುಡುಕಿ ಅಂತೂ ಸ್ವಲ್ಪ ದಿವಸದ ಮೇಲೆ ಮಾವನ ಮನೆಯನ್ನು ಪತ್ತೆ ಹಚ್ಚಿ ಸುದ್ದಿಯನ್ನೇನೋ ತಿಳಿಸಿದರು. ಆದರೆ ಮಾವ ಹೋಗಿ ನೋಡುವಷ್ಟರಲ್ಲಿ ಅವಳು ತೀರಿಕೊಂಡಾಗಿತ್ತು.

ಅಜ್ಜಿಗೆ ಉಬ್ಬಸದ ಕಾಯಿಲೆ ಇತ್ತು, ತಾನಿನ್ನು ಹೆಚ್ಚು ದಿನ ಇರುವುದಿಲ್ಲ ಅಂತ ಮನಸ್ಸಿಗೆ ಅನಿಸಿ ಊರಿಗೆ ಬಂದಿದ್ದರು. ಬಂದವರು ಇದನ್ನೆಲ್ಲ ಹೇಳಿದರು. ಆಗಲೇ ನಮಗೆ ಚಿಗಮನ ಈ ವಿಚಾರವೆಲ್ಲ ತಿಳಿದುದು. ಮತ್ತೆ ಬೊಂಬಾಯಿಗೆ ಹೋಗದೆ ಅಜ್ಜಿ ಪತ್ತುಮುಡಿಯಲ್ಲಿಯೇ, ತನ್ನ ತವರಿನಲ್ಲಿಯೇ, ಒಂದು ಮೂಲೆಯಲ್ಲಿ ಮಲಗಿ ತೀರಿಕೊಂಡರು. ಅಪ್ಪ ಚಿಗಮನ ದುಡ್ಡು ತೆಗೆದುಕೊಂಡಿಲ್ಲ ಅಂತ ಕೇಳಿ, "ಏನು ಪಾಪ ಅದರಲೆ? ದುಡ್ಡು ತಗಣ್ಣಾಗಿತ್ತು" ಎಂದ ಅಜ್ಜಿ ಅವರು. ಬೊಂಬಾಯಿಯಲ್ಲಿ ಇದ್ದು ವ್ಯಾವಹಾರಿಕ ಜಗತ್ತನ್ನು ತುಸುವಾದರೂ ಕಂಡವರು. ಅಮ್ಮ ಕೂಡ "ಹೌದು, ನಂಗೂ ಹಂಗೇ ಕಂಡಿತು" ಎಂದಿದ್ದಳು. ಆಗ ಅಪ್ಪ ಸುಮ್ಮನೆ ಇದ್ದುಬಿಟ್ಟರು. 'ಆತದ್ ಆಯ್ತ್' ಅಂತೇನೋ ಹೇಳಿರಬೇಕು. ಅಜ್ಜಿಯನ್ನು ನೆನೆದರೆ ಎದೆ ಕರಗುತ್ತದೆ. ಕಾಶಿ ಚಿಗಮನದೂ ದಾರುಣ ಕತೆಯೇ. ವೆಂಕಮ್ಮ ಚಿಗಮನಂತು... ಒಂದು ದಿಕ್ಕುದೆಸೆಯೇ ಸಿಗದೆ ಮೂವತ್ತು ದಾಟುವುದರೊಳಗೆ ಮುಗಿದೇ ಹೋದಳಲ್ಲ! ಆ ಚಂದ, ಆ ಕಂಠ, ಆ ಧೈರ್ಯ ದಿಟ್ಟತನ ಎಲ್ಲ... ಹೇಳಲು ಇನ್ನೂ ಇದೆ... ಆಗುತ್ತಿಲ್ಲ. ನನ್ನೊಳಗಿನ ಸಂಕಟದ ಮೇಲ್ಭಾಗ ಮಾತ್ರ ಇದು, ಇಷ್ಟು.

ನಾನು 'ಅಹಲ್ಯೆ' ಆಯ್ಕೆ ಮಾಡಿದಾಗ ಇದೆಲ್ಲಾ ಒಂದಲ್ಲ ಒಂದು ಕಾರಣದಿಂದ ನನ್ನಲ್ಲಿ ಕೆಲಸ ಮಾಡಿರಬೇಕು. ಯಾಕೆ ನಾವು ಪಾಪ ಮಾಡುವುದಕ್ಕಿಂತ ಹೆಚ್ಚು ಪಾಪಪ್ರಜ್ಞೆಯಿಂದ ನರಳುತ್ತೇವೆ?



(ಬಿ.ವಿ. ಕಾರಂತರ ಆತ್ಮಕಥೆ 'ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ'ಯಲ್ಲಿನ ಒಂದು ಅಧ್ಯಾಯ)

ಸಂಗ್ರಹ ಮತ್ತು ನಿರೂಪಣೆ: ವೈದೇಹಿ

ಮೀಸಲಾತಿಯ ಸೀತೆ

ಹದಿನಾಲ್ಕು ವರ್ಷಗಳ ಘನಘೋರ
ಕಾಡಿನ ವನವಾಸ ಅಜ್ಞಾತವಾಸ ಅನುಭವಿಸಿ,
ಅಗ್ನಿ ಪರೀಕ್ಷೆಗೆ ಮೈಯೊಡ್ಡಿ,
ಸ್ತ್ರೀ ಎನಿಸಿಕೊಂಡು ನಿಂತಿದ್ದಾಳೆ
ಆಧುನಿಕ ಮೀಸಲಾತಿಯ ಸೀತೆ.

ಎಡಪಂಥೀಯ ಹೋರಾಟ ಮೂಲದ
ಕಾಸಗಲ ಕುಂಕುಮದ ಬೃಂದೆ
ವರಮಹಾಲಕ್ಷ್ಮಿ ಪೂಜೆಯ ಸುಷ್ಮಿತೆಯರು
ಪಾರ್ಲಿಮೆಂಟಿನಲ್ಲಿ ಮಹಿಳಾ ಮೀಸಲಾತಿ
ಮಸೂದೆ ಪಾಸಾಗಿ ಇತಿಹಾಸ ಬರೆದ
ಆ ಚಾರಿತ್ರಿಕ ಕ್ಷಣದಲ್ಲಿ
ಅಪ್ಪಿಕೊಂಡಾಗ ಅವರಿಬ್ಬರೂ
ಸೀತೆಯ ಕಷ್ಟಗಳಿಗೆ ಕೊನೆಯಾಗಬಹುದೆ?
ಎಂದು ಅನಿಸಿದ್ದು ಸುಳ್ಳಲ್ಲ.

ಅಂತಃಪುರದಿಂದ ಅಂಗಳಕ್ಕೆ ಕಾಲಿಟ್ಟು
ಹೊಸಿಲು ದಾಟಿ ಬಿಸಿಲಿಗೆ ಮುಖ ಒಡ್ಡಿ
... ... ತನಕ




ಗಹಿಸಿದ ದಾರಿಯನು ವೀಕ್ಷಿಸಿದಾಗ.
ಹೋರಾಟದ ಏಹಂಗಮ ನೋಟದ ಸಾಕ್ಷಾತ್ಕಾರ.
ಹೊಸ ಗಾಳಿ ಬೆಳಕಿನ ಹರಹು ವಿಸ್ತಾರ
ಹೊಸ ಕ್ರಾಂತಿಗೆ ಹಾದಿಯಾಗಬಹುದೆ?
... ... ಸುಳ್ಳಲ್ಲ

ಮಾರ್ಚ್ 8 ಬಂದಾಗಲೊಮ್ಮೆ
ಕನಸಿನ ಹಂದರದ ಹಕ್ಕಿ
ಒಂದೊಂದೇ ಮೆಟ್ಟಿಲಿಗೆ ಹಾರುತ್ತ
ತೂಗುತ್ತ ತೊನೆಯುತ್ತ ತಕ್ಕಡಿ
ಮೇಲು ಕೆಳಗಾದದ್ದುಂಟು
ಆಸೆಯ ಬುತ್ತಿ ಚಿಗುರಿ
ಹಕ್ಕು ಪಡೆಯುವ ಹಂಬಲದ ಹಕ್ಕಿ
ಗರಿಬಿಚ್ಚಿ ಹಾರಬಹುದೇ ಗಗನದಲಿ
ಎಂದು ಅನಿಸಿದ್ದು ಸುಳ್ಳಲ್ಲ.

ಸೀತೆಯ ವನವಾಸ, ಅಜ್ಞಾತವಾಸಗಳು
ಹದಿನಾಲ್ಕು ವರ್ಷಕ್ಕೆ ಸೀಮಿತ!
ನನ್ನ ವನವಾಸ ಹದಿನೆಂಟು ವರ್ಷ
ಕಳೆದರೂ ಮುಗಿಯದ ಪಲಾಪ
ಕಂಡಿಲ್ಲ ಹಿಂದೆಂದೂ ಇಂತಹ
ದೀರ್ಘ ಅಜ್ಞಾತವಾಸದ ಬಲು
ದನಿಯೆತ್ತಿ ಬಹುಮತದ ಮುಖ
ಈಗಲಾದರೂ ಬೀಳಬಹುದೇ?
ಎಂದು ಅನಿಸಿದ್ದು ಸುಳ್ಳಲ್ಲ

● ಡಾ.ಕೆ.ಷರೀಫಾ




ದಲಿತ ನಾಯಕರ ಮೇಲೆ ಹಗೆ ಸಾಧಿಸುತ್ತಿರುವ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ



ಆನಂದ್

ಆಂಧ್ರಪ್ರದೇಶದ ಗಡಿ ಭಾಗಕ್ಕೆ ಹೊಂದಿಕೊಂಡಿದ್ದು, ಬಡತನ, ಹಸಿವು, ಅಸ್ಪೃಶ್ಯತೆಯು ಢಾಳಾಗಿ ಎದ್ದು ಕಾಣುತ್ತಿದ್ದ ಅವಿಭಜಿತ ಕೋಲಾರ ಜಿಲ್ಲೆಯ ದಲಿತ ಚಳವಳಿಯು ಅತ್ಯಂತ ಬಲವಾಗಿದ್ದ ಜಿಲ್ಲೆಗಳಲ್ಲಿ ಒಂದು. ಚಳವಳಿಯ ಕಾರಣದಿಂದ ಭೂರಹಿತ ದಲಿತರು ಅಲ್ಪಸ್ವಲ್ಪ ಜಮೀನು ಮಂಜೂರು ಮಾಡಿಸಿಕೊಂಡರೂ ಗ್ರಾಮದ ಬಲಿಷ್ಠರು ಸದರಿ ಜಮೀನುಗಳನ್ನು ದಲಿತರಿಗೆ ದಕ್ಕದಂತೆ ಮಾಡುತ್ತಿದ್ದಾರೆ. ಇಂತಹ ಅನ್ಯಾಯವನ್ನು ಖಂಡಿಸಿದರೆ, ಅಧಿಕಾರಿಗಳು ಬಲಿಷ್ಠರೊಂದಿಗೆ ಕೈಜೋಡಿಸಿ ದಲಿತ ನಾಯಕರ ಮೇಲೆ ಸುಳ್ಳು ಕೇಸುಗಳನ್ನು ಹಾಕಿ ಜೈಲಿಗೆ ಕಳುಹಿಸಿದ್ದಾರೆ.



ರಾಜಾಕಾಂತ್

ಭೂಮಾಫಿಯಾ ಈ ರಾಜ್ಯದಲ್ಲಿ ಯಾವ್ಯಾವ ರೂಪದಲ್ಲಿ ಕೆಲಸ ಮಾಡುತ್ತದೆ ಎಂಬುದರ ಇನ್ನೊಂದು ವಿರಾಟ್ ರೂಪವನ್ನು ನೋಡಬೇಕೆಂದರೆ ಚಿಕ್ಕಬಳ್ಳಾಪುರಕ್ಕೇ ಬರಬೇಕು. ರಾಜರತ್ನಂ ಎಂಬ ಮಾಜಿ ಶಿರಸ್ತೇದಾರ್ ದಲಿತರದ್ದೂ ಸೇರಿದಂತೆ ಸರ್ಕಾರೀ ಭೂಮಿಯನ್ನು ಕಬಳಿಸುತ್ತಿರುವ ಅಬ್ಬರಕ್ಕೆ ಚಿಕ್ಕಬಳ್ಳಾಪುರವೇ ಅವಾಕ್ಕಾಗಿತ್ತು. ಅದಕ್ಕೆ ತಡೆ ಹಾಕಲು ಹೋದ ರಾಜ್ಯದ ದಲಿತ ಸಂಘರ್ಷ ಸಮಿತಿಯ ಪ್ರಮುಖ ನಾಯಕರಲ್ಲೊಬ್ಬರಾದ ಕೆ.ಸಿ.ರಾಜಾಕಾಂತ್‌ರನ್ನು ಹಣಿಯಲು ಜಿಲ್ಲಾಧಿಕಾರಿಯೇ ನೇತೃತ್ವ ವಹಿಸಿರುವುದನ್ನು ನೋಡಿ, ಇನ್ನೊಮ್ಮೆ ಚಿಕ್ಕಬಳ್ಳಾಪುರ ಜಿಲ್ಲೆ ದಂಗುಬಡಿದು ಹೋಗಿದೆ.


ಆಂಧ್ರಪ್ರದೇಶದ ಗಡಿ ಭಾಗಕ್ಕೆ ಹೊಂದಿಕೊಂಡಿದ್ದು, ಬಡತನ, ಹಸಿವು, ಅಸ್ಪೃಶ್ಯತೆಯು ಢಾಳಾಗಿ ಎದ್ದು ಕಾಣುತ್ತಿದ್ದ ಅವಿಭಜಿತ ಕೋಲಾರ ಜಿಲ್ಲೆಯ ದಲಿತ ಚಳವಳಿಯು ಅತ್ಯಂತ ಬಲವಾಗಿದ್ದ ಜಿಲ್ಲೆಗಳಲ್ಲಿ ಒಂದು. ಚಳವಳಿಯ ಕಾರಣದಿಂದ ಭೂರಹಿತ ದಲಿತರು ಅಲ್ಪಸ್ವಲ್ಪ ಜಮೀನು ಮಂಜೂರು ಮಾಡಿಸಿಕೊಂಡರೂ ಗ್ರಾಮದ ಬಲಿಷ್ಠರು ಸದರಿ ಜಮೀನುಗಳನ್ನು ದಲಿತರಿಗೆ ದಕ್ಕದಂತೆ ಮಾಡುತ್ತಿದ್ದಾರೆ. ಇಂತಹ ಅನ್ಯಾಯವನ್ನು ಖಂಡಿಸಿದರೆ, ಅಧಿಕಾರಿಗಳು ಬಲಿಷ್ಠರೊಂದಿಗೆ ಕೈಜೋಡಿಸಿ ದಲಿತ ನಾಯಕರ ಮೇಲೆ ಸುಳ್ಳು ಕೇಸುಗಳನ್ನು ಹಾಕಿ ಜೈಲಿಗೆ ಕಳುಹಿಸಿದ್ದಾರೆ.

ಚಿಕ್ಕಬಳ್ಳಾಪುರ ತಾಲ್ಲೂಕು ನಂದಿ ಹೋಬಳಿ ನುಗಿತಹಳ್ಳಿ ಗ್ರಾಮದ ಸರ್ವೆ ನಂ.52/ಎ ಮತ್ತು 52/ಬಿರಲ್ಲಿ ಎ.ಕೆ.ಸತ್ಯಪ್ಪ ಬಿನ್ ಪೂಜಪ್ಪ ಮತ್ತು ಮುನಿಶಾಮಪ್ಪ ಬಿನ್ ತಿರುಮಳಪ್ಪರವರಿಗೆ ತಲಾ 02 ಎಕರೆಯಂತೆ 1950ರಲ್ಲಿ (AKDR ದರಕಾಸ್ತು) ಸರ್ಕಾರದಿಂದ ಮಂಜೂರಾಗಿತ್ತು, ಆದರೆ ಕಾರಣಾಂತರಗಳಿಂದ ನುಗಿತಹಳ್ಳಿ ಗ್ರಾಮದ ಸವರ್ಣೀಯ ಹೆಚ್.ರಾಜರತ್ನಂರವರಿಗೆ 04-06-1970ರಲ್ಲಿ ಸತ್ಯಪ್ಪ ಮತ್ತು ಮುನಿಶಾಮಪ್ಪರವರು ಸರ್ಕಾರದ ಅನುಮತಿಯನ್ನು ಪಡೆಯದೇ ಮಾರಾಟ ಮಾಡುತ್ತಾರೆ. ವಾಸ್ತವದಲ್ಲಿ ಈ ರೀತಿಯ ಮಾರಾಟ ಕಾನೂನಿನಪ್ರಕಾರ ಅಮಾನ್ಯವಾದುದು. ಇದೂ ಸಹ ಚಳವಳಿಯಿಂದಲೇ ಸ್ಥಾಪಿತವಾದ ಸತ್ಯ. 'ಸ್ವಯಂಪ್ರೇರಿತವಾಗಿ' ದಲಿತರು ಮಾರಾಟ ಮಾಡಿದ್ದಾರೆಂದು ಹೇಳಲಾಗುವ ಹೆಚ್ಚಿನ ಸಂದರ್ಭಗಳಲ್ಲಿ, ಅವರ ಮೇಲೆ ತೀವ್ರ ಒತ್ತಡ ಸೃಷ್ಟಿಸಿ ವಶಪಡಿಸಿಕೊಳ್ಳಲಾಗಿರುತ್ತದೆ. ಹಾಗಾಗಿಯೇ ದಲಿತರಿಗೆಂದು ಮಂಜೂರಾದ ಭೂಮಿಯನ್ನು ಮಾರಾಟ ಮಾಡದಂತೆ, ಮಾಡಿದರೂ ಅದು ಊರ್ಜಿತವಾಗದಂತೆ ಪಿಟಿಸಿಎಲ್ ಕಾಯ್ದೆಯನ್ನು ತರಲು ಚಳವಳಿಯ ಒತ್ತಡ ಕಾರಣವಾಗಿತ್ತು.

ಅದೇ PTCL ಕಾಯಿದೆಯಂತೆ 07-12-1991ರಲ್ಲಿ ಎ.ಸಿ.ಕೋರ್ಟ್ ಆದೇಶದಂತೆ ಸತ್ಯಪ್ಪ ಮತ್ತು ಮುನಿಶಾಮಪ್ಪ ರವರಿಗೆ ಮರು ಮಂಜೂರು ಆದೇಶವಾಗಿರುತ್ತದೆ. ರಾಜರತ್ನಂರವರನ್ನು ಜಮೀನಿನಿಂದ ಹೊರದೂಡಲು ಆದೇಶಿಸಿರುತ್ತಾರೆ. ಇದಾದನಂತರ ಜಿಲ್ಲಾಧಿಕಾರಿಯವರು ಸಹ ಈ ಆದೇಶ ಎತ್ತಿ ಹಿಡಿದು ಮೇಲ್ಮನವಿ ವಜಾಗೊಳಿಸಿ ಸತ್ಯಪ್ಪ ಮತ್ತು ಮುನಿಶಾಮಪ್ಪರವರಿಗೆ ಜಮೀನು ನೀಡುತ್ತಾರೆ. ಇದಾದನಂತರ ಖಾತೆ ಮಾಡಿಸಿಕೊಂಡು ಸ್ವಾಧೀನಕ್ಕಾಗಿ ತಿರುಗಿ-ತಿರುಗಿ ಸಾಕಾಗಿ ತಮಗೆ ಆಗಿರುವ ಅನ್ಯಾಯದ ಬಗ್ಗೆ ಲೋಕಾಯುಕ್ತರಿಗೂ ದೂರು ಸಲ್ಲಿಸಿದಾಗ ಹೆಚ್.ರಾಜರತ್ನಂ ಲೋಕಾಯುಕ್ತ ಕಚೇರಿಗೆ ಬಂದು ಸ್ವಾಧೀನ ಬಿಟ್ಟುಕೊಟ್ಟು, ತೊಂದರೆ ಕೊಡುವುದಿಲ್ಲವೆಂದು 26-12-2002ರಲ್ಲಿ ಮುಚ್ಚಳಿಕೆ ಬರೆದುಕೊಡುತ್ತಾರೆ.

ಆದರೆ ಸ್ವಾಧೀನ ಬಿಟ್ಟುಕೊಡದ ಹೆಚ್.ರಾಜರತ್ನಂ ಹಿಂದಿನ ಆದೇಶದ ಮರು ಪರಿಶೀಲನೆ ಮಾಡಲು ಎರಡನೇ ಬಾರಿ ಜಿಲ್ಲಾಧಿಕಾರಿಗಳಿಗೆ ಅರ್ಜಿ ಹಾಕುತ್ತಾರೆ. ಡಿ.ಸಿ.ಯವರು ಎ.ಸಿ. ಕಚೇರಿಗೆ ಅರ್ಜಿ ಹಿಂತಿರುಗಿಸುತ್ತಾರೆ. ಅಲ್ಲಿಂದ ಈ ಭೂಮಿ ಪ್ರಕರಣ ಹೊಸ ತಿರುವು ಪಡೆದುಕೊಳ್ಳುತ್ತದೆ. ಹಾಲಿ ತಹಸೀಲ್ದಾರ್ ಡಿ.ಬಿ.ನಟೇಶ್ ಹಾಗೂ ಎ.ಸಿ. ಕೆ.ಟಿ.ಶಾಂತಲರು ರಾಜರತ್ನಂ ಪರವಾಗಿ ಇಡೀ ಪ್ರಕರಣವನ್ನು ತಿರುಚುತ್ತಾರೆ. ಸ.ನಂ. 52/ಎ ಮತ್ತು 52/ಬಿ ದುರಸ್ತಿ ಮಾಡಿ ಅದಕ್ಕೆ ಹೊಸ ಸರ್ವೇ ನಂ.95 ಅಂತ ನೀಡಿ, ರಾಜರತ್ನಂರವರ ತಾಯಿ ಅಕ್ಕಯ್ಯಮ್ಮರವರ ಸ್ವಾಧೀನಕ್ಕೆ ನೀಡುತ್ತಾರೆ. ನಂತರ ಸತ್ಯಪ್ಪ ಮತ್ತು ಮುನಿಶಾಮಪ್ಪರವರ ಸ.ನಂ.ಗಳಾದ 52/ಎ ಮತ್ತು 52/ಬಿ ಇವುಗಳ ಮೂಲ ಕಡತ ಲಭ್ಯವಿಲ್ಲವೆಂದು ಹೇಳಿ ತಾಲ್ಲೂಕು ಭೂಮಾಪಕರು ತಹಸೀಲ್ದಾರ್‌ರವರಿಗೆ ವರದಿ ಸಲ್ಲಿಸುತ್ತಾರೆ. ನಂತರ ಎ.ಸಿ. ಹಾಗೂ ತಹಸೀಲ್ದಾರ್ ಸೇರಿ ಇತ್ತೀಚಿನ ಸರ್ವೆ ಆಧರಿಸಿ ಸತ್ಯಪ್ಪ ಹಾಗೂ ಮುನಿಶಾಮಪ್ಪರವರ ಜಮೀನು ತಾಳೆ ಆಗುವುದಿಲ್ಲವೆಂದು ಏಕಾಏಕಿ ಬಡವರ ಹೆಸರಿನಲ್ಲಿದ್ದ ಪಹಣಿಯನ್ನು ರದ್ದುಪಡಿಸಿ ಸರ್ಕಾರದ ವಶಕ್ಕೆ ತೆಗೆದುಕೊಂಡಿರುವುದಾಗಿ ಪಹಣಿಯಲ್ಲಿ ಸರ್ಕಾರಿಯೆಂದು ನಮೂದಿಸಿರುತ್ತಾರೆ. ಇತ್ತೀಚೆಗೆ ಸತ್ಯಪ್ಪರವರು ಗಣಕೀಕೃತ ಪಹಣಿಯನ್ನು ತೆಗೆದುಕೊಂಡು ನೋಡಿದಾಗ ಅವರ ಹೆಸರಿನ ಬದಲು ಪಹಣಿಯಲ್ಲಿ ಸರ್ಕಾರಿ ಎಂದು ನಮೂದಾಗಿರುವುದನ್ನು ನೋಡಿ ಗಾಬರಿಯಾಗುತ್ತಾರೆ. ತಕ್ಷಣ ಅವರು ಜಿಲ್ಲೆಯ ದಲಿತ ಸಂಘರ್ಷ ಸಮಿತಿಯ ಸಂಚಾಲಕರಾದ ಕೆ.ಸಿ.ರಾಜಾಕಾಂತ್ ಅವರಿಗೆ ತಿಳಿಸುತ್ತಾರೆ.

ಕೆ.ಸಿ.ರಾಜಾಕಾಂತ್, ಆನಂದ್, ಸಿ.ಜಿ.ಗಂಗಪ್ಪ ಇವರುಗಳು ಜಿಲ್ಲೆಯಲ್ಲಿ ದಲಿತರ ಪರವಾಗಿ ಮಾತ್ರವಲ್ಲದೇ ಹಲವಾರು ಸಾಮಾಜಿಕ ವಿಚಾರಗಳನ್ನಿಟ್ಟುಕೊಂಡು ಹೋರಾಟ ಮಾಡುತ್ತಿರುವ ಪ್ರಾಮಾಣಿಕ ದಸಂಸದ ನಾಯಕರು. ಅವರುಗಳು 13-02-2014ರಂದು ಎ.ಸಿ. ಕಚೇರಿಗೆ ಹೋಗಿ ಪಹಣಿಯಲ್ಲಿ ಹೆಸರು ಬದಲಾದದ್ದು ಹೇಗೆ ಎಂದು ಪತ್ತೆ ಮಾಡಲು ಹೋಗುತ್ತಾರೆ. ಆ ಸಮಯದಲ್ಲಿ ಎಸಿ ಮತ್ತು ತಹಸೀಲ್ದಾರ್ ಇಬ್ಬರು ಕಚೇರಿಯಲ್ಲಿರುವುದಿಲ್ಲ, ಸಂಬಂಧಿಸಿದ ಗುಮಾಸ್ತ ಸೋಮಪ್ಪರವರನ್ನು ವಿಚಾರಿಸಿದರೆ ಕನಿಷ್ಠ ಸೌಜನ್ಯವೂ ಇಲ್ಲದೇ, ಆ ಕಡತವೇ ಇಲ್ಲ, ತಾನೀಗ ನೋಡಲಾಗುವುದಿಲ್ಲ ಇತ್ಯಾದಿ ಸಬೂಬು ಹೇಳಲು ಶುರುಮಾಡುತ್ತಾರೆ. ಇಂತಹ ಹಲವು ಆಟಗಳನ್ನು 30



ವರ್ಷಗಳಿಂದ ನೋಡಿದ್ದ ರಾಜಾಕಾಂತ್ ದಬಾಯಿಸಿದಾಗ ಸೋಮಪ್ಪ ಮೆತ್ತಗಾಗುತ್ತಾರೆ. ಭೂ ವಿವಾದಕ್ಕೆ ಸಂಬಂಧಿಸಿದ ಆದೇಶ ಪ್ರತಿಗಳನ್ನು ತಾನೇ ಜೆರಾಕ್ಸ್ ಮಾಡಿಸಿ ರಾಜಾಕಾಂತ್ ರವರಿಗೆ ನೀಡುತ್ತಾರೆ. ಇದರ ಬಗ್ಗೆ ಮಾಹಿತಿ ತಿಳಿದ ಎ.ಸಿ. ಮತ್ತು ತಹಸೀಲ್ದಾರ್ ಜಿಲ್ಲಾಧಿಕಾರಿಯವರಿಗೆ ವಿಚಾರ ತಿಳಿಸುತ್ತಾರೆ.

ಇಂತಹುದೇ ಒಂದು ಸಂದರ್ಭಕ್ಕೆ ಕಾದಿದ್ದ ಅಧಿಕಾರಿಗಳ ಪಡೆ, ರಾಜಾಕಾಂತ್ ಮತ್ತು ಅವರ ಸಂಗಾತಿಗಳ ಮೇಲೆ ಹಗೆ ಸಾಧಿಸಲು ಮುಂದಾಗುತ್ತಾರೆ.

ದಸಂಸ ನಾಯಕರ ಬಗ್ಗೆ ಡಿಸಿಗ್ಯಾಕೆ ದ್ವೇಷ?

ಜಿಲ್ಲೆಯ ದಲಿತ ಸಮುದಾಯದ ಸಮಸ್ಯೆಗಳ ಕುರಿತು ಸದರಿ ದಸಂಸದ ನಾಯಕರು ಸದಾ ಸಕ್ರಿಯರು. ನೂರೆಂಟು ಸಮಸ್ಯೆಗಳು ಹಲವಾರು ವರ್ಷಗಳಿಂದ ಗುಡ್ಡೆ ಬಿದ್ದಿದ್ದರೂ ತಾಲೂಕು ಮತ್ತು ಜಿಲ್ಲಾಡಳಿತಗಳು ಸ್ಪಂದಿಸುತ್ತಿಲ್ಲವೆಂದು ಮನಗಂಡು ದಸಂಸದ ಜಿಲ್ಲಾ ಸಮಿತಿ ಒಂದು ಹೋರಾಟವನ್ನು ಕಳೆದ ವರ್ಷ ರೂಪಿಸಿತ್ತು.

ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಆರು ತಾಲ್ಲೂಕು ಕೇಂದ್ರಗಳಲ್ಲಿ 25-10-2013ರಿಂದ ಏಕಕಾಲದಲ್ಲಿ ಅನಿರ್ದಿಷ್ಟಾವಧಿ ಧರಣಿ ಪ್ರಾರಂಭಿಸಿದ್ದರು. ಧರಣಿ ಪ್ರಾರಂಭವಾಗಿ ಮೂರು ದಿನಗಳಾದರೂ ತಾಲ್ಲೂಕು ಕಚೇರಿ ಅಧಿಕಾರಿಗಳು ಗಮನ ಹರಿಸದ ಕಾರಣ 27-10-2013ರಂದು ತಮಟೆ ಚಳವಳಿಯಾಗಿ ಅದು ಬದಲಾಯಿತು. ಆದರೂ ಅಧಿಕಾರಿಗಳು ಜುಮ್ಮೆನ್ನಲಿಲ್ಲ. ಚಳವಳಿಯನ್ನು ತೀವ್ರಗೊಳಿಸುವ ಉದ್ದೇಶದಿಂದ 28-10-2013ರಂದು ರಾತ್ರಿ ಪಂಜಿನ ಮೆರವಣಿಗೆ ಮಾಡಿದರು. ಈ ಎಲ್ಲಾ ಹೋರಾಟದ ಕಾರ್ಯಕ್ರಮಗಳೂ ಜಿಲ್ಲೆಯಲ್ಲಿ ಹೊಸ ಸಂಚಲನವನ್ನು ಮೂಡಿಸಿದವು. ಮಾಧ್ಯಮಗಳೂ ಸಹ ವಿಸ್ತೃತವಾಗಿ ಇದರ ಬಗ್ಗೆ ವರದಿ ಮಾಡಿದವು. ಜಿಲ್ಲಾಧಿಕಾರಿಗೆ ಸಂಪೂರ್ಣ ಕಿವುಡು ಮುಚ್ಚಿಕೊಂಡಿತ್ತು. ಹೀಗಾಗಿ ಜಿಲ್ಲಾಧಿಕಾರಿ ಮಧ್ಯಪ್ರವೇಶಿಸಬೇಕೆಂದು ಒತ್ತಾಯಿಸಿ ಧರಣಿಯ 07ನೇ ದಿನದಂದು 30-10-2013 ರಂದು ದ.ಸಂ.ಸ.ದ ಸಾವಿರಾರು ಕಾರ್ಯಕರ್ತರೊಂದಿಗೆ ಎ.ಸಿ ಕಚೇರಿಯಿಂದ ಡಿ.ಸಿ ಕಚೇರಿಯವರೆಗೆ ಕಾಲ್ನಡಿಗೆಯ ಜಾಥಾ ಹಮ್ಮಿಕೊಂಡಾಗಲೂ ಜಿಲ್ಲಾಧಿಕಾರಿ ಬಹಳ ಬಾಲಿಶವಾಗಿ ನಡೆದುಕೊಂಡು ನಗೆಪಾಟಲಿಗೀಡಾದ ಸಂದರ್ಭ ಎದುರಾಯಿತು. ಆದರೆ ಅನಿವಾರ್ಯವಾಗಿ ಹೋರಾಟದ ಒತ್ತಡಕ್ಕೆ ಮಣಿದು ಸಭೆಯನ್ನು ಕರೆಯಲು ಜಿಲ್ಲಾಧಿಕಾರಿ ಒಪ್ಪಿದರು ಮತ್ತು ವಿವಿಧ ಸಮಸ್ಯೆಗಳನ್ನು ಬಗೆಹರಿಸಲು ತಾಲೂಕು ಮಟ್ಟದಲ್ಲಿ ಆದೇಶಗಳನ್ನು ನೀಡಲಾಯಿತು.

ಈ ಹೋರಾಟದ ಪ್ರಮುಖ ಬೇಡಿಕೆಗಳಲ್ಲಿ ನುಗಿತಹಳ್ಳಿ ಭೂವಿಚಾರವು ಒಂದಾಗಿತ್ತು.

ಈ ಮಧ್ಯೆ ಚಿಕ್ಕಬಳ್ಳಾಪುರಕ್ಕೆ ಬಂದಿದ್ದ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರ ಗಮನಕ್ಕೂ ಈ ಎಲ್ಲಾ ವಿಚಾರಗಳನ್ನು ತಂದು, ಜಿಲ್ಲಾಧಿಕಾರಿಯ ನಡವಳಿಕೆಯ ಕುರಿತು ಕ್ರಮ ತೆಗೆದುಕೊಳ್ಳುವಂತೆ ಮನವಿ ಮಾಡಲಾಗಿತ್ತು. ಸಾವಿರಾರು ಜನರನ್ನು ಸೇರಿಸಬಲ್ಲ ಸಾಮರ್ಥ್ಯವಿರುವ, ನಿರ್ದಿಷ್ಟ ಅಂಶಗಳನ್ನು ಮುಂದಿಟ್ಟು ಸರಿಯಾಗಿ ದಬಾಯಿಸುವ, ದಲಿತರ ಹಕ್ಕಿನ ವಿಚಾರದಲ್ಲಿ ರಾಜಿ ಮಾಡಿಕೊಳ್ಳದ ಈ ದಸಂಸದ ನಾಯಕರ ಮೇಲೆ ಜಿಲ್ಲಾಧಿಕಾರಿಗೆ ಸಿಟ್ಟು ಯಾಕೆ ಬರಬೇಕು? ಅವರು ನಿಜವಾಗಲೂ ಜನಪರವಾಗಿ ಕೆಲಸ ಮಾಡುತ್ತಿದ್ದುದಾದರೆ, ದಲಿತ ಸಮುದಾಯದ ಬೇಡಿಕೆಗಳಿಗೆ ಸ್ಪಂದಿಸುವ ಕೆಲಸ ಮಾಡಿರಬೇಕಿತ್ತು, ಬದಲಿಗೆ ಜಿಲ್ಲಾಧಿಕಾರಿ ಡಾ.ವಿಶಾಲ್ ದ್ವೇಷ ಸಾಧಿಸುವ ಒಂದಂಶದ ಕಾರ್ಯಕ್ರಮವನ್ನು ತಮ್ಮ ಮನಸ್ಸಿನಲ್ಲಿ ರೂಪಿಸಿಕೊಂಡರು.


ಹಾಗಾಗಿಯೇ ನುಗಿತಹಳ್ಳಿ ಭೂ ವಿವಾದದ ಸಂಬಂಧ ನಡೆದ ಘಟನೆಯನ್ನು ಸೇಡು ತೀರಿಸಿಕೊಳ್ಳಲು ಅವರು ಬಳಸಿಕೊಂಡರು. ಘಟನೆ ನಡೆದ 2 ದಿನಗಳ ನಂತರ, 15-02-2014ರಂದು 10.30ಕ್ಕೆ ಕೇಂದ್ರ ಸಚಿವ ವೀರಪ್ಪಮೊಯ್ಲಿರವರ ಕಾರ್ಯಕ್ರಮ ನಡೆಯುತ್ತಿದ್ದಾಗ, ಅವರಿಗೂ ಮನವಿ ಸಲ್ಲಿಸಬೇಕೆಂದು ರಾಜಾಕಾಂತ್ ಮತ್ತಿತರರು ತೆರಳಿದ್ದಾರೆ. ಅಷ್ಟು ಹೊತ್ತಿಗಾಗಲೇ ಜಿಲ್ಲಾಧಿಕಾರಿಯ ಸೂಚನೆಯ ಮೇರೆಗೆ ಪೊಲೀಸರು ಅವರ ಮೇಲೆ ಭಾರೀ ಸೆಕ್ಷನ್ನುಗಳ ಕೇಸನ್ನು ದಾಖಲಿಸಿ ಎಫ್‌ಐಆರ್ ಸಹ ಹಾಕಿದ್ದಾರೆ. 14ನೇ ತಾರೀಕು ಸ್ವತಃ ರಾಜಾಕಾಂತ್ ಅದೇ ಠಾಣೆಗೆ ಹೋಗಿದ್ದಾಗಲೂ ಬಂಧಿಸಿಲ್ಲ. ಆದರೆ ಮೊಯ್ಲಿ ಕಾರ್ಯಕ್ರಮದ ಹತ್ತಿರ ಹೋದಾಗ, ಇವರನ್ನು ಜಿಲ್ಲಾಧಿಕಾರಿ ಗಮನಿಸಿ ಪೊಲೀಸರ ಮೇಲೆ ಹರಿಹಾಯ್ದಿದ್ದಾರೆ. ಸ್ಥಳದಲ್ಲೇ ಅವರನ್ನು ಬಂಧಿಸಲು ಸೂಚಿಸಿದ ಜಿಲ್ಲಾಧಿಕಾರಿ ಮಾತನ್ನು ಮೀರಲಾಗದೇ ಪೊಲೀಸರು ರಾಜಾಕಾಂತ್‌ರನ್ನು ಅರೆಸ್ಟ್ ಮಾಡಿದ್ದಾರೆ.

ಎಷ್ಟರಮಟ್ಟಿಗೆ ವೈಯಕ್ತಿಕ ದ್ವೇಷವನ್ನು ಜಿಲ್ಲಾಧಿಕಾರಿ ಸಾಧಿಸಿದ್ದಾರೆಂದರೆ, ಬಂಧನಕ್ಕೊಳಗಾದ ರಾತ್ರಿ ವೈದ್ಯರ ಸೂಚನೆಯ ಮೇರೆಗೆ ಜಿಲ್ಲಾಸ್ಪತ್ರೆಗೆ ದಾಖಲಾದ ರಾಜಾಕಾಂತ್‌ರನ್ನು ಜೈಲಿಗೆ ವಾಪಸ್ಸು ಕಳಿಸಬೇಕೆಂದು ವೈದ್ಯರ ಮೇಲೆ ಒತ್ತಡ ತರಲು ಸ್ವತಃ ಡಿಸಿ ಫೋನಾಯಿಸಿ ದಬಾಯಿಸಿದ್ದಾರೆ. ರಾತ್ರಿ 1 ಗಂಟೆಗೆ ಅನಾರೋಗ್ಯ ಪೀಡಿತ ರಾಜಾಕಾಂತ್‌ರನ್ನು ಪುನಃ ಜೈಲಿಗೆ ಕಳಿಸಲಾಯಿತು.

ಒಟ್ಟು 7 ಜನ ಹೋರಾಟಗಾರರ ಮೇಲೆ ಸುಳ್ಳು ಕೇಸು ಹಾಕಲಾಗಿದೆ. ಇದರಲ್ಲಿ ಕೇಸು ಹಾಕಲಾದ ಮೂರು ಜನ ಜಯಕುಮಾರ್, ನಾಗರಾಜ್, ತ್ಯಾಗರಾಜ್ ಇವರು ರಾಜಾಕಾಂತ್‌ರವರು ಎ.ಸಿ ಆಫೀಸಿಗೆ ಹೋದಾಗ ಚಿಕ್ಕಬಳ್ಳಾಪುರದಲ್ಲೇ ಇರಲಿಲ್ಲ. ನಾಗರಾಜ್ ಘಟನೆ ನಡೆಯಲಾಯಿತು ಎಂದು ಹೇಳಿದ ದಿನ ಅವರ ಸಂಬಂಧಿಕರೊಬ್ಬರ ಅಂತ್ಯಸಂಸ್ಕಾರದಲ್ಲಿದ್ದರು.

ಯಾರೀತ ರಾಜರತ್ನಂ

ಇದೇ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಕೆಲಸ



ಲಂಕೇಶ್ ಪ್ರಕಾಶನದಿಂದ
ಮತ್ತೊಂದು ಕೊಡುಗೆ
ಆರ್‌ಎಸ್‌ಎಸ್
ಅಂತರಂಗ
ಈಗ ನಮ್ಮಲ್ಲಿ ಲಭ್ಯ
ಪ್ರತಿಗಳಿಗಾಗಿ ಸಂಪರ್ಕಿಸಿ
080-26676427

ಮಾಡುತ್ತಾ ತಾಲ್ಲೂಕು ಕಚೇರಿಯಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿ, ಶಿರಸ್ತೇದಾರನಾಗಿ ಸುಮಾರು 20 ವರ್ಷಕ್ಕೂ ಹೆಚ್ಚುಕಾಲ ಒಂದೇ ಕಡೆ ಗೂಟ ಹೊಡೆದುಕೊಂಡಿದ್ದ ಒಕ್ಕಲಿಗ ಜಾತಿಯ ರಾಜರತ್ನಂ ಕಡಿಮೆ ಆಸಾಮಿಯಲ್ಲ. ತನ್ನ ಅಧಿಕಾರಾವಧಿಯಲ್ಲಿ ಸರ್ಕಾರಿ ಭೂಕಂದಾಯ ದಾಖಲೆಗಳನ್ನು ತಿರುಚಿ, ತನ್ನ ಪ್ರಭಾವವನ್ನು ಬಳಸಿ ತನ್ನ ಮೇಲಿನ ಹಾಗೂ ಕೆಳಗಿನ ಅಧಿಕಾರಿಗಳ ಮೇಲೆ ಒತ್ತಡ ಹೇರಿ ತನ್ನ ಕುಟುಂಬದ ಸದಸ್ಯರ ಹೆಸರಿಗೆ ಸುಮಾರು 80 ಎಕರೆ ಭೂಮಿಯನ್ನು ಮಂಜೂರು ಮಾಡಿಸಿಕೊಂಡಿರುವ ಚಾಣಾಕ್ಷ.

ಈ ಹಿಂದಿನ ತಹಸೀಲ್ದಾರ್‌ರಾದ ಎಲ್.ಸಿ.ನಾಗರಾಜ್ ಈತನ ಹಗರಣವನ್ನು ಬಯಲಿಗೆಳೆದು ತನಿಖೆಗೆ ಆದೇಶಿಸಿದ್ದರು. ಅವರು ಸ್ವತಃ ಪತ್ರಿಕೆಗಳ ಜೊತೆ ಮಾತನಾಡಿ ಈತನ ಅಕ್ರಮಗಳ ಬಗ್ಗೆ ತಮ್ಮ ಗಾಬರಿಯನ್ನು ತೋರ್ಪಡಿಸುವ ಮಟ್ಟಕ್ಕೆ ರಾಜರತ್ನಂನ ಲೀಲೆಗಳಿದ್ದವು. ಆದರೆ ಆ ನಂತರ ಬಂದ ತಹಸೀಲ್ದಾರ್, ಎ.ಸಿ. ಮತ್ತು ಡಿ.ಸಿ.ಗಳಿಗೆ ಇದು ಅಂತಹ ದೊಡ್ಡ ವಿಚಾರ ಅನ್ನಿಸದೇ ಇರುವುದರಿಂದ ರಾಜರತ್ನಂ ಇನ್ನೂ ಸೇಫಾಗಿಯೇ ಇದ್ದಾನೆ. ಈ 80 ಎಕರೆಯಲ್ಲಿ ದ್ರಾಕ್ಷಿ, ಮಾವು, ತೋಟ ಮಾಡಿಕೊಂಡು ಎರಡು ಬೋರ್ ಹಾಕಿಸಿಕೊಂಡು ಫಸಲು ತೆಗೆಯುತ್ತಿದ್ದಾನೆ.

ಈತನ ಅಕ್ರಮಗಳಿಗೆ ಮತ್ತೊಂದು ಉದಾಹರಣೆ ರಾಮಕೃಷ್ಣಪ್ಪನ ಪ್ರಕರಣದ್ದು. ರಾಮಕೃಷ್ಣಪ್ಪ ಎನ್ನುವರ 02 ಎಕರೆ 39 ಗುಂಟೆ ಜಮೀನನ್ನು ರಾಮಕೃಷ್ಣಪ್ಪ ತನಗೆ ಮಕ್ಕಳಿಲ್ಲ ಎಂದು ರಾಜರತ್ನಂರವರ ಟ್ರಾಕ್ಟರ್ ಡ್ರೈವರ್ ಎನ್.ಎಂ.ಮುನಿಯಪ್ಪಗೆ ತನ್ನ ಭೂಮಿಯನ್ನು ಬರೆದುಕೊಟ್ಟಂತೆ, ಈ ಎನ್.ಎಂ.ಮುನಿಯಪ್ಪ ಈ 02 ಎಕರೆ 39 ಗುಂಟೆ ಭೂಮಿಯನ್ನು ರಾಜರತ್ನಂಗೆ 6 ಲಕ್ಷಕ್ಕೆ ಮಾರಿದ್ದಂತೆ ದಾಖಲೆ ಸೃಷ್ಟಿಮಾಡಿದ್ದಾನೆ. ಈ ವಿಚಾರ ರಾಮಕೃಷ್ಣಪ್ಪಗೆ ಆಗಲಿ, ಅವರ ಮಕ್ಕಳಿಗಾಗಲೀ ಅಥವಾ ಎನ್.ಎಂ.ಮುನಿಯಪ್ಪನಿಗೇ ಆಗಲಿ ತಿಳಿದಿರಲಿಲ್ಲ. ವಿಷಯ ಗೊತ್ತಾದನಂತರ ಈಗ ಇದರ ವಿರುದ್ಧ ರಾಮಕೃಷ್ಣಪ್ಪರವರ ಮಕ್ಕಳು ಕೋರ್ಟಿಗೆ ಹೋಗಿದ್ದಾರೆ!

ನುಗಿತಹಳ್ಳಿ ರಾಜರತ್ನಂನ ತೋಟದ ಸ್ಥಳದಲ್ಲಿ ಈ ಹಿಂದೆ ನುಗಿತಹಳ್ಳಿ ಸುತ್ತ-ಮುತ್ತಲ ಗ್ರಾಮಗಳ ನಾರಾಯಣಸ್ವಾಮಿ, ಜಿ.ರುಕೀಯ ಬೇಗಂ, ಸತ್ಯಪ್ಪ ಪೂಜಪ್ಪ ಮಂಜುನಾಥ್, ಮುನಿಸ್ವಾಮಿ, ರಾಮಕೃಷ್ಣಪ್ಪ ಗುಂಡಾಳಪ್ಪ ಕೆ.ಆರ್.ಮುಜೀದ್, ಎಂ.ಜಿ.ಶ್ರೀನಿವಾಸ್ ಎಂಬುವವರಿಗೆ ಭೂ ಸಾಗುವಳಿ ಮಂಜೂರಾತಿ ಸಮಿತಿಯಲ್ಲಿ ಜಮೀನುಗಳು ಮಂಜೂರಾಗಿದ್ದು, ಈ ದಾಖಲೆಗಳನ್ನು ಸಹ ತಿದ್ದಿ, ನಮಗೆ ಸರ್ಕಾರ ನೀಡಿರುವ ಭೂಮಿಯನ್ನು ರಾಜರತ್ನಂ ವಂಚನೆ ಮಾಡಿ ಕಸಿದುಕೊಂಡಿದ್ದಾನೆ ಎಂದು ರೈತರು ಲೋಕಾಯುಕ್ತ ಸೇರಿದಂತೆ ವಿವಿಧ ಇಲಾಖೆಗಳಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

ಪ್ರಸ್ತುತ ನಿವೃತ್ತಿಯಾಗಿರುವ ರಾಜರತ್ನಂ "M/S TRITEUS HOLDINGS (PVT LTD)"ಗೆ ಮೂರು ಸಾವಿರ ಎಕರೆ ಬೇಕೆಂದು ಹೇಳುತ್ತಾ ಈ ಕಂಪನಿಗೆ ಜಮೀನು ಕೊಡಿಸುವ ದಲ್ಲಾಳಿಯಾಗಿ ಕೆಲಸಮಾಡುತ್ತಾ, ರೈತರಿಂದ ಜಮೀನನ್ನು ಬಿಟ್ಟುಕೊಡುವ 'ಒಪ್ಪಿಗೆ' ಪತ್ರಕ್ಕೆ ಸಹಿ ಹಾಕಿಸುವ ಕೆಲಸದಲ್ಲಿ ಮಗ್ನನಾಗಿದ್ದಾನೆ. ಜನ ರಾಜರತ್ನಂ ಹತ್ತಿರ ನ್ಯಾಯಾನ್ಯಾಯ ಮಾತಾಡಲು ಹೋದರೆ ಪಿಸ್ತೂಲ್ ತೋರಿಸುತ್ತಾನೆ. ಈತನ ಜೊತೆಗೆ ಅವನ ತಮ್ಮ ಅಮರನಾರಾಯಣ ಹಾಗೂ ಒಂದು ಸಣ್ಣ ಪಟಾಲಂ ಸೃಷ್ಟಿಸಿಕೊಂಡು ಸುತ್ತಲಿನ ಜನರಲ್ಲಿ ಭೀತಿ ಉಂಟುಮಾಡಿದ್ದಾರೆ.

ದಿಕ್ಕು ದೆಸೆಯಿಲ್ಲದಂತಾಗಿರುವ ಚಿಕ್ಕಬಳ್ಳಾಪುರ ಜಿಲ್ಲೆ

ಕೇಂದ್ರದ ಪ್ರಭಾವಿ ಸಚಿವ ವೀರಪ್ಪ ಮೊಯ್ಲಿ ಪ್ರತಿನಿಧಿಸುವ ಈ ಜಿಲ್ಲೆಯಲ್ಲಿ ಅದು ಹೊಸದಾಗಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಅಧಿಕಾರಿಗಳದ್ದೇ ದರ್ಬಾರು. ಈ ಹಿಂದಿನ ಜಿಲ್ಲಾಧಿಕಾರಿ ಡಾ.ಮಂಜುಳಾ ಸಹ ಬಿಜೆಪಿ ಸರ್ಕಾರವಿದ್ದಾಗ ಮೆರೆದಿದ್ದರು. ಆಗ ಇಲ್ಲಿ ಮುಮ್ತಾಜ್ ಅಲಿಖಾನ್ ಉಸ್ತುವಾರಿ ಸಚಿವರು!.ಜಿಲ್ಲೆಯಲ್ಲಿ ಒಬ್ಬರೂ ಸಚಿವರು ಇಲ್ಲದಿರುವುದು, ರಾಜ್ಯ ಸಚಿವರ ಸ್ಥಾನಮಾನ ಹೊಂದಿರುವ ಶಿವಶಂಕರರೆಡ್ಡಿ ಉಪಸಭಾಪತಿಯಾಗಿದ್ದರೂ, ಗೌರಿಬಿದನೂರಿಗೆ ಮಾತ್ರ ಸೀಮಿತವಾಗಿರುವುದು, ಉಸ್ತುವಾರಿ ಹೊತ್ತಿರುವ ದಿನೇಶ್ ಗುಂಡೂರಾವ್‌ಗೆ ಬೆಂಗಳೂರು ಮತ್ತು ತನ್ನ ಅನ್ನಭಾಗ್ಯ ಇಲಾಖೆಗಿಂತ ಬೇರೆ ಆಸಕ್ತಿಯಿಲ್ಲದಿರುವುದು ಎಲ್ಲವೂ ಇಲ್ಲಿ ಅಧಿಕಾರಿಗಳಿಗೆ ಸ್ವಚ್ಛಂದವಾಗಿ ಮೇಯಲು, ಶೋಷಿತರ ಮೇಲೆ ಸವಾರಿ ಮಾಡಲು ಅವಕಾಶ ಮಾಡಿಕೊಟ್ಟಿದೆ.

ಈಗಲಾದರೂ ಜನಪ್ರತಿನಿಧಿಗಳು ಇತ್ತ ಕಣ್ಣು ತೆರೆದು ಜಿಲ್ಲಾಧಿಕಾರಿ ಹಾಗೂ ಇನ್ನಿತರ ಅಧಿಕಾರಿಗಳ ಆಟಾಟೋಪಕ್ಕೆ ಕಡಿವಾಣ ಹಾಕದಿದ್ದರೆ, ದಿಕ್ಕು ದೆಸೆಯಿಲ್ಲದ ಜಿಲ್ಲೆಯಲ್ಲಿ ಮತ್ತಷ್ಟು ಅರಾಜಕತೆ, ಅಟ್ಟಹಾಸ ಮೆರೆದಾಡುವುದರಲ್ಲಿ ಅನುಮಾನವೇ ಇಲ್ಲ.

● ಸಂಜಯ್‌ಕುಮಾರ್

ಉತ್ತರ ಕನ್ನಡ ಅಖಾಡ

ಮ್ಯಾಗಿಯಜ್ಜಿಯ ತೆರೆಮರೆ ತಾಲೀಮು!



ಉತ್ತರ ಕನ್ನಡ ಲೋಕಸಭೆ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸಲು ಮ್ಯಾಗಿಯಜ್ಜಿ ಏನಾದರೂ ಮನಸ್ಸು ಮಾಡಿದ್ದಾರಾ? ಕೈ ಹೈಕಮಾಂಡ್ "ನೀನೇ ಸಮರ್ಥ ರಾಜಿ ಅಭ್ಯರ್ಥಿ" ಎಂದೇನಾದರೂ ಮ್ಯಾಗಿಗೆ ಪುಸಲಾಯಿಸಿ ಉತ್ತರ ಕನ್ನಡ ಅಖಾಡಕ್ಕೆ ಇಳಿಸುತ್ತಿದೆಯಾ? ಇಂಥ ಚರ್ವಿತಚರ್ವಣವೀಗ ಜಿಲ್ಲೆಯ ರಾಜಕಾರಣದ ಜಗಲಿಯಲ್ಲಿ ಜೋರಾಗಿ ಶುರುವಾಗಿದೆ. ವಾನಪ್ರಸ್ಥಾಶ್ರಮ ಸೇರಿದ್ದ ಮ್ಯಾಗಿಯಜ್ಜಿಯ ಅನಿರೀಕ್ಷಿತ ಎಂಟ್ರಿ ಕಾಂಗ್ರೆಸ್‌ನ ಟಿಕೆಟ್ ಹಂಚಿಕೆ ಸರ್ಕಸ್‌ಗೆ ಹಠಾತ್ ಕ್ಲೈಮ್ಯಾಕ್ಸ್ ಕೊಟ್ಟುಬಿಟ್ಟಿದೆ!

ಮ್ಯಾಗಿಯಜ್ಜಿ ಕಳೆದ ಲೋಕಸಭೆ ಚುನಾವಣೆಯಲ್ಲಿ ಬರೀ ಇಪ್ಪತ್ತೆರಡೂ ಮುಕ್ಕಾಲು ಸಾವಿರ ಮತದಂತರದಿಂದ ಸೋತು ಹತಾಶರಾಗಿದ್ದರು. ಗೆಲುವಿನ ಹೊಸ್ತಿಲಿಗೆ ಬಂದು ಬಿಜೆಪಿಯ ಬುರ್ನಾಸ್ ಮಾಣಿ ಅನಂತಕುಮಾರ್ ಹೆಗಡೆ ಎದುರು ಮ್ಯಾಗಿ ಮುಗ್ಗರಿಸಿದ್ದು ಆಕೆಯದೇ ಪಕ್ಷದ "ಡಾನ್" ದೇಶಪಾಂಡೆಯ ದೋಖಾಬಾಜಿಯಿಂದಾಗಿತ್ತು. ದೇಶಪಾಂಡೆಗೋ ಮ್ಯಾಗಿಯನ್ನು ಜಿಲ್ಲೆಯಿಂದ ಓಡಿಸಿ ತನ್ನ ಮೊದ್ಮಣಿ ಮಗ ಮಹಾರಾಯ ಪ್ರಶಾಂತ್‌ಗೆ ಕ್ಷೇತ್ರ ಮುಕ್ತ ವಾಗಿಸಿಕೊಳ್ಳುವ ದರ್ದಿತ್ತು. ಈ ದೇಶಪಾಂಡೆಯ ಕಾಟ ತಾಳಲಾರದೆ ಮ್ಯಾಗಿ ಉತ್ತರ ಕನ್ನಡದ ಸಹವಾಸವೇ ಸಾಕೆಂಬ ನಿರ್ಧಾರಕ್ಕೆ ಬಂದಿದ್ದರು. ತಾನು ದಿಲ್ಲಿಯಲ್ಲಿನ ಪ್ರಭಾವ ಪ್ರಯೋಗಿಸಿ ಕೋಟಿ-ಕೋಟಿ ಅನುದಾನ ಜಿಲ್ಲೆಗೆ ತಂದರೂ ದೇಶಪಾಂಡೆಯ ಹಿಕಮತ್ತಿಗೆ ಸತತ ಎರಡೆರಡು ಇಲೆಕ್ಷನ್‌ನಲ್ಲಿ ಬಲಿಯಾಗಬೇಕಾಯ್ತೆಂಬ ಬೇಸರ ಆಕೆಯಲ್ಲಿ ಒಂಥರಾ "ವೈರಾಗ್ಯ" ಮೂಡಿಸಿಬಿಟ್ಟಿತು. ಮ್ಯಾಗಿಯ "ಸನ್ಯಾಸ" ಕಂಡು ಕರಗಿದ ಸೋನಿಯಾ ಮೇಡಮ್ ಆಕೆಗೊಂದು ಪುನರ್ವಸತಿ ಗಂಜಿ ಕೇಂದ್ರವಾದ ರಾಜಭವನಕ್ಕೆ ಕಳಿಸುವ ಕರುಣೆ ತೋರಿದ್ದರು.

ರಾಜ್ಯಪಾಲೆಯಾಗಿ ನಾಲ್ಕು ವರ್ಷ ಕಳೆದಿರುವ ಮ್ಯಾಗಿಯಜ್ಜಿ ಎದುರಾಳಿ ವೈರಿ ದೇಶಪಾಂಡೆಗೆ ತಾಕತ್ತು ತೋರಿಸುವ ಹುಕ್ಕಿ ಬಂದಾಗೆಲ್ಲ ರಾಜಸ್ತಾನ, ಉತ್ತರಖಂಡದ ರಾಜಭವನದಿಂದ ಉತ್ತರ ಕನ್ನಡಕ್ಕೆ ಹಾರ್‍ಯಾರಿ ಬಂದದ್ದಿದೆ!! ತನ್ನ ಹಿಂಬಾಲಕರ ರಹಸ್ಯ ಬೈಠಕ್ ನಡೆಸಿದ್ದೂ ಇದೆ; ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ತನ್ನ ಶಿಷ್ಯರಿಗೆ ಟಿಕೆಟ್ಟೂ ಕೊಡಿಸಿದ್ದರು. ಹಾಗಂತ ಆಕೆಗೆ ಮತ್ತೆ ಉತ್ತರ ಕನ್ನಡದಿಂದ ಪಾರ್ಲಿಮೆಂಟಿಗೆ ಸ್ಪರ್ಧಿಸುವ ಇರಾದೆಯೇನೂ ಇರಲಿಲ್ಲ, ಬದಲಿಗೆ ತನ್ನ ಕುಮಾರ ಕಂಠೀರವ ನಿವೇದಿತ್ ಆಳ್ವಗೆ ಎಂಪಿ ಮಾಡುವ ಮಸಲತ್ತು ಇತ್ತು. ದಿಲ್ಲಿಯ ಕಾಂಗ್ರೆಸ್ ಶಕ್ತಿ ಭವನದಲ್ಲಿ ಮ್ಯಾಗಿ ಕಳೆದೊಂದು ವರ್ಷದಿಂದ ಮಗನಿಗೆ ಟಿಕೆಟ್ ಕೊಡಿಸಲು ಶತಾಯಗತಾಯ ಸೆಣಸಾಡುತ್ತಲೇ ಇದ್ದಾರೆ.


ಕಾಂಗ್ರೆಸ್ ಅಧಿದೇವತೆ ಸೋನಿಯಾರ ಅಂತಃಪುರದ ಪರಿಚಾರಿಕೆಯಂತಿರುವ ಮ್ಯಾಗಿಯ ಆ ವರ್ಚಸ್ಸೇ ಆಕೆಯ ಮಗನನ್ನು ಟಿಕೆಟ್ ರೇಸ್‌ಗೆ ತಂದು ನಿಲ್ಲಿಸಿದೆ. ಸಮಾನಾಂತರವಾಗಿ ದೇಶಪಾಂಡೆ ತನ್ನ ಕುರುಡು ಕಾಂಚಾಣ ಕರಾಮತ್ತಿನೊಂದಿಗೆ ಬೀಗ (ಕೇಂದ್ರ ಮಂತ್ರಿ ಪ್ರಫುಲ್ ಪಟೇಲ್) ಬಲವನ್ನೂ ಸೇರಿಸಿ ಮಗ ಪ್ರಶಾಂತ್‌ಗೆ ಮುರಿಯಾಳಾಗಿಸಲು ತಂತ್ರಗಾರಿಕೆ ಮಾಡುತ್ತಿದ್ದಾರೆ. ಈ ನಿರ್ಲಕ್ಷ್ಯ ದೊಡ್ಡ ನಾಯಕರ ಪುತ್ರವ್ಯಾಮೋಹದ ವಂಶಪಾರಂಪರ್ಯ ರಾಜಕಾರಣದಿಂದ ಬೇಸತ್ತಿರುವವರು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರಿಪ್ರಸಾದ್‌ಗೆ ಉತ್ತರ ಕನ್ನಡದಿಂದ ಚುನಾವಣೆಗೆ ಸ್ಪರ್ಧಿಸುವಂತೆ ದುಂಬಾಲು ಬಿದ್ದಿದ್ದಾರೆ. ಈ ಟಿಕೆಟ್ ಕದನದಲ್ಲಿ ಹರಿಯೂ ದೊಡ್ಡ ಮಟ್ಟದ ಪೈಪೋಟಿಯನ್ನು ನೀಡುತ್ತಿದ್ದಾರೆ. ತಾನೋ ಹೊರಗಿನವನಾದರೆ ಜಿಲ್ಲೆಯವನೇ ಆಗಿರುವ ಡಿಸಿಸಿ ಅಧ್ಯಕ್ಷ 'ಬಂ' ಭಾಮೈದ ಭೀಮಣ್ಣ ನಾಯ್ಕನಿಗೆ ಛಾನ್ಸ್ ಕೊಡಿ ಎಂದು ಹರಿ ದಾಳ ಉರುಳಿಸುತ್ತಿದ್ದಾರೆ.




ದಕ್ಷಿಣ ಕನ್ನಡ ಮತ್ತು ಶಿವಮೊಗ್ಗದಲ್ಲಿ ಈಡಿಗರಿಗೆ ಅವಕಾಶ ಕೊಡಬೇಕಾಗಿರುವುದರಿಂದ ಮತ್ತೆ ಉತ್ತರ ಕನ್ನಡದಲ್ಲಿ ಅದೇ ಜಾತಿಯ ಭೀಮಣ್ಣ ನಾಯ್ಕ (ದಿವರು) ಅಥವಾ ಹರಿಪ್ರಸಾದ್ (ಬಿಲ್ಲವ) ಟಿಕೆಟ್ ಕೊಡುವುದು ಹೈಕಮಾಂಡ್‌ಗೆ ಕಷ್ಟವಾಗಿದೆ. ಹಾಗೆಯೇ ಜಾತಿ ಲೆಕ್ಕಾಚಾರ ಪ್ರಶಾಂತ್ ದೇಶಪಾಂಡೆಗೂ ಮುಳುವಾಗುತ್ತಿದೆ. ಬೆಂಗಳೂರು ದಕ್ಷಿಣದಲ್ಲಿ ಉತ್ತರ ಕನ್ನಡ ಮೂಲದ ಸಾರಸ್ವತ ಬ್ರಾಹ್ಮಣ ನಂದನ್ ನಿಲೇಕಣಿಗೆ ಅವಕಾಶ ಕೊಡುವುದರಿಂದ ಕೊಂಕಣಿ ಬ್ರಾಹ್ಮಣನಾದ ದೇಶಪಾಂಡೆಯ ಮಗನಿಗೆ ಟಿಕೆಟ್ ಬೇಡವೆಂಬ ವಾದ ಮಂಡನೆಯೂ ಆಗಿದೆ. ಹೀಗಾಗಿ ಕಾಂಗ್ರೆಸ್‌ನ ಅರ್ಹತಾ ಪರತ್ತಿನಂತೆ ಈಗ ರೇಸ್‌ನಲ್ಲಿರುವ ನಾಲ್ವರೂ ಔಟ್ ಆಗುತ್ತಾರೆ. ಹಾಗಿದ್ದರೆ ಒಂದಲ್ಲ ಒಂದು ಕಾರಣ ಟಿಕೆಟ್ ತಪ್ಪಿಸಿಕೊಳ್ಳುವ ಈ ನಾಲ್ವರ ಬದಲಿಗೆ ಅರ್ಹ ಅಭ್ಯರ್ಥಿ ಯಾರು?

ಅದು ಮ್ಯಾಗಿಯಜ್ಜಿಯೇ ಸೈ! ರಾಜ್ಯದಲ್ಲಿ ಕ್ರಿಶ್ಚಿಯನ್‌ಗೊಂದು ಸೀಟು ಕಾಂಗ್ರೆಸ್ ಕೊಡಲೇಬೇಕಾಗಿದೆ. ಬೆಂಗಳೂರು ಸೆಂಟ್ರಲ್‌ನಲ್ಲಿ ಸಾಂಗ್ಲಿಯಾನಾಗೆ ಮುಸ್ಲಿಮ್ ಸ್ಪರ್ಧಾಕಾಂಕ್ಷಿಗಳಾದ ಜಾಫರ್ ಷರೀಫ್ ಮತ್ತು ಯೂತ್ ಕಾಂಗ್ರೆಸ್‌ನ ರಾಜ್ಯಾಧ್ಯಕ್ಷ ರಿಜ್ವಾನ್ ಅಡ್ಡಗಾಲು ಹಾಕುತ್ತಿದ್ದಾರೆ. ಕಳೆದ ಬಾರಿ ಸೋತ ಸಾಂಗ್ಲಿಯಾನಾಗಿಂತ ಮುಸ್ಲಿಮ್ ಕ್ಯಾಂಡಿಡೇಟೇ ಇಲ್ಲಿ ಫಿಟ್ ಎಂಬುದು ಸಿಎಂ ಸಿದ್ದು ಅನಿಸಿಕೆ. ಈ ಎಲ್ಲ ಚೆಕ್ ಅಂಡ್ ಎರರ್ ಪದ್ಧತಿಯಲ್ಲಿ ಮ್ಯಾಗಿಯಜ್ಜಿ ಅನಿವಾರ್ಯ ಅಭ್ಯರ್ಥಿಯಾಗಿ ಟಿಕೆಟ್ ಹಂಚಿಕೆದಾರರಿಗೆ ಗೋಚರಿಸುತ್ತಿದ್ದಾರೆ. ಮ್ಯಾಗಿ ಮಗ ನಿವೇದಿತ್‌ಗೆ ಛಾನ್ಸ್ ಕೊಡಲು ದೇಶಪಾಂಡೆ ಸುತಾರಾಮ್ ಸಿದ್ಧರಿಲ್ಲ. ಎಳೆ ಪ್ರಾಯದ ನಿವೇದಿತ್‌ಗಿಂತ ಮುದಿ ಮ್ಯಾಗಿಯೇ ಸಹ್ಯವಾದ ಹುಲಿಯಾಳೆಂಬುದು ದೇಶಪಾಂಡೆ ಪಾಲಿಸಿ. ಮ್ಯಾಗಿ ಮುಂದಿನ ಬಾರಿಯಾದರೂ ತನ್ನ ಮಗನಿಗೆ ಕ್ಷೇತ್ರ ಖಾಲಿ ಮಾಡಬಹುದೆಂಬ ದೂ(ದು)ರಾಲೋಚನೆ ದೇಶಪಾಂಡೆಯದು.

ಒಂದಂತೂ ಖರೆ. ಉತ್ತರ ಕನ್ನಡದಲ್ಲಿ ಮಡುಗಟ್ಟಿರುವ ಬಿಜೆಪಿ ಕ್ಯಾಂಡಿಡೇಟ್ ಅನಂತ್ಮಾಣಿ ಮೇಲಿನ ಆಕ್ರೋಶದ ಸನ್ನಿವೇಶದಲ್ಲಿ ಕಾಂಗ್ರೆಸ್ ಮ್ಯಾಗಿಯೇ ಸಮರ್ಥ ಹುರಿಯಾಳು. ಪ್ರಶಾಂತ್ ದೇಶಪಾಂಡೆ ಅಥವಾ ನಿವೇದಿತ್ ಆಳ್ವಗಿಂತಲೂ



ನಂದನ್ ನೀಲೇಕಣಿ



ಹರಿಪ್ರಸಾದ್

ಬಲಶಾಲಿ. ಇವತ್ತಿಗೂ ಈ ಮಲಸೊಸೆಗೆ ಜಿಲ್ಲೆಯಲ್ಲೊಂದು ಚಾರಿಷ್ಮಾ ಇದೆ. ಕರ್ಮಗೇಡಿ-ಹುಸಿ ದೇಶಭಕ್ತ ಅನಂತ್ಮಾಣಿಗಿಂತಲೂ ಮ್ಯಾಗಿ ಬೆಟರ್ ಎಂಬ ಭಾವನೆಯಿದೆ. ಕಳೆದ ಬಾರಿ ಆಕೆ ದೇಶಪಾಂಡೆಯ ಸಕಲ ಕಿತಾಪತಿ ಮಧ್ಯವೂ ಉತ್ತರ ಕನ್ನಡದಲ್ಲಿ ಬಿಜೆಪಿಗಿಂತ ಸುಮಾರು 20 ಸಾವಿರ ಮತ ಹೆಚ್ಚು ಪಡೆದಿದ್ದರು. ಆದರೆ ಆಕೆಯ ಮಗ ನಿವೇದಿತ್‌ನ ಉಸ್ತುವಾರಿಯಲ್ಲಿದ್ದ ಬೆಳಗಾವಿ ಜಿಲ್ಲೆಯ ಖಾನಾಪುರ ಮತ್ತು ಕಿತ್ತೂರು ಕ್ಷೇತ್ರದಲ್ಲಿ ಆತ ಮಾಡಿದ ಎಡವಟ್ಟು ಅಮ್ಮನಿಗೆ ಕಂಟಕಕಾರಿಯಾಗಿತ್ತು. ಬೆಳಗಾವಿ ಜಿಲ್ಲೆಯ ಈ ಎರಡು ಕಡೆ ಮ್ಯಾಗಿಗಿಂತ ಬಿಜೆಪಿಗೆ ಹೆಚ್ಚು ಮತ ಬಂದಿತ್ತು. ಇದಕ್ಕೆ ಮತ್ತೊಂದು ಕಾರಣ ಅಂದು ಸಿಎಂ ಆಗಿದ್ದ ಯಡ್ಡಿಯ ಕುಲಬಾಂಧವರಾದ ಲಿಂಗಾಯತರು ಎಕ್ಸ್‌ಪ್ರೆಸ್ ಆಗಿ ಅನಂತ್ಮಾಣಿಗೆ ಉಘೇ ಉಘೇ ಎನ್ನುತ್ತಲೇ ಬಿಜೆಪಿಗೆ (ಯಡ್ಡಿಗಾಗಿ) ಮತ ಹಾಕಿದ್ದರು.


ಕಾಂಗ್ರೆಸ್‌ನ ಟಿಕೆಟ್ ಕಮಿಟಿಯ ಲೆಕ್ಕಾಚಾರಗಳು ಏನೇ ಇರಲಿ ಹಿಕಮತ್ತುದಾರ ದೇಶಪಾಂಡೆಗೆ ಹೈಕಮಾಂಡ್ ಅಂಕುಶ ಇಡದಿದ್ದರೆ ಮ್ಯಾಗಿಗೆ ಆತ ಗೆಲ್ಲಲು ಬಿಡಲಾರ. ಬಿಜೆಪಿಯ ಅನಂತ್ಮಾಣಿಗೆ ಟಿಕೆಟ್ ಖಾತ್ರಿಯಾದರೂ ಗೆಲುವು ಕಷ್ಟಸಾಧ್ಯವಾಗಿದೆ. ಅದು ಆತನಿಗೂ ಗೊತ್ತಾಗಿದೆ. ಹಾಗಾಗಿ ಆತ ಆ ಶ್ರೀರಾಮನಲ್ಲಿ ಬೇಡೋದು ಒಂದೇ: ಮ್ಯಾಗಿ ಅಥವಾ ನಿವೇದಿತ್‌ಗೆ ಕಾಂಗ್ರೆಸ್ ಟಿಕೆಟ್ ಕೊಡಲೆಂಬುದು. ಏಕೆಂದರೆ ಆಗ ದೇಶಪಾಂಡೆ ಆತನಿಗೆ ಒಳಗೊಳಗೇ ನೆರವಾಗುತ್ತಾರೆ. ಹಿಂದೆರಡು ಬಾರಿ ಜೋಭದ್ರಗೇಡಿ ಅನಂತ್ಮಾಣಿಯ ಎಂಪಿ ಮಾಡಿದ್ದೇ ದೇಶಪಾಂಡೆ. ಆ ಕೃತಜ್ಞತೆ ಅನಂತ್ಮಾಣಿಗೆ ಇವತ್ತಿಗೂ ಇದೆ. ಅದೇ ಸಹಕಾರದ ನಿರೀಕ್ಷೆಯಲ್ಲಾತ ಕನಸು ಕಾಣುತ್ತಿದ್ದಾನೆ. ಸ್ವ-ಪಕ್ಷದ ಒರಿಜಿನಲ್ ಚೆಡ್ಡಿಗಳು-ಮಾಜಿ ಮಂತ್ರಿ ಕಾಗೇರಿ ಮತ್ತು ಜನರ ತಾತ್ಸಾರ ಏನೇ ಇದ್ದರೂ ಇದೆಲ್ಲ ದೇಶಪಾಂಡೆಯ ಪಕ್ಷ ದ್ರೋಹದ ಹೆಲ್ಪ್‌ನ ಮುಂದೆ ಕೆಲಸಕ್ಕೆ ಬಾರದೇ ತಾನೇ ದಿಲ್ಲಿಗೆ ಹಾರುತ್ತೇನೆಂಬುದು ಮಾಣಿ ಮನದಾಸೆ!

ಅದೇನೇ ಇರಲಿ. ಉತ್ತರ ಕನ್ನಡ ಮಟ್ಟಿಗೆ ಹರಿಪ್ರಸಾದರೇ ಕಾಂಗ್ರೆಸ್ ಪಾಲಿಗೆ ಗಟ್ಟಿ ಕ್ಯಾಂಡಿಡೇಟ್. ಆದರೆ ಮ್ಯಾಗಿಯಜ್ಜಿ ಅಖಾಡಕ್ಕೆ ಧುಮುಕಲು ಒಳಗೊಳಗೇ ತಾಲೀಮು ನಡೆಸುತ್ತಿದ್ದಾರೆ. ಆಕೆಗೆ ರಾಜ್ಯಪಾಲಗಿರಿಗೆ ರಾಜೀನಾಮೆ ಕೊಡಲು ಅಣಿಯಾಗಿರುವಂತೆ ಕಾಂಗ್ರೆಸ್ ಹೈಕಮಾಂಡ್ ಸೂಚಿಸಿದೆಯಂತೆ. ಕರ್ನಾಟಕದ ಉತ್ತರ ಕನ್ನಡ ಇಲ್ಲವೇ ಬೆಂಗಳೂರು ಸೆಂಟ್ರಲ್ ಟಿಕೆಟ್ ಆಕೆಗೆ ಖಾತ್ರಿ ಎಂಬ ಗುಸುಗುಸು ಕಾಂಗ್ರೆಸ್ ಬಿಡಾರದಲ್ಲಿ ನಡೆದಿದೆ. ಹಾಗೆಯೇ ಪಂಜಾಬ್ ರಾಜ್ಯಪಾಲರಾಗಿರುವ ಶಿವರಾಜ್ ಪಾಟೀಲ್‌ಗೆ ಬೀದರ್‌ನಿಂದ ಕಣಕ್ಕಿಳಿಸಲು ಕಾಂಗ್ರೆಸ್ ಕಿಂಗ್‌ಗಳು ಸ್ಕೆಚ್ ಹಾಕಿದ್ದಾರೆ. ತಮಿಳುನಾಡು ರಾಜ್ಯಪಾಲ ಕೆ. ರೋಸಯ್ಯ ಮತ್ತು ಕೇರಳದ ರಾಜ್ಯಪಾಲ ನಿಖಿಲ್ ಕುಮಾರ್‌ಗೂ ಪಾರ್ಲಿಮೆಂಟ್ ಚುನಾವಣೆ ಗಿಳಿಸುವ ಯೋಚನೆ ಕಾಂಗ್ರೆಸ್ ಮಾಂಡಲೀಕರು ಮಾಡುತ್ತಿದ್ದಾರೆ!

ಮ್ಯಾಗಿಗೆ ಈ ಇಳಿವಯಸ್ಸಿನಲ್ಲಿ ಚುನಾವಣಾ ಹೋರಾಟಕ್ಕೆ ಇಳಿವ ಮನಸ್ಸು ಇಲ್ಲ. 1998 ರಿಂದ ಸತತ ನಾಲ್ಕು ಬಾರಿ ಉತ್ತರ ಕನ್ನಡದಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿರುವ ಮ್ಯಾಗಿ ಗೆದ್ದಿದ್ದು ಒಂದೇ ಒಂದು ಬಾರಿ. ಈ ಬಾರಿಯ ಸತ್ವಪರೀಕ್ಷೆ ಆಕೆಗೆ ಅನಿವಾರ್ಯ ಎಂಬಂತಾಗಿದೆ. ಗೆಲ್ಲಲಿ-ಸೋಲಲಿ; ಈ ಸ್ಪರ್ಧೆ ಮಗ ನಿವೇದಿತ್‌ಗೆ ಉತ್ತರ ಕನ್ನಡದಲ್ಲಿ ಉತ್ತರಾಧಿಕಾರಿ ಮಾಡಲು ಮ್ಯಾಗಿಗೆ ಬೇಕಾಗಿದೆ. ದೇಶಪಾಂಡೆಗೆ ಮ್ಯಾಗಿ ಪುನರಾಗಮನ ಬೇಡವೇಬೇಡವಾಗಿದೆ. ಹಾಗಾಗಿ ಅಂತಿಮ ಟಿಕೆಟ್ ಕಾಳಗ ಈಗ ಮ್ಯಾಗಿ ಮತ್ತು ಹರಿಪ್ರಸಾದ್ ನಡುವೆ ನಡೆಯುವಂತಾಗಿದೆ.

ಹರಿ ನಿಂತರೆ ಕಾಂಗ್ರೆಸ್‌ಗೆ ಗೆಲ್ಲುವ ಅವಕಾಶ ಜಾಸ್ತಿ; ಮ್ಯಾಗಿಯಜ್ಜಿ ಕಾಂಗ್ರೆಸ್ ಕುದುರೆಯಾದರೆ ಬಿಜೆಪಿ ಸವಾರಿ ಮಾಡಬಹುದು!!

● ಶುದ್ದೋಧನ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ದೇವಿ: ವಿವಿಧ ದೃಷ್ಟಿಗಳಲ್ಲಿ...

'ಪುರಾಣವೆಂಬುದು ಪುಂಡರ ಗೋಷ್ಠಿ, ವೇದವೆಂಬುದು ಓದಿನ ಮಾತು' ಎಂದು ಹೇಳುವ ಅಲ್ಲಮಪ್ರಭು ತನ್ನ ಮತ್ತೊಂದು ವಚನದಲ್ಲಿ 'ಅಜ್ಞಾನವೆಂಬ ತೊಟ್ಟಿಲೊಳಗೆ, ಜ್ಞಾನವೆಂಬ ಶಿಶುವ ಮಲಗಿಸಿ, ಸಕಲ ವೇದ-ಶಾಸ್ತ್ರವೆಂಬ ನೇಣ ಕಟ್ಟಿ ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ ಭ್ರಾಂತಿಯೆಂಬ ತಾಯಿ, ತೊಟ್ಟಿಲು ಮುರಿದು, ನೇಣು ಹರಿದು, ಜೋಗುಳ ನಿಂದಲ್ಲದೇ ಗುಹೇಶ್ವರನೆಂಬ ಲಿಂಗವ ಕಾಣಬಾರದು' ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

ಪುರಾಣಗಳ ಮತ್ತು ವೇದ-ಶಾಸ್ತ್ರಗಳ ಬಗ್ಗೆ ಇಷ್ಟು ತಾತ್ಸಾರ ಮತ್ತು ಜಿಗುಪ್ಸೆ ಹುಟ್ಟಲು ಕಾರಣ ಆಗಿನ ವೈದಿಕ ಮನೋಧರ್ಮದವರ ಅಸಹನೀಯ ಮತ್ತು ಅವ್ಯೆಚಾರಿಕ ವರ್ತನೆಗಳೂ ಮತ್ತು ಮನುವಾದಿಗಳು ಮನುಕುಲದ ಮೇಲೆ ಮಾಡುತ್ತಿದ್ದ ಶೋಷಣೆಗಳು ಎಂಬುದು ಸ್ಪಷ್ಟ. ಮುಗ್ಧ ಜನರನ್ನು ಅಕ್ಷರಜ್ಞಾನದಿಂದ ವಂಚಿಸಿ, ಅವರಿಗೆ ಯಾವುದೇ ವಿಷಯಗಳು ಅರಿವಿಗೆ ಬರದಂತೆ ಎಚ್ಚರ ವಹಿಸುತ್ತಾ, ತಮ್ಮ ಬಾಯಿಂದ ಬಂದುದನ್ನೇ ಕೇಳಿಸುತ್ತಾ ಅದನ್ನೇ ನಂಬಿಸುತ್ತಾ ಮೂರ್ಖರನ್ನಾಗಿಸುವ ಒಂದು ಬಗೆಯ ಪಟ್ಟಭದ್ರ, ಹಿತಾಸಕ್ತರನ್ನು ಆಗಿನ ವಚನಕಾರರು ನಾನಾರೀತಿಯಲ್ಲಿ ಖಂಡಿಸಿದ್ದಾರೆ ಮತ್ತು ವಿಡಂಬಿಸಿದ್ದಾರೆ. ಅವರು ಮೇಲ್‌ಸ್ತರದಲ್ಲಿ ಅಧಿಕಾರಶಾಹಿಯಾಗಿ ವರ್ತಿಸುತ್ತಿದ್ದ ಇಂತಹ ವೈದಿಕ ಮನೋಧರ್ಮವನ್ನು ಧಿಕ್ಕರಿಸಿದರು. ಪ್ರಜಾಪ್ರಭುತ್ವವೆಂದು ಹೆಸರಿಡದಿದ್ದರೂ ಅದೇ ಬಗೆಯ ಮುಕ್ತ ಮತ್ತು ಸಮಾನತೆಯ ಹಕ್ಕು ಮತ್ತು ಕರ್ತವ್ಯಗಳನ್ನು ಅನುಭವ ಮಂಟಪದಲ್ಲಿ ವಚನ ಚಳವಳಿಯಾಗಿ ರೂಪಿಸಿ ಅಭ್ಯಾಸ ಮಾಡಿದರು. ಸಾಮಾಜಿಕ ಸಮಾನತೆಯ ನೆಲೆಯಿಂದಲೂ, ಪರಸ್ಪರ ಗೌರವ ಸಹಬಾಳ್ವೆಯ ದೃಷ್ಟಿಕೋನದಿಂದಲೂ, ತಮ್ಮ ಸಹಜ ಸಿದ್ಧಾಂತವನ್ನು ಕಂಡುಕೊಳ್ಳುವ ನೆಲೆಗಟ್ಟಿನಿಂದಲೂ ಹಾಗೂ ಆಧ್ಯಾತ್ಮದ ಆಳ ಮತ್ತು ಎತ್ತರಗಳನ್ನು ಕಂಡುಕೊಳ್ಳುವ ದಾರ್ಶನಿಕತೆಯಿಂದಲೂ ಶರಣ ಸಂಸ್ಕೃತಿಯನ್ನು ಕಟ್ಟಿಕೊಟ್ಟಿದ್ದಾರೆ.

ಶರಣ ಸಂಸ್ಕೃತಿಯ ಕಡೆಗೆ ಒಲವು ತೋರಿದ ಮತ್ತು ಅದರ ಮೌಲ್ಯಗಳನ್ನು ಗುರುತಿಸಿ ಅಭ್ಯಾಸ ಮಾಡಲು ತೊಡಗಿದ ಸಾಮಾನ್ಯ ಮತ್ತು ಕೆಳಸ್ತರದ ಜನರಿಗೆ ಪುರಾಣಗಳನ್ನು ಮತ್ತು ಉಪನಿಷತ್ತುಗಳನ್ನು ನೇರವಾಗಿ ಗ್ರಂಥರೂಪದಲ್ಲಿ ಅಧ್ಯಯನ ಮಾಡಲು ಅವಕಾಶವೇ ಆಗಲಿಲ್ಲವೆಂದು ತೋರುತ್ತದೆ. ಅವರೆಲ್ಲರೂ ಮುಂದಾಳತ್ವ ವಹಿಸಿದ್ದ ಅಲ್ಲಮ, ಬಸವರಂತಹ ಶರಣರ ಪ್ರೇರಣೆಯಿಂದ ತಮ್ಮ ತಮ್ಮ ದರ್ಶನಗಳನ್ನು ಮತ್ತು ಅನುಭೂತಿಗಳನ್ನು ಕಂಡುಕೊಂಡರು. ತಮ್ಮ ಆಡುಭಾಷೆಯಾದ ಕನ್ನಡದಲ್ಲಿಯೇ ಅವನ್ನು ಸ್ಫುಟವಾಗಿ ಕಟ್ಟಿಕೊಟ್ಟರು. ನೇರವಾದ ಮತ್ತು ಸತ್ಯವಾದ ಫಸ್ಟ್ ಹ್ಯಾಂಡ್ ಅನುಭಾವವಾದ್ದರಿಂದ ಅವೇ ಅತ್ಯಂತ ಗಟ್ಟಿಯಾಗಿಯೂ, ಸಮೃದ್ಧವಾಗಿಯೂ ಇವೆ. ಒಂದು ವೇಳೆ ಅವರು ವೈದಿಕರ ವಾಕ್ಯಂಕದ ಮೂಲಕವಲ್ಲದೇ ತಾವು ಪುರಾಣಗಳನ್ನು ಮತ್ತು ಉಪನಿಷತ್ತುಗಳನ್ನು ವಿಶ್ಲೇಷಿಸಿದ್ದೇ ಆದ ಪಕ್ಷದಲ್ಲಿ ಅಲ್ಲಮನೂ ಪುರಾಣವೆಂಬುದು ಪುಂಡರ ಗೋಷ್ಠಿ, ವೇದವೆಂಬುದು ಓದಿನ ಮಾತು ಎಂದು ತಳ್ಳಿಹಾಕಿಬಿಡುತ್ತಿರಲಿಲ್ಲ ಎಂದುಕೊಳ್ಳುತ್ತೇನೆ. ಬದಲಾಗಿ ಟೊಳ್ಳು ಗಟ್ಟಿಗಳನ್ನು ಗುರುತಿಸುವ ಜರಡಿಯಾಡುತ್ತಿದ್ದರು ಎಂದು ಭಾವಿಸುತ್ತೇನೆ. ಅರಿವಿನ ಗುರುವಿನ ಅನುಗ್ರಹದಿಂದ ಶರಣರಿಂದಲೂ ವೇದಗಳ ಮತ್ತು ಉಪನಿಷತ್ತುಗಳ ಮೇಲೆ ವ್ಯಾಖ್ಯಾನಗಳು ಬರುತ್ತಿದ್ದವು. ಈ ಕಾರ್ಯವು 12ನೆಯ ಶತಮಾನದ ನಂತರ ನಡೆದಿದೆ ಎನಿಸುತ್ತದೆ. ಆದರೆ ಗಣಪತಿ ದೇವಿ, ಸುಬ್ರಹ್ಮಣ್ಯರಂತಹ ಪುರಾಣದ ದೇವತೆಗಳು ನನ್ನ ಅಧ್ಯಯನದ ಪರಿಮಿತಿಯಲ್ಲಿ ಕಂಡಂತೆ ವಚನ ಸಾಹಿತ್ಯಗಳಲ್ಲಿ ಕಂಡುಬಂದಿಲ್ಲ, ಆದರೆ ಹಲವು ಕಡೆಗಳಲ್ಲಿ ಶೃತಿ ಮತ್ತು ಉಪನಿಷತ್ತುಗಳ ವಾಕ್ಯಗಳ ನೇರವಾದ ಉಲ್ಲೇಖವಿದೆ. ಅದನ್ನು ಟೀಕಿಸಿಯೋ, ಪರ್ಯಾಯವಾಗಿಯೋ ಬೇರೆಯ ಚಿಂತನೆಗಳನ್ನು ಕಟ್ಟಿಕೊಟ್ಟಿದ್ದಾರೆ.

ವಿವಿಧ ವ್ಯಾಖ್ಯಾನಗಳ ಅವಕಾಶ

ಈಗ ನಮಗೆ ಸ್ವಂತ ನೆಲೆಯಿಂದ ರೂಪಿತವಾದ ಶರಣರ ವಚನ ಸಂಸ್ಕೃತಿಯ ಹಿನ್ನೆಲೆಯೂ ಇದೆ. ಜೊತೆಗೆ ವೇದ, ಉಪನಿಷತ್ತು ಮತ್ತು ಪುರಾಣಗಳನ್ನು ನಾನಾ ದೃಷ್ಟಿಕೋನಗಳಿಂದ ಅಧ್ಯಯನ ಮಾಡುವ ಮತ್ತು ವ್ಯಾಖ್ಯಾನ ಮಾಡುವ ಅವಕಾಶವೂ ಇದೆ. ಹಾಗಾಗಿ ಪುರಾಣಗಳಲ್ಲಿ ಇತಿಹಾಸವನ್ನು ಬೆದಕುವ ಕ್ರಮದೊಂದಿಗೆ, ಅವುಗಳನ್ನು ಸಾಂಸ್ಕೃತಿಕವಾಗಿ, ಮನೋವೈಜ್ಞಾನಿಕವಾಗಿ, ತಾತ್ವಿಕವಾಗಿ, ಸಾಮಾಜಿಕವಾಗಿ- ಹೀಗೆ ನಾನಾ ರೀತಿಯಲ್ಲಿ ವಿಶ್ಲೇಷಿಸಬಹುದಾಗಿದೆ. ಇಂತಹ ಅಧ್ಯಯನಕ್ಕೆ ಬಹು ಸೂಕ್ತವಾದ ವಸ್ತು ದೇವಿಯ ಪರಿಕಲ್ಪನೆ. ದೇವಿಯು ಆರ್ಯರ, ವೈದಿಕರ, ದ್ರಾವಿಡರ, ಇತರೇ ಮೂಲನಿವಾಸಿಗಳೆಲ್ಲರ ಸಮಾಜ, ಸಂಸ್ಕೃತಿ



ಮತ್ತು ಆಧ್ಯಾತ್ಮದಲ್ಲಿ ಕಾಣಸಿಗುವುದರಿಂದ ಮನೋವೈಜ್ಞಾನಿಕವಾಗಿಯೂ ಕೂಡ ಅವಳನ್ನು ಅಧ್ಯಯನ ಮಾಡಬಹುದಾಗಿದೆ. ಯಂತ್ರ, ಮಂತ್ರಗಳಾದಿಯಾಗಿ ತಂತ್ರದ ಪ್ರತಿಮೆಯಾಗಿ ಕಾಣುವ ದೇವಿಯು ಸಮಾಜದ ವ್ಯವಸ್ಥೆಯ ಮೇಲ್ಮಟ್ಟದಲ್ಲಿಯೂ ಕಾಣಸಿಗುತ್ತಾಳೆ. ಮತ್ತೊಂದು ಕಡೆ ಶೋಷಣೆಗೆ ಬಂಡಾಯವೆದ್ದ ಸ್ತ್ರೀ ಸಮಾಜದ ಮೂರ್ತಿಯಾಗಿ ಆವಿರ್ಭವಿಸಿದರೆ, ಮತ್ತೊಂದು ಕಡೆ ಫಲವತ್ತಾದ, ಆದರೆ ನಿರ್ವಿಚಾರದ ಚೈತನ್ಯದ ಸೆಲೆಯಾಗಿ ಕಾಣಬರುತ್ತಾಳೆ. ಕೆಲವೊಮ್ಮೆ ತುಳಿತಕ್ಕೊಳಗಾಗಿ ನಂತರ ಅನುಕಂಪದ ಮೂರ್ತಿಯಾಗಿ ನಿಂತರೆ, ಮತ್ತೆ ಕೆಲವೊಮ್ಮೆ ಎಲ್ಲರನ್ನೂ ತಾನೇ ಅಧೀನದಲ್ಲಿಟ್ಟುಕೊಂಡು ಆಳಿಸುವ ಮತ್ತು ಪಾಲಿಸುವ ಮೇರುಮೂರ್ತಿಯಾಗಿ ಕಾಣಬರುತ್ತಾಳೆ.



ಇವುಗಳೆಲ್ಲಾ ದಾಖಲೆಗಳನ್ನು ಯಾವುದೇ ಕ್ರಮದಲ್ಲಿಟ್ಟು ಅಧ್ಯಯನ ಮಾಡಿದರೂ ಮಾನವ ಮತ್ತು ಸಮಾಜಶಾಸ್ತ್ರದ ಮತ್ತು ಸಾಂಸ್ಕೃತಿಕ ವಿಕಾಸದ ವಿವಿಧ ಮಗ್ಗುಲುಗಳನ್ನು, ಇತಿಹಾಸದ ಬೆಳವಣಿಗೆಗಳನ್ನೂ ಕಾಣುತ್ತೇವೆ.

ದೇವಿ: ಸ್ತ್ರೀತನದ ಅಧಿಕಾರ

ದೇವಿಯನ್ನು ಆರ್ಯರಲ್ಲಿ ಸ್ತ್ರೀ ಸೂಚಕವಾಗಿ, ಗೌರವ ಪದವಾಗಿ ವ್ಯಾಪಕವಾಗಿ ಬಳಕೆಯಾದರೂ, ದ್ರಾವಿಡೇತರ ಮೂಲನಿವಾಸಿಗಳ ಸ್ತ್ರೀ ರೂಪಗಳನ್ನೂ ದೇವಿಯೆಂದೇ ಕರೆಯುವರು. ದೇವ-ಗೆ ಸ್ತ್ರೀ ಲಿಂಗ ಪದವಾಗಿ ಬಳಕೆಯಾದರೂ ಪಶ್ಚಿಮ ದಿಕ್ಪಾಲಕನಾದ ವರುಣನ ಹೆಂಡತಿಯನ್ನು ದೇವಿ ಎಂದು ಆಕೆಯ ನಿರ್ದಿಷ್ಟ ಹೆಸರಿನ ನಾಮಪದವಾಗಿ ಹೇಳುವರು. ಈ ದೇವಿಯ ಮಗನ ಹೆಸರು ಬಲ ಎಂದೂ, ಮಗಳು ಸುರೆ. ಇವಳು ಮದ್ಯಾಭಿಮಾನಿ ದೇವತೆ.

ಸ್ತ್ರೀ ತತ್ವವನ್ನು ಗೌರವದಿಂದಲೂ, ಅಧಿಕಾರವನ್ನು ಆರೋಪಿಸಿ ಹೇಳುವಾಗಲೂ ದೇವಿಯೆಂದು ಬಳಸುವುದಾದರೂ ದೇವಿಯರ ಹಲವು ರೂಪಗಳ ಅನಾವರಣಕ್ಕೂ ಪ್ರತಿಮೆಗಳಾಗಿ ಬಳಸುವುದುಂಟು.

ಭೂದೇವಿ, ಗಂಗಾದೇವಿ, ಗಿರಿಜಾದೇವಿ, ವನದೇವಿ- ಹೀಗೆ ಪ್ರಕೃತಿಯಲ್ಲಿರುವ ತತ್ವಗಳನ್ನು ದೇವಿಯ ಪ್ರತಿಮೆಯಾಗಿಸಿದರೆ, ಶ್ರೀದೇವಿ, ದುರ್ಗಾದೇವಿ, ಕಾಳಿಕಾದೇವಿ ಇತ್ಯಾದಿ ತತ್ವ ಮತ್ತು ಪರಿಕಲ್ಪನೆಗಳ ಮೂರ್ತಿಸ್ವರೂಪಗಳನ್ನೂ ದೇವಿಗಳನ್ನಾಗಿ ಕಾಣುವುದು ನಮಗೆ ಸಂಪ್ರದಾಯವಾಗಿಯೇ ಒದಗಿದೆ. ಒಟ್ಟಾರೆ ಅಧಿಕಾರಯುತ ಸ್ತ್ರೀತತ್ವವನ್ನು ದೇವಿ ಎಂಬ ಪ್ರತಿಮಾರೂಪದಲ್ಲಿ ಕಾಣಲು ಯಾವ ಅಭ್ಯಂತರವೂ ಇಲ್ಲ. ಹಾಗಾಗಿ ನಾನಾರೀತಿಗಳಲ್ಲಿ ಕಾಣುವ ದೇವಿಯರನ್ನು ವಿಶ್ಲೇಷಿಸುತ್ತಾ ಹೋಗುವಾಗ ಬಹು ಕುತೂಹಲಕರವಾದ ಸಂಗತಿಗಳು ನಮಗೆ ತೆರೆದುಕೊಳ್ಳುತ್ತಾ ಹೋಗುತ್ತವೆ.

ಯಾ ದೇವಿ ಸರ್ವ ಭೂತೇಶು

ಯಾವ ದೇವಿಯು ಎಲ್ಲಾ ಭೂತಗಳಲ್ಲಿ ಚೇತನ್ಯ ಶ್ರದ್ಧೆ, ದಯೆ, ತಾಯಿ, ಭ್ರಮೆ, ಇತ್ಯಾದಿ ತತ್ವಗಳಾಗಿ ಕಾಣುವಳೋ ಅವಳಿಗೆ ಮತ್ತೆ ಮತ್ತೆ ನಮಸ್ಕರಿಸುತ್ತೇನೆ ಎಂದು ದುರ್ಗಾ ಸಪ್ತಶತಿಯಲ್ಲಿ ಉಲ್ಲೇಖವಾಗಿರುವ ಅಪರಾಜಿತ ಸ್ತೋತ್ರದಲ್ಲಿ ಕಾಣುತ್ತೇವೆ. ಸ್ತ್ರೀತತ್ವವನ್ನು ಬಹು ಗೌರವದಿಂದಲೂ, ವ್ಯಾಪಕಾರ್ಥಗಳಲ್ಲಿ ಸಂಬೋಧಿಸಿರುವುದನ್ನೂ ಇದರಲ್ಲಿ ಕಾಣಬಹುದಾಗಿದೆ. ಅದರಲ್ಲಿಯೂ, ದೇವತೆಗಳು ಮತ್ತು ಆರ್ಯರ ಶೂರಾಗ್ರಣಿಗಳು ಅಸುರರ ವಿಷಯದಲ್ಲಿ ನಿಸ್ಸಹಾಯಕರಾದಾಗ ಕೈ ಜೋಡಿಸಿ ದೇವಿಯನ್ನು ಈ ಅಪರಾಜಿತಾ ಸ್ತೋತ್ರದಲ್ಲಿ ಸ್ತುತಿಸುವಂತಹ ಸಂದರ್ಭ ಅಲ್ಲಿ ಕಾಣುತ್ತದೆ. ಬಹಳ ಸರಳವಾಗಿಯೂ ಮತ್ತು ಕರುಣಾಳುವಾಗಿಯೂ ದೇವಿಯ ಮೂರ್ತಿಯು ಅಲ್ಲಿ ಬಹಳ ಶಕ್ತಿಶಾಲಿಯಾಗಿ ಚಿತ್ರಿತವಾಗಿದೆ. ಮುಂದೆಯೂ ಅವಳು ಅಸುರರನ್ನು ಕೊಲ್ಲುವ ಮುನ್ನವೂ ಸರಬರ ನುಗ್ಗಿ ವೀರಾವೇಶದಿಂದ ಕೊಲ್ಲದೇ ನಾಟಕೀಯ ಸನ್ನಿವೇಶವನ್ನು ಸೃಷ್ಟಿಸುತ್ತಾಳೆ. ಹಿಮಾಲಯದ ತೆರೆದ ಬಯಲಿನಲ್ಲಿ ವಿಹರಿಸುವ ಹೆಣ್ಣಾಗಿ ಅಸುರರ ಕಣ್ಣಿಗೆ ಬಿದ್ದು, ಅವರಿಗೆ ಅವಳಲ್ಲಿ ಅನುರಾಗ ಉಂಟಾಗಿ ವರಿಸಲು ಮುಂದಾದಾಗ, ಆಕೆಯು ತನ್ನನ್ನು ಸೋಲಿಸದ ಹೊರತು ನಾನು ಯಾರ ಕೈವಶವಾಗುವುದಿಲ್ಲ, ನಾನೇ ಮಾಡಿಕೊಂಡಿರುವ ಪ್ರತಿಜ್ಞೆ ಈ ರೀತಿಯಾಗಿದೆ ಎಂದು ಸರಳವಾಗಿ ತನ್ನ ಸಬಲತೆಯನ್ನು ಮೆರೆಯುತ್ತಾಳೆ. ನಂತರ ಅವಳನ್ನು ಬಲಾತ್ಕರಿಸಲು ಹೋಗುವ ಅಸುರರು ಅವಳ ಪರಾಕ್ರಮದ ರುಚಿಯುಣ್ಣುತ್ತಾರೆ. ಸರಳವಾಗಿ, ಸುಂದರವಾಗಿ, ಸರಾಗವಾಗಿ ಕಾಣಿಸಿಕೊಳ್ಳುವ ದೇವಿಯು ಮುಂದೆ ರಣಚಂಡಿಯಾಗಿ ರಕ್ತವನ್ನು ಕುಡಿಯುತ್ತಾ, ಹಸಿ ಮಾಂಸವನ್ನು ಜಗಿಯುತ್ತಾ, ಕೋರೆದಾಡೆಗಳಿಂದ ಅಸುರರನ್ನು ಸೀಳುತ್ತಾ ಆರ್ಭಟಿಸುತ್ತಾಳೆ. ಅಷ್ಟೇ ಸಾಲದು ಎಂಬಂತೆ ಸುರೆಯನ್ನು ಧಾರಾಳವಾಗಿ ಸೇವಿಸಿ, ಮದೋನ್ಮತ್ತಳಾಗಿ ಹೋರಾಡುತ್ತಾಳೆ.

ವೈದಿಕರ ಶಿಷ್ಟ ಸಾಹಿತ್ಯವು ಪುರಾಣಗಳಲ್ಲಿ ಕಟ್ಟಿಕೊಡುವ ಅಸುರರ ಅಥವಾ ರಾಕ್ಷಸರಿಗಿಂತ ಕ್ರೂರವಾಗಿ ಚಿತ್ರಿತವಾಗಿರುವ ಈ ದೇವಿ ಯಾರು? ಅಸುರರಿಗೆ ಪರ್ಯಾಯವಾಗಿ ಅಥವಾ ಅವರಿಗಿಂತ ಕ್ರೂರವಾಗಿ ಚಿತ್ರಿಸಿರುವ ಈ ಮಹಾಶಕ್ತಿಶಾಲಿ ಹೆಣ್ಣು ಯಾರು? ಆರ್ಯಳೇ? ಅನಾರ್ಯಳೇ? ಬುಡಕಟ್ಟು ಹೆಂಗಸೇ? ದ್ರಾವಿಡ ಅಥವಾ ದ್ರಾವಿಡೇತರ ಮೂಲನಿವಾಸಿಯಾಗಿರುವ ಹೆಣ್ಣೇ? ಸುಂದರವಾಗಿಯೂ, ಕ್ರೂರವಾಗಿಯೂ, ಕಪ್ಪಾಗಿಯೂ, ರೌದ್ರವಾಗಿಯೂ ಚಿತ್ರಿಸುವ ಈ ದೇವಿಯನ್ನು ಹೇಗೆ ನೋಡುವುದು? ಇದು ಒಂದೇ ದೇವಿಯೇ ಅಥವಾ ದೇವಿ ಪಟ್ಟವನ್ನು ಅಥವಾ ಪದವಿಯನ್ನು ಆಗ್ಗಿಂದಾಗ್ಗೆ ಅಲಂಕರಿಸುತ್ತಿದ್ದ ವಿವಿಧ ಮೂಲಗಳ ವಿವಿಧ ಮಹಿಳೆಯರೇ?

ಹೌದು. ಇಂದ್ರ ಪದವಿ, ಬ್ರಹ್ಮ ಪದವಿ, ಶಿವ ಪದವಿ, ವಿಷ್ಣು ಪದವಿ, ರುದ್ರ ಪದವಿ, ಇನ್ನಾವುದೋ ಗಣ ಪದವಿ- ಹೀಗೆ ಹಲವಾರು ಪದವಿಗಳು ಅಥವಾ ಪಟ್ಟಗಳು. ಹಾಗೆಯೇ ಬುದ್ಧ ಪದವಿ, ತೀರ್ಥಂಕರ ಪದವಿ, ಪೈಗಂಬರ ಪದವಿಗಳೂ ಕೂಡ. ಬುದ್ಧ ಪರಂಪರೆಯಲ್ಲಿ ಗೌತಮ ಬುದ್ಧ ಹೇಗೆ ಒಬ್ಬನೇ ಬುದ್ಧನಲ್ಲವೋ, ಪೈಗಂಬರರ ಸಾಲಿನಲ್ಲಿ ಮಹಮದ್ ಪೈಗಂಬರ್ ಒಬ್ಬರೇ ಹೇಗಲ್ಲವೋ, ಹಾಗೆಯೇ ಇಂದ್ರನ ಪದವಿಯೂ ಒಬ್ಬನ ಸ್ವತ್ತೋ, ಸ್ವಾಮ್ಯವೋ ಅಲ್ಲ, ಇಂದ್ರನ ಪದವಿಗೆ ಹಲವಾರು ಇಂದ್ರರು ಬಂದುಹೋಗಿದ್ದರು. ಹಾಗೆಯೇ ವಿಷ್ಣುವಿನ ಪದವಿಗೂ, ರುದ್ರನ ಪದವಿಗೂ, ಶಕ್ತಿ ಅಥವಾ ದೇವಿಯ ಪದವಿಗೂ ಹಲವಾರು ಶಕ್ತಿರೂಪದ ವ್ಯಕ್ತಿಗಳು ಅಥವಾ ವ್ಯಕ್ತಿ ರೂಪದ ಶಕ್ತಿಗಳು ಬಂದುಹೋಗಿರುತ್ತಾರೆ. ದೇವಿಯ ಪರಂಪರೆಯೂ ಅಷ್ಟೇ ವಿಶಾಲವಾದುದು ಮತ್ತು ವ್ಯಾಪಕವಾದುದು. ಭಾರತದ ಮೂಲೆಮೂಲೆಗಳಲ್ಲಿ ಯಾರ್ಯಾರೋ ದೇವಿಯರು ಆಗಿಹೋಗಿದ್ದಾರೆ. ಅವರಿಗೆಲ್ಲರಿಗೂ ಒಬ್ಬರಿಗೊಬ್ಬರು ಪರಿಚಯವೂ ಇಲ್ಲ, ಒಂದೇ ಮೂಲದಿಂದ ಬಂದವರೂ ಅಲ್ಲ. ಆದರೆ ಒಂದೇ ಪರಿಕಲ್ಪನೆಯಲ್ಲಿ ಸಮೀಕರಿಸಲ್ಪಟ್ಟಿದ್ದಾರೆ.

ಹಲವಾರು ಹೆಂಗಸರ ಶೌರ್ಯ, ಸೌಂದರ್ಯ, ಔದಾರ್ಯ, ಸಾಮರ್ಥ್ಯ, ಕಾರುಣ್ಯ, ದೈನ್ಯ, ವಾತ್ಸಲ್ಯಗಳೆಲ್ಲವೂ ದೇವಿಯ ಪರಿಕಲ್ಪನೆಗೆ ಬೆಸೆದುಕೊಳ್ಳಲು ಕಾರಣವಾಗಿವೆ. ದೇವಿಯ ಪರಿಕಲ್ಪನೆಯನ್ನು ನಾವೇನಾದರೂ ಪುರಾಣಗಳ ಕಾಲಕಷ್ಟೇ ಸೀಮಿತಗೊಳಿಸಿಬಿಟ್ಟರೆ ಸ್ತ್ರೀತತ್ವವನ್ನು ಬೆಳೆಯಲು ಬಿಡದಂತಹ ಹುನ್ನಾರವೆಂದೇ ನನ್ನ ಭಾವನೆ. ಆಧುನಿಕ ಅಥವಾ ಪ್ರಸ್ತುತ ಕಾಲದಲ್ಲಿಯೂ ದೇವಿಯ ಪದವಿಯಲ್ಲಿ (ಆಧ್ಯಾತ್ಮಿಕವಾಗಿ ಅಥವಾ ಧಾರ್ಮಿಕವಾಗಿ ಮಾತ್ರವಲ್ಲ) ನಾವು ಸ್ತ್ರೀಯರನ್ನು, ಸ್ತ್ರೀತತ್ವವನ್ನು ನೋಡಲು ಸಾಧ್ಯವಿದೆ ಹಾಗೂ ಅಗತ್ಯವೂ ಇದೆ. ದೇವಿಯ ಪರಿಕಲ್ಪನೆಯ ಜಾಡನ್ನು ಹಿಡಿದು ಚಾಮುಂಡೇಶ್ವರಿ, ದುರ್ಗಾ, ಲಲಿತಾ ಮತ್ತು ಇತರ ದೇವಿಯರ ಹಿಂದೆ ಹೋಗುವುದು ತುಂಬಾ ಆಸಕ್ತಿದಾಯಕ ಮತ್ತು ಕುತೂಹಲಕರವೂ ಹೌದು. ●

ಲಂಕೇಶ್

ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ...

ವಾರ್ಷಿಕ ಚಂದಾ ವಿವರ

ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ	: 700 ರೂ.
ಎರಡು ವರ್ಷಕ್ಕೆ	: 1400 ರೂ.
ಮೂರು ವರ್ಷಕ್ಕೆ	: 2000 ರೂ.

ಡಿಡಿ/ಚೆಕ್‌ಗಳನ್ನು 'ಲಂಕೇಶ್' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.

ಹೆಚ್ಚಿನ ಮಾಹಿತಿಗಾಗಿ: 9880302817/080-26676427

ಮರೀಚಿಕೆಯಾಗುತ್ತಿದೆಯೇ ಮಹಿಳಾ ವಿಮೋಚನೆ

ಇತ್ತೀಚೆಗೆ ವಿಶ್ವವಿದ್ಯಾಲಯದ ಅಧ್ಯಾಪಕರೊಬ್ಬರು ಸಂಶೋಧನಾ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಮಿಂಚಿನ ಪ್ರತಿಭಟನೆಗಿಳಿದರು. ಪರಿಣಾಮವಾಗಿ ತಕ್ಷಣವೇ ಸದರಿ ಅಧ್ಯಾಪಕರನ್ನು ಅಮಾನತ್ತುಗೊಳಿಸಲಾಯಿತು. ಮಹಿಳಾ ದೌರ್ಜನ್ಯಕ್ಕೆ ಸಂಬಂಧಪಟ್ಟಂತೆ ಇಷ್ಟು ಶೀಘ್ರವಾಗಿ ಕಾರ್ಯೋನ್ಮುಖರಾಗಿರುವ ವಿವಿಯ ಕುಲಪತಿ ಮತ್ತು ಸಿಂಡಿಕೇಟ್ ಸದಸ್ಯರ ಈ ನಡೆಯು ಶ್ಲಾಘನೀಯ ಮತ್ತು ಸ್ವಾಗತಾರ್ಹ. ಆದರೆ ನಂತರ ವಿವಿ ಆವರಣದಲ್ಲಿ ಏಳತೊಡಗಿದ ಚರ್ಚೆ, ವಾದವಿವಾದಗಳು ಮತ್ತು ಒಳ ಒಪ್ಪಂದಗಳಿಗಾಗಿ ತೆರೆಮರೆಯಲ್ಲಿ ನಡೆಯುತ್ತಿರುವ ಒತ್ತಡ ಒತ್ತಾಸೆಗಳು ಮಾತ್ರ ಚಿಂತಾಜನಕವಾಗಿವೆ. ವಿವಿಯ ಅಕಾಡೆಮಿಕ್ ವಲಯದ ಯಾವುದೋ ಮೂಲೆಯಿಂದ ಕೆಲ ಪುರುಷ ಅಧ್ಯಾಪಕರು ಇನ್ನು ಮುಂದೆ ತಾವು ಯಾವುದೇ ಹುಡುಗಿಯರಿಗೆ ಮಾರ್ಗದರ್ಶನವೇ ಮಾಡುವುದಿಲ್ಲ. ಏಕೆಂದರೆ ಹುಡುಗಿಯರು ಸುಳ್ಳು ಆರೋಪ ಮಾಡುತ್ತಿದ್ದಾರೆ. ಏನಕೇನ ನೆಪದಲ್ಲಿ ಲೈಂಗಿಕ ಕಿರುಕುಳವೆಂಬ ಹಣೆಪಟ್ಟಿ ಹೊರೆಸಿ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಪೊಲೀಸ್ ಕಚೇರಿಯಲ್ಲಿ ಮಹಿಳೆಯರ ಲೈಂಗಿಕ ಕಿರುಕುಳದ ದೂರು ಕೊಟ್ಟೊಡನೆ, ಹಿಂದೆಮುಂದೆ ನೋಡದೆ ಪೊಲೀಸರು ತಕ್ಷಣವೇ ಕಾರ್ಯಪ್ರವೃತ್ತರಾಗಿ ನಿರಪರಾಧಿಗಳನ್ನು ಬಂಧಿಸುತ್ತಿದ್ದಾರೆ ಎಂದೆಲ್ಲ ಇತ್ತಂಡ ವಾದಗಳು ಹರಿದಾಡತೊಡಗಿದವು.

ಅದರಂತೆ ಕೆಲವು ದಿನಗಳ ಹಿಂದೆ ವರದಕ್ಷಿಣೆ ನಿಷೇಧ ಕಾಯ್ದೆಯು ದುರ್ಬಳಕೆಯಾಗುತ್ತಿದೆ ಎಂದು ಗುಲ್ಲೆಬ್ಬಿಸಲಾಯಿತು. ಮಹಿಳೆಯರು ತಾವೇ ಗಂಡನ ಮೇಲೆ ದೌರ್ಜನ್ಯ ನಡೆಸಿ ಅದನ್ನು ಮರೆಮಾಚಲು ಸುಳ್ಳು ಆರೋಪ ಹೊರೆಸಿ ಗಂಡ ಅತ್ತೆ ಮಾವ ನಾದಿನಿ ಮುಂತಾದವರ ಮೇಲೆ ಕೇಸು ಹಾಕಿ ನಿರಪರಾಧಿಗಳು ಬಲಿಪಶುಗಳಾಗುವಂತೆ ಮಾಡುತ್ತಿದ್ದಾರೆ. ಆದ್ದರಿಂದ ವರದಕ್ಷಿಣೆ ನಿಷೇಧ ಕಾಯ್ದೆಯಲ್ಲಿ ಸಡಲಿಕೆ ತರಬೇಕೆಂದು ಪಟ್ಟು ಹಿಡಿಯಲಾಯಿತು. ತತ್ಪರಿಣಾಮವಾಗಿ ಸದರಿ ಕಾನೂನಿನ ಪ್ರಕ್ರಿಯೆಯಲ್ಲಿ ಒಂದಷ್ಟು ಸಡಲಿಕೆ ತರುವಂತೆ ಕೋರ್ಟ್ ಆದೇಶ ನೀಡಿತು. ಹೀಗಾಗಿ ಅಪರಾಧಿ ಒಂದು- ಅಂದರೆ ಗಂಡನನ್ನು- ತಕ್ಷಣವೇ ಬಂಧಿಸಬೇಕು. ಅಪರಾಧಿ ಎರಡು ಮೂರು ನಾಲ್ಕುಗಳೆಂದು ಪರಿಗಣಿಸಲ್ಪಡುವ ಅತ್ತೆ ಮಾವ ಭಾವ ನಾದಿನಿ ಮುಂತಾದವರನ್ನು ತಕ್ಷಣವೇ ಬಂಧಿಸಲಾಗದು. ಇಲಾಖೆಯು ಪ್ರಾಥಮಿಕ ತನಿಖೆ ನಡೆಸಿ ಇವರೆಲ್ಲರೂ ನೇರವಾಗಿ ಅಪರಾಧದಲ್ಲಿ ಭಾಗಿಗಳಾಗಿದ್ದಾರೆ ಎಂದು ಕಂಡುಬಂದಲ್ಲಿ ಮಾತ್ರ ಬಂಧಿಸಬೇಕೆಂದು ತಿದ್ದುಪಡಿ ಮಾಡಲಾಗಿದೆ. ಈ ತಿದ್ದುಪಡಿಯಿಂದಾಗಿ ವರದಕ್ಷಿಣೆ ನಿಷೇಧ ಕಾಯ್ದೆಯೇ ಹಲ್ಲು ಕಳಚಿದ ಹುಲಿಯಂತಾಗಿದೆ. ಒಂದೆರಡು ಪ್ರಸಂಗಗಳಲ್ಲಿ ದುರ್ಬಳಕೆಯಾಗಿದ್ದನ್ನೇ ಮುಂದೆ ಮಾಡಿಕೊಂಡು ಪುರುಷಪ್ರಧಾನ ಮನೋಸ್ಥಿತಿಯು ಕಾನೂನಿನಲ್ಲಿಯೇ ಸಡಲಿಕೆ ತರುವಂತೆ ಒತ್ತಾಯ ಹೇರುವಲ್ಲಿ ಸಫಲವಾಗಿದ್ದು ದುರಂತವೇ ಸರಿ. ಇನ್ನೊಂದೆಡೆ ಗಂಡಂದಿರ ಮೇಲೆ ದಬ್ಬಾಳಿಕೆ ಹೆಚ್ಚಾಗುತ್ತಿದ್ದು, ನಿರಪರಾಧಿಗಳಾಗಿದ್ದ ಗಂಡಂದಿರು ಹೇಳಿಕೊಳ್ಳಲಾಗದ ಸಂಕಟಕ್ಕೆ ಒಳಗಾಗುತ್ತಾರೆ, ಪುರುಷರಿಗೆ ರಕ್ಷಣೆ ಸಿಗುತ್ತಿಲ್ಲ ಎಂದು ಬೊಬ್ಬೆ ಹಾಕಿ ಅಲ್ಲಲ್ಲಿ ಪತ್ನಿಪೀಡಿತರ ಸಂಘಗಳನ್ನು ಕಟ್ಟಿಕೊಳ್ಳುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ. ಮಗದೊಂದೆಡೆ ಮಧ್ಯಮ ವರ್ಗದ ಹೈಟೆಕ್ ವಲಯದಲ್ಲಿ ಉನ್ನತ ಹುದ್ದೆಯಲ್ಲಿರುವ ಮಹಿಳೆಯರು ಗಂಡನ ಮನೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಿಲ್ಲ, ಸಣ್ಣಪುಟ್ಟ ವಿಷಯಗಳಿಗಾಗಿ ಡೈವೋರ್ಸ್‌ಗೆ ಹಠ ಹಿಡಿಯುತ್ತಿದ್ದಾರೆ. ವಿದ್ಯಾವಂತ ಉದ್ಯೋಗಸ್ಥ ಮಹಿಳೆಯರು ತೀವ್ರವಾಗಿ ವೈಯಕ್ತಿಕವಾದಿಗಳಾಗುತ್ತಿದ್ದು ಸ್ವೇಚ್ಛಾಚಾರವನ್ನು ಅಪ್ಪಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಭಾರತೀಯ ಕುಟುಂಬ ಪದ್ಧತಿಯ ಪಾವಿತ್ರ್ಯತೆ ಹಾಳಾಗುತ್ತಿದೆ ಎಂಬ ಬೊಬ್ಬೆಗಳು ಕೇಳಿಸಿಕೊಳ್ಳುತ್ತಿವೆ. ಈ ಎಲ್ಲ ಬೆಳವಣಿಗೆಗಳು ಮಹಿಳೆಯರ ಬಗೆಗೆ ಸಮಾಜದಲ್ಲಿ ಹುರಿಗೊಳ್ಳುತ್ತಿರುವ ನಕಾರಾತ್ಮಕ ನಿಲುವುಗಳನ್ನು ದಿಗ್ದರ್ಶಿಸುತ್ತಿವೆ.

ದೆಹಲಿಯ ನಿರ್ಭಯಾಳ ಅತ್ಯಾಚಾರ ಮತ್ತು ಸಾವಿನ ಪ್ರಕರಣದ ಪರಿಣಾಮವಾಗಿ ಮಹಿಳೆಯರು ಮತ್ತು ಅಪ್ರಾಪ್ತ ಬಾಲಕಿಯರ ಮೇಲಾಗುತ್ತಿರುವ ಲೈಂಗಿಕ ಕಿರುಕುಳ-ಅತ್ಯಾಚಾರದ ದೂರುಗಳು ಪುಂಖಾನುಪುಂಖವಾಗಿ ದಾಖಲಾಗುತ್ತಿವೆ. ಸುಪ್ರೀಂಕೋರ್ಟ್ ನ್ಯಾಯಾಧೀಶರಿಂದ ಹಿಡಿದು ರಾಜಕೀಯ ನಾಯಕರು ಕಾರ್ಪೋರೇಟ್ ಅಧಿಕಾರಿಗಳು ಮಾಧ್ಯಮದ ಪರಿಣತರಾದಿಯಾಗಿ ಎಲ್ಲ ವರ್ಗದ ಪುರುಷರು ನಡೆಸುತ್ತಿರುವ ಡಿಪ್ಲೊಮ್ಯಾಟಿಕ್ ಬರ್ಬರ ಲೈಂಗಿಕ ಅತ್ಯಾಚಾರಗಳು ಬೆಳಕಿಗೆ ಬರುತ್ತಿವೆ. ಕ್ಷಣಕ್ಷಣಕ್ಕೂ ಮಾಧ್ಯಮಗಳಲ್ಲಿ ಈ ಘಟನೆಗಳು ವರದಿಯಾಗುತ್ತಿರುವ ರೀತಿಯೇ ಗಾಬರಿ ಹುಟ್ಟಿಸುತ್ತಿದೆ. ಇದೇ ಸಂದರ್ಭದಲ್ಲಿ ಹಲವು ಮುಖ್ಯವಾದ ಮಹಿಳಾ ವಿರೋಧಿ ಸಾಮಾಜಿಕ ನಂಬಿಕೆಗಳು ಅಸ್ತಿತ್ವಗೊಳ್ಳುತ್ತಿರುವುದನ್ನು ಗಮನಿಸಬೇಕಾಗಿದೆ. ಒಂದೆಡೆಯದಾಗಿ ನಿರ್ಭಯಾಳ ಪ್ರಕರಣವು ದೇಶದಾದ್ಯಂತ ಎಬ್ಬಿಸಿದ ಕಿಚ್ಚು, ತತ್ಪರಿಣಾಮವಾಗಿ ಹುಟ್ಟಿಕೊಂಡ ಕಾಯ್ದೆ ಮತ್ತು ಕಾಯ್ದೆಯಡಿಯಲ್ಲಿ ಅಪರಾಧಿಗಳಿಗೆ ನೀಡಲಾದ ಶಿಕ್ಷೆಯಿಂದಾಗಿ ಪುರುಷ ವರ್ಗದಲ್ಲಿ ಭಯ ಮತ್ತು ಎಚ್ಚರ ಮೂಡಬೇಕಾಗಿತ್ತು, ಲೈಂಗಿಕ ಅತ್ಯಾಚಾರಗಳಿಗೆ ಕಡಿವಾಣ ಬೀಳಬೇಕಾಗಿತ್ತು, ಆದರೆ ಹಾಗಾಗುತ್ತಿಲ್ಲ, ದಿನದಿಂದ ದಿನಕ್ಕೆ ಅತ್ಯಾಚಾರಗಳಲ್ಲಿ ಇಳಿಕೆಯಾಗುವ ಬದಲು ಹೆಚ್ಚಳವಾಗುತ್ತಿರುವುದು ಆತಂಕದ ಸಂಗತಿ. ಎರಡನೆಯದಾಗಿ ಮಾಧ್ಯಮಗಳಲ್ಲಿ ಈ ಘಟನೆಗಳನ್ನು ಅನವಶ್ಯಕ ಅತಿರಂಜಿತವಾಗಿ ಬಿತ್ತರಿಸುತ್ತಿರುವುದರಿಂದ ದರ್ಶಕರ ಸಂವೇದನಾಶೀಲತೆ ಜಡಗೊಂಡು 'ಓ ಇದು ಮಾಮೂಲು ಬಿಡಿ' ಎಂಬಂತಾಗುತ್ತಿದೆ. ಮಾಧ್ಯಮಗಳ ನಡೆಯ ಬಗೆಗೆ ಜನರಲ್ಲಿ ವಿಶ್ವಾಸಾರ್ಹತೆ ಕಡಿಮೆಯಾಗುತ್ತಿದೆ. ಮಾಧ್ಯಮಗಳು ತಮ್ಮ ವ್ಯಾಪಾರಿ ಮೌಲ್ಯವನ್ನು ಹೆಚ್ಚಿಸಿಕೊಳ್ಳಲೆಂದೇ ನಿರ್ಮಿಸುತ್ತಿರುವ

> ನಿರ್ಭಯಾಳ ಘಟನೆಯಲ್ಲಿ ದೇಶದಾದ್ಯಂತ ಅನುಕಂಪ, ಸ್ವಾಭಿಮಾನ ಮತ್ತು ಸ್ತ್ರೀ ಅಸ್ಮಿತತೆ ಬಗೆಗೆ ಮೂಡಿದ ಭರವಸೆಯಿಂದಾಗಿ ಅತ್ಯಾಚಾರಕ್ಕೊಳಗಾದ ಮಹಿಳೆಯರಲ್ಲಿ ಒಂದಿಷ್ಟು ಧೈರ್ಯ ಮತ್ತು ಕೆಚ್ಚು ಮೂಡುತ್ತಿದೆ. ಪ್ರವಾಹದೋಪಾದಿಯಲ್ಲಿ ಎದ್ದ ಪ್ರತಿಭಟನೆಯ ಅಲೆಯು ಪೊಲೀಸ್ ಇಲಾಖೆ ಮತ್ತು ನ್ಯಾಯಾಂಗ ವ್ಯವಸ್ಥೆಯ ಮೇಲೆ ನೈತಿಕ ಒತ್ತಡ ಹೇರಿದ್ದು ಕೂಡ ಸ್ತ್ರೀಯರಲ್ಲಿ ಒಂದಿಷ್ಟು ಆತ್ಮವಿಶ್ವಾಸ ಮೂಡಲು ಸಾಧ್ಯವಾಗಿದೆ. ನದಿಯಲ್ಲಿ ಕೊಚ್ಚಿಕೊಂಡು ಹೋಗುತ್ತಿರುವವರಿಗೆ ಒಂದು ಚಿಕ್ಕ ಕಡ್ಡಿ ಆಸರೆ ಸಿಕ್ಕರೆ ಗಡಬಡಿಸಿ ಅಪ್ಪಿಕೊಂಡಂತೆ ಅತ್ಯಾಚಾರಕ್ಕೆ ಒಳಗಾದ ಮಹಿಳೆಯರು ಮತ್ತು ಅವರ ಪಾಲಕರು ಪೊಲೀಸ್ ಇಲಾಖೆಗೆ ನುಗ್ಗುತ್ತಿದ್ದಾರೆ. ಕೇಸು ದಾಖಲಿಸುವಂತೆ ಒತ್ತಡ ತರುತ್ತಿದ್ದಾರೆ.



ಕೃತ್ರಿಮ ಅತಿರಂಜಿತ ಬಿತ್ತರಗಳು ಜನತೆಯಲ್ಲಿ ಹಿಂಸೆ ಮತ್ತು ಕ್ರೌರ್ಯದ ಬಗೆಗೆ ವಿಚಿತ್ರ ಆಕರ್ಷಣೆ ಮೂಡುತ್ತಿವೆ. ಇವು ವಿಕೃತ ಮನೋಭಾವವನ್ನೂ ರೂಢಿಸುತ್ತಿವೆ. ವರದಿಗಳು ಜನತೆಯಲ್ಲಿ ಸಾಮಾಜಿಕ ಎಚ್ಚರವನ್ನು ಮೂಡಿಸಿ ಸಂವೇದನಾಶೀಲತೆಯನ್ನು ಸೂಕ್ಷ್ಮಗೊಳಿಸಬೇಕಾಗಿತ್ತು. ಆದರೆ ಅವು ಜಡತ್ವ ಮತ್ತು ವಿಕಾರ ವಿಕೃತಿಗಳನ್ನು ಮೂಡಿಸುತ್ತಿರುವುದು ದುರಂತವೇ ಸರಿ. ಇನ್ನೂ ಮುಂದುವರೆದು ಸಾಮಾಜಿಕ ಕಾಳಜಿರಾಹಿತ್ಯ ಈ ತೆರನ ವರದಿಗಳು ಜನಸಾಮಾನ್ಯರಲ್ಲಿ ದ್ವಂದ್ವಗಳನ್ನು ನಿರ್ಮಿಸುತ್ತಿರುವುದು ಇದೆ. ನಿಜವಾಗಿಯೂ ಈ ಪರಿಯಲ್ಲಿ ದೌರ್ಜನ್ಯಗಳು ಘಟಿಸುತ್ತಿವೆಯೇ? ಮಾಧ್ಯಮಗಳು ತಮ್ಮ ಟಿಆರ್‌ಪಿಯನ್ನು ಹೆಚ್ಚಿಸಿಕೊಳ್ಳಲೆಂದು ಕೃತ್ರಿಮವಾಗಿ ಸೃಷ್ಟಿಸಲಾಗುತ್ತಿದೆಯೇ ಎಂಬ ವಿಕೃತವಾದಗಳು ಹರಿದಾಡುತ್ತಿವೆ. ಮಹಿಳೆಯರು ಏನಕೇನ ಕಾರಣದಿಂದ ತಮಗಾಗದವರ ಮೇಲೆ ಸೇಡು ತೀರಿಸಿಕೊಳ್ಳಲೆಂದು ಹುಸಿ ಆರೋಪ ಮಾಡುತ್ತಿದ್ದಾರೆ. ಹಲವಾರು ಸಂದರ್ಭಗಳಲ್ಲಿ ಅಮಾಯಕ ಗಂಡಸರನ್ನು ಬಲಿಪಶುಗಳನ್ನಾಗಿ ಮಾಡಲಾಗುತ್ತಿದೆ ಎಂಬ ವರಸೆ ಎಲ್ಲೆಲ್ಲೂ ಪ್ರಾರಂಭವಾಗಿದೆ. ಈ ಎಲ್ಲ ವಾದಗಳು ಬದಲಾದ ಮಹಿಳೆಯ ಪಾತ್ರ ಮತ್ತು ಪ್ರವೃತ್ತಿಯನ್ನು ಮಾನವೀಯ ನೆಲೆಯಲ್ಲಿ ಭಾವಿಸಿಕೊಳ್ಳಲಾಗದ ದೌರ್ಬಲ್ಯವನ್ನೇ ಬಿಂಬಿಸುತ್ತಿವೆ. ಮಹಿಳೆಯರ ಮೇಲೆ ಆಧುನಿಕೋತ್ತರ ಪುರುಷಪ್ರಧಾನ ಮನೋಸ್ಥಿತಿ ಮಾಡುತ್ತಿರುವ ಈ ಆರೋಪಗಳಲ್ಲಿ ತಥ್ಯವಿದೆಯೇ? ಎಂಬುದನ್ನು ಪರಿಶೀಲಿಸಬೇಕಾದ ಜರೂರು ಇದೆ. ಹೆಚ್ಚಾಗಿ ವರದಿಯಾಗುತ್ತಿರುವ ಅತ್ಯಾಚಾರದ ಪ್ರಕರಣಗಳಲ್ಲಿ ಮಾಧ್ಯಮಗಳು ನಿರ್ಮಿಸುತ್ತಿರುವ ಅಸಹ್ಯ ಅತಿರಂಜಕತೆಯೇ ಸಮಸ್ಯೆಯಾಗಿದೆ ಹೊರತು ಅತ್ಯಾಚಾರದ ಘಟನೆಗಳಲ್ಲಿ ಹೆಚ್ಚಳವಾಗುತ್ತಿರುವುದು ಸುಳ್ಳಲ್ಲ, ಪ್ರಾಚೀನ ಕಾಲದಿಂದಲೂ ಮಹಿಳೆಯರು ಮತ್ತು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಯುತ್ತಿರುವುದು ಸತ್ಯಸ್ಯಸತ್ಯ ಎಂಬುದರಲ್ಲಿ ಎರಡು ಮಾತಿಲ್ಲ, ವೇಷ ಮರೆಸಿಕೊಂಡು ಅಹಲ್ಯೆಯನ್ನು ಭೋಗಿಸಿದ ಇಂದ್ರ, ವಿಶ್ವಾಮಿತ್ರನ ತಪಸು ಭಂಗ ಮಾಡಲೆಂದು ದೇವಾಧಿದೇವತೆಗಳು ಮೇನಕೆಯನ್ನು ಬಳಸಿಕೊಂಡಿದ್ದು, ಮಹಾಸತಿ ಅನಸೂಯೆಯನ್ನು ಪರೀಕ್ಷಿಸಲೆಂದು ಬಂದ ತ್ರಿಮೂರ್ತಿಗಳು ಅವಳಿಂದ ಸ್ತನಪಾನಕ್ಕೆ ಆಗ್ರಹಿಸುವುದು, ಚರಿತ್ರೆ ಕಾಲದ ರಾಜಾಧಿರಾಜರು ತಮ್ಮ ರಾಜಕೀಯ ಒಪ್ಪಂದಗಳಿಗಾಗಿ ವೈರಿ ರಾಜರೊಂದಿಗೆ ವೈವಾಹಿಕ ಸಂಬಂಧ ಏರ್ಪಡಿಸಿಕೊಂಡಿದ್ದು ಮುಂತಾಗಿ ಈ ಕತೆಗಳು ಯಾವ ಕಾಲಕ್ಕಾದರೂ ಮಹಿಳೆಯರು ಪುರುಷನ ಲೈಂಗಿಕ ದಾಹಕ್ಕೆ ಬಲಿಯಾದ ತಥ್ಯವನ್ನೇ ತೆರೆದಿಡುತ್ತವೆ. ಮಹಿಳೆಯರನ್ನು ಭೋಗದ ವಸ್ತುವಾಗಿ ಪರಿಗಣಿಸಿದ ಪುರುಷ ಅಹಮ್ಮಿನ ಪ್ರವೃತ್ತಿಯು ರುದ್ರನರ್ತನವಾಗಿಯೇ ದಾಖಲಾಗಿದೆ.

ಈ ಮೊದಲೂ ಕೂಡ ಇದೇ ಪ್ರಮಾಣದಲ್ಲಿ ಅತ್ಯಾಚಾರಗಳು ಘಟಿಸುತ್ತಿದ್ದವಾದರೂ ಅವುಗಳನ್ನು ಬಯಲಿಗೆ ಹಾಕುವ ಧೈರ್ಯ ಮಹಿಳೆಯರು ಮಾಡುತ್ತಿರಲಿಲ್ಲ. ನಮ್ಮ ಮಡಿವಂತ ಸಮಾಜವು ಅತ್ಯಾಚಾರಕ್ಕೆ ಒಳಗಾದವರನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಬಲಿಯಾದವರ ಬಲಿ ತೆಗೆದುಕೊಳ್ಳುತ್ತಿತ್ತು, ತೀರ ಕ್ರೌರ್ಯವೆಂದರೆ ಅತ್ಯಾಚಾರ ಮಾಡಿದವರ ಶೌರ್ಯ ಪೌರುಷ್ಯವನ್ನು ಮೆರೆಸಲಾಗುತ್ತಿತ್ತೆ ಹೊರತು ಬಲಿಯಾದ ಸ್ತ್ರೀಯರ ಬಗೆಗೆ ಕನಿಷ್ಠ ಅನುಕಂಪವೂ ಹುಟ್ಟುತ್ತಿರಲಿಲ್ಲ. ಹೀಗಾಗಿ ಮನೆ ಒಳ-ಹೊರಗೂ ರಕ್ತಸಂಬಂಧಿಗಳು, ನೆರೆಹೊರೆಯವರು, ಕಚೇರಿ ಸಿಬ್ಬಂದಿ, ಅಧ್ಯಾಪಕರು, ಪೊಲೀಸರು, ಪುಢಾರಿಗಳು ಮುಂತಾಗಿ ಎಲ್ಲ ಸ್ತರದ ಪುರುಷರಿಂದ ಅತ್ಯಾಚಾರಕ್ಕೊಳಗಾದರೂ ಮಹಿಳೆಯರು ತುಟಿಪಿಟಕ್ಕೆನ್ನದೆ ಅವುಗಳನ್ನು ಮುಚ್ಚಿಕೊಳ್ಳುವ ಧಾವಂತಕ್ಕಿಳಿಯುತ್ತಿದ್ದರು. ನಿರ್ಭಯಾಳ ಘಟನೆಯಲ್ಲಿ ದೇಶದಾದ್ಯಂತ ಅನುಕಂಪ, ಸ್ವಾಭಿಮಾನ ಮತ್ತು ಸ್ತ್ರೀ ಅಸ್ಮಿತತೆ ಬಗೆಗೆ ಮೂಡಿದ ಭರವಸೆಯಿಂದಾಗಿ ಅತ್ಯಾಚಾರಕ್ಕೊಳಗಾದ ಮಹಿಳೆಯರಲ್ಲಿ ಒಂದಿಷ್ಟು ಧೈರ್ಯ ಮತ್ತು ಕೆಚ್ಚು ಮೂಡುತ್ತಿದೆ. ಪ್ರವಾಹದೋಪಾದಿಯಲ್ಲಿ ಎದ್ದ ಪ್ರತಿಭಟನೆಯ ಅಲೆಯು ಪೊಲೀಸ್ ಇಲಾಖೆ ಮತ್ತು ನ್ಯಾಯಾಂಗ ವ್ಯವಸ್ಥೆಯ ಮೇಲೆ ನೈತಿಕ ಒತ್ತಡ ಹೇರಿದ್ದು ಕೂಡ ಸ್ತ್ರೀಯರಲ್ಲಿ ಒಂದಿಷ್ಟು ಆತ್ಮವಿಶ್ವಾಸ ಮೂಡಲು ಸಾಧ್ಯವಾಗಿದೆ. ನದಿಯಲ್ಲಿ ಕೊಚ್ಚಿಕೊಂಡು ಹೋಗುತ್ತಿರುವವರಿಗೆ ಒಂದು ಚಿಕ್ಕ ಕಡ್ಡಿ ಆಸರೆ ಸಿಕ್ಕರೆ ಗಡಬಡಿಸಿ ಅಪ್ಪಿಕೊಂಡಂತೆ ಅತ್ಯಾಚಾರಕ್ಕೆ ಒಳಗಾದ ಮಹಿಳೆಯರು ಮತ್ತು ಅವರ ಪಾಲಕರು ಪೊಲೀಸ್ ಇಲಾಖೆಗೆ ನುಗ್ಗುತ್ತಿದ್ದಾರೆ. ಕೇಸು ದಾಖಲಿಸುವಂತೆ ಒತ್ತಡ ತರುತ್ತಿದ್ದಾರೆ. ಮಹಿಳೆಯರ ಈ ಧೈರ್ಯ ಮತ್ತು ಕ್ರಿಯಾಶೀಲತೆಯನ್ನು ಅವಳ ವಿಮೋಚನೆಯ ಮಾರ್ಗವಾಗಿ ಅಭಿವೃದ್ಧಿಪಡಿಸಬೇಕಾದ ಮಾಧ್ಯಮಗಳು ಅದನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ವಿಷಾದನೀಯ. ಮಹಿಳೆಯರ ಈ ಕೊಂಚ ಧೈರ್ಯವನ್ನೇ ಬಂಡವಾಳ ಮಾಡಿಕೊಳ್ಳಲು ಹೊರಟ ಮಾಧ್ಯಮದವರು ಇದೀ ಘಟನೆಯು ತನಗೆ ಲಾಭವಾಗುವಂತೆ ವಿಕೃತ ವಿಕಾರಗೊಳಿಸಿ ಬಿಂಬಿಸುತ್ತಿದೆಯಲ್ಲ ಇದು ಮತ್ತೆ ಮಹಿಳೆಯರಿಗೆ ವರವಾಗುವ ಬದಲು ಶಾಪವಾಗಿ ಪರಿಣಮಿಸುತ್ತಿದೆ. ಒಂದು ಹಂತದವರೆಗೆ ಇಂಥ ಘಟನೆಗಳನ್ನು ಸುಸಂಬದ್ಧ ರೀತಿಯಲ್ಲಿ ತುಂಬ ಆರೋಗ್ಯಪೂರ್ಣವಾಗಿ ವರದಿ ಮಾಡುವ ಮೂಲಕ ಸಂಬಂಧಪಟ್ಟ ಇಲಾಖೆಗಳಿಗೆ ಚುರುಕು ಮುಟ್ಟಿಸಬೇಕು.



ಮಹಿಳಾ ವಿಶೇಷಾಂಕ

ಅಷ್ಟರಮಟ್ಟಿಗೆ ಮಾಧ್ಯಮಗಳ ಪಾತ್ರ ತುಂಬ ಮುಖ್ಯ. ಆದರೆ ಪ್ರಚಾರ ಗಿಟ್ಟಿಸಿಕೊಳ್ಳಲೆಂದೇ ಘಟನೆಯನ್ನು ಉದ್ರೇಕಕಾರಿಗೊಳಿಸಿ, ಅನಾರೋಗ್ಯವಾದ ವಾದವಿವಾದಗಳನ್ನೇರ್ಪಡಿಸಿ ಮಹಿಳಾ ವಿರೋಧಿ ನಂಬಿಕೆಗಳನ್ನೇ ಪುರಸ್ಕರಿಸುವ ದಿಕ್ಕಿನಲ್ಲಿ ಉತ್ಸುಕರಾಗುತ್ತಿರುವುದು ಕ್ಷಮಾರ್ಹವಲ್ಲ, ಹೀಗಾಗಿಯೇ ಒಂದೆಡೆ ಧೈರ್ಯದಿಂದ ಅತ್ಯಾಚಾರಕ್ಕೆ ಬಲಿಯಾದ ಮಹಿಳೆಯರು ಮುಂದೆ ಬರುತ್ತಿರುವ ಸಂದರ್ಭದಲ್ಲಿಯೇ ಇನ್ನೊಂದೆಡೆ ಅಪರಾಧಗಳು ಸಾಬೀತಾಗದೆ ಶಿಕ್ಷೆಯಾಗುತ್ತಿರುವ ಪ್ರಮಾಣ ಕುಗ್ಗುತ್ತಿರುವುದು ಇದೆ. ಹೀಗಾಗಿ ಮಹಿಳೆಯರ ಸಮಸ್ಯೆಗಳು ನಿರೀಕ್ಷಿತ ಪರಿಹಾರಗಳನ್ನು ಕಾಣದೆ ಮತ್ತದೆ ಸಂಕಟದಲ್ಲಿ ಸಿಕ್ಕು ಒದ್ದಾಡುತ್ತಿವೆ.

ಆಧುನಿಕ ಮಹಿಳೆಯರು ಸ್ವೇಚ್ಛಾಚಾರಿಗಳಾಗುತ್ತಿದ್ದು ಕೌಟುಂಬಿಕ ಚೌಕಟ್ಟಿಗೆ ಹೊಂದಿಕೊಳ್ಳುತ್ತಿಲ್ಲ ಎಂಬ ಇನ್ನೊಂದು ಆರೋಪ ಹೊರಿಸಲಾಗುತ್ತಿದೆ. ವಾಸ್ತವದಲ್ಲಿ ಭಾರತೀಯ ಕುಟುಂಬಗಳು ಆಧುನಿಕೋತ್ತರ ಜೀವನ ವಿಧಾನಕ್ಕೆ ತಳುಕು ಹಾಕಿಕೊಳ್ಳುತ್ತಿವೆ. ನವಉದಾರವಾದಿ ನೀತಿಯಿಂದಾಗಿ ಉತ್ಪಾದನಾ ವ್ಯವಸ್ಥೆ ಮತ್ತು ಉತ್ಪಾದನಾ ಸಲಕರಣೆಗಳಲ್ಲಿ ಬದಲಾವಣೆಗಳಾಗುತ್ತಿವೆ. ಉತ್ಪಾದನಾ ವ್ಯವಸ್ಥೆಯಲ್ಲಾದ ಬದಲಾವಣೆಗಳು ಮಾನವೀಯ ಸಂಬಂಧಗಳಲ್ಲಿ ಗಣನೀಯ ಬದಲಾವಣೆಗಳನ್ನು ತರುತ್ತವೆ ಎಂಬ ವೈಜ್ಞಾನಿಕ ಸತ್ಯವನ್ನು ಅಲ್ಲಗಳೆಯಲಾಗದು. ಪರಂಪರಾಗತ ಪಾಲಕರು-ಮಕ್ಕಳು ಗಂಡ-ಹೆಂಡತಿ ಸೋದರ-ಸೋದರಿ ಅತ್ತೆ-ಸೊಸೆ ಇತ್ಯಾದಿ ಪ್ರಾಚೀನ ಸಂಬಂಧದ ಸ್ವರೂಪಗಳು ಬೇರೆಯೇ ಆಗಿವೆ. ಆದರೆ ನಮ್ಮ ಸಮಾಜ ಮಾತ್ರ ಜೀವನ ವಿಧಾನದಲ್ಲಿ ಆಧುನಿಕೋತ್ತರ ರೀತಿಗೆ ಹೊಂದಿಕೊಂಡಂತೆ ಮೌಲ್ಯಗಳಲ್ಲಿ ಬದಲಾವಣೆ ಮಾಡಿಕೊಳ್ಳಲು ಸಿದ್ಧವಾಗುತ್ತಿಲ್ಲ. ಉದಾಹರಣೆಗೆ ಸಾಫ್ಟ್‌ವೇರ್ ಕಂಪನಿಗಳಲ್ಲಿ ಗಂಡು ಹೆಣ್ಣುಗಳು ಸಮಾನವಾಗಿ ದುಡಿಯುವ, ಸಮಾನ ಸಂಬಳ ತರುವ ಸಂದರ್ಭದಲ್ಲಿ ಮಹಿಳೆಯರ ಕೌಟುಂಬಿಕ ಪಾತ್ರಗಳು ಅನಿವಾರ್ಯವಾಗಿ ಬದಲಾಗಲೇ ಬೇಕಾಗುತ್ತದೆ. ಈ ಮೊದಲಿನಂತೆ ಅವಳು ಪೂರ್ತಿ ಮನೆವಾಳ್ತಿಯನ್ನು ಮಾಡಿಕೊಂಡು ಗಂಡ ಮಕ್ಕಳನ್ನು ಟಿಪಿಕಲ್ ತಾಯಿ ಹೆಂಡತಿಯಾಗಿ ಸಂಭಾಳಿಸುವುದು ಸಾಧ್ಯವೇ ಇಲ್ಲ. ಸಾಫ್ಟ್‌ವೇರ್ ಕಂಪನಿಗಳಲ್ಲಿ ದುಡಿಯುವ ಯುವಕರು ತನ್ನದೇ ವೃತ್ತಿಯಲ್ಲಿರುವ ತನ್ನಷ್ಟೆ ಅಥವಾ ಅದಕ್ಕಿಂತ ಹೆಚ್ಚು ಸಂಬಳ ತರುವ ಹೆಂಡತಿಯನ್ನು ಬಯಸುತ್ತಾರೆ. ಆದರೆ ಹೆಂಡತಿಯಾದವಳು ತನ್ನಂತೆಯೇ ಸರ್ವತಂತ್ರ ಸ್ವತಂತ್ರವಾಗಿ ಬದುಕುವುದನ್ನು ಇಷ್ಟಪಡಲಾರರು. ಹೆಂಡತಿಯಾದವಳು ನೌಕರಿಯಿಂದ ಮನೆಗೆ ಬಂದ ತಕ್ಷಣ ಅವಳು ಶುದ್ಧಾಂಗವಾಗಿ ಗೃಹಿಣಿಯಾಗಿದ್ದು ತನ್ನ ಮತ್ತು ಕುಟುಂಬದವರ ಬೇಕು ಬೇಡಗಳನ್ನು ಪೂರೈಸಬೇಕೆಂದು ನಿರೀಕ್ಷಿಸುತ್ತಾರೆ. ಇದರಲ್ಲಿ ಕೊಂಚ ಲೋಪವಾದರೂ ಸಾಕು ಉದ್ಯೋಗಸ್ಥ ಹುಡುಗಿಯರು ಹಠವಾದಿಗಳೆಂಬ ಹಣೆಪಟ್ಟಿ ಹಚ್ಚಿಕೊಳ್ಳಬೇಕಾಗುತ್ತದೆ. ತೀರ ಸಣ್ಣಪುಟ್ಟ ವಿಷಯಗಳಿಗೆ ದಾಂಪತ್ಯಗಳು ಬಿರುಕು ಬಿಡುತ್ತವೆ. ಇನ್ನೊಂದೆಡೆ ಹೆಚ್ಚಿನ ಮಟ್ಟದಲ್ಲಿ ಉದ್ಯೋಗ ಸೃಷ್ಟಿಸುತ್ತಿರುವ ಖಾಸಗಿ ಕಂಪನಿಗಳು ದುಡಿಯುವ ಮಹಿಳೆ ಮತ್ತು ಪುರುಷರನ್ನು ಸಮಾನ ಕೂಲಿಕಾರ್ಮಿಕರೆಂದು ಪರಿಗಣಿಸುತ್ತವೆ. ದುಡಿಯುವ ರೀತಿಯಲ್ಲಿ ಸಮಾನತೆ ಹೇರುವ ಈ ಕಂಪನಿಗಳು ನಿಸರ್ಗದತ್ತವಾದ ಮಹಿಳೆಯ ಪಾವಿತ್ರತೆಯನ್ನು ಪರಿಗಣಿಸುವುದೇ ಇಲ್ಲ. ನಿಸರ್ಗದತ್ತವಾದ ಪಾವಿತ್ರತೆಗೆ ಬೇಕಾಗುವ ಸೌಲಭ್ಯ ಸವಲತ್ತುಗಳನ್ನು ಕೊಡಲು ನಿರಾಕರಿಸುತ್ತವೆ. ಕಂಪನಿಗಳಲ್ಲಿ ದುಡಿಯುವ ಹುಡುಗಿಯರು ಸಂಪೂರ್ಣವಾಗಿ ಕರಿಯರಿಸ್ಟ್ (ಹುದ್ದಾವಾದಿ) ಆಗಿ ತೊಡಗಿಸಿಕೊಳ್ಳಬೇಕೇ ಹೊರತು, ಮದುವೆ ಬಸುರಿ ಬಾಣಂತಿ ಎಂದು ವಿಶೇಷ ಸಮಯಾವಕಾಶ ಕೇಳುವಂತಿಲ್ಲ. ಈ ಎಲ್ಲ ಕೆಲಸಗಳಿಗಾಗಿ ಅವಳು ತನ್ನ ಸಮಯ ಪ್ರತಿಭೆ ವಿನಿಯೋಗಿಸುವುದಾದರೆ ಕೆರಿಯರ್‌ನಿಂದ ದೂರ ಸರಿಯಲೇಬೇಕಾಗುತ್ತದೆ. ಒಂದೆಡೆ ಜಾಗತಿಕ ಉದ್ಯಮಶೀಲತೆ ತುಂಬುತ್ತಿರುವ ಮಹತ್ವಾಕಾಂಕ್ಷೆ ಹಣದ ರೂಪದ ಆಮಿಷ, ಇನ್ನೊಂದೆಡೆ ಕುಟುಂಬ ವ್ಯವಸ್ಥೆಯ ಮೌಲ್ಯ ನಂಬಿಕೆಗಳು ಇವೆರಡರ ನಡುವೆ ಸಿಕ್ಕು ಮಹಿಳೆಯರು ಅಪಾರ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಕುಟುಂಬ ಮತ್ತು ಕೆರಿಯರ್ ಎರಡನ್ನೂ ನಿಭಾಯಿಸಲಾಗದೆ ಒದ್ದಾಡುತ್ತಿರುವ ಈ ಹಂತದಲ್ಲಿ ಅವರನ್ನು ಹಠವಾದಿಗಳೆಂದು ಬಿಂಬಿಸಲು ಪುರುಷಪ್ರಧಾನ ವ್ಯವಸ್ಥೆಗೆ ಹೆಚ್ಚಿನ ಅವಕಾಶಗಳು ಒದಗಿಬರುತ್ತಿವೆ.

ಈ ಮೇಲಿನ ಎಲ್ಲ ಸಂಗತಿಗಳು ಭಾರತೀಯ ಮಹಿಳೆಯರು ಆಧುನಿಕೋತ್ತರ ವ್ಯವಸ್ಥೆಯಲ್ಲಿ ಮತ್ತದೇ ಪುರುಷಪ್ರಧಾನ ನಂಬಿಕೆ ಮೌಲ್ಯಗಳ ತಿರುಗಣಿ ಮಣಿಯಲ್ಲಿ ಸಿಕ್ಕಿ ಒದ್ದಾಡುವಂತೆ ಮಾಡುತ್ತಿವೆಯೇ ಹೊರತು ನಿಜವಾದ ಅರ್ಥದಲ್ಲಿ ಮಹಿಳಾ ಲೋಕದ ಸಂಪೂರ್ಣ ವಿಮೋಚನೆ ಮರೀಚಿಕೆಯೇ ಆಗುತ್ತಿದೆ.



- ಡಾ. ಮೀನಾಕ್ಷಿ ಬಾಳಿ


Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 12-03-2014

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್
ಲಂಕೇಶ್ ಬಳಗ
ಲೋಹಿಯಾ ಪ್ರತಿಷ್ಠಾನ
ದಲಿತ ಸಾಹಿತ್ಯ ಪರಿಷತ್ (ರಾಯಚೂರು)
ಮನುಜ ಮತ ಬಳಗ (ಸಿಂಧನೂರು)
ಇವರ ಸಂಯುಕ್ತಾಶ್ರಯದಲ್ಲಿ

ಪಿ. ಲಂಕೇಶ್ ಅವರ 79ನೇ ಜನ್ಮೋತ್ಸವ ಕಾರ್ಯಕ್ರಮ

ವಿಚಾರಗೋಷ್ಠಿಗಳು – ಪುಸ್ತಕಗಳ ಬಿಡುಗಡೆ – ಸಾಂಸ್ಕೃತಿಕ ಕಾರ್ಯಕ್ರಮಗಳು

ದಿನಾಂಕ: 09–03–2014ರ ಭಾನುವಾರ ಬೆಳಗ್ಗೆ 10:00ಕ್ಕೆ,
ಸ್ಥಳ: ಜಂಬಲದಿನ್ನಿ ರಂಗಮಂದಿರ, ರಾಯಚೂರು



ಉದ್ಘಾಟನಾ ಸಮಾರಂಭ ಬೆಳಗ್ಗೆ : 10 ಗಂಟೆ

ಸ್ವಾಗತ:
ಮಹಾಂತೇಶ ಮಸ್ಕಿ
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ರಾಯಚೂರು
ಕಾರ್ಯಕ್ರಮದ ಕುರಿತು:
ಕುಮಾರ್ ಸಮತಳ
ಕರ್ನಾಟಕ ಜನಶಕ್ತಿ, ಹೈದ್ರಾಬಾದ್ ಕರ್ನಾಟಕ ವಿಭಾಗ
ಅಧ್ಯಕ್ಷತೆ:
ಗೌರಿ ಲಂಕೇಶ್
ಸಂಪಾದಕರು, 'ಲಂಕೇಶ್' ವಾರಪತ್ರಿಕೆ, ಬೆಂಗಳೂರು
ಕಾರ್ಯಕ್ರಮದ ಉದ್ಘಾಟನೆ:
ಕುಂ.ವೀರಭದ್ರಪ್ಪ
ಸಾಹಿತಿಗಳು, ಕೊಟ್ಟೂರು
ಪುಸ್ತಕಗಳ ಬಿಡುಗಡೆ:
ಸಿ.ದಾನಪ್ಪ ನಿಲೋಗಲ್
ಕವಿಗಳು, ರಾಯಚೂರು
ಪಿ.ಲಂಕೇಶ್ –ಒಂದು ನೆನಪು:
ಡಾ.ರಹಮತ್ ತರೀಕೆರೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಒಡಲ ನುಡಿ
ಸಿ.ಬಿ.ಪಾಟೀಲ್ ಓಕಳಿ, ಗುಲಬರ್ಗಾ
ಡಾ. ಕೆ.ಶಿವರಾಜ್, ಸಿಂಧನೂರು
ಡಾ. ಕಾವೇರಿ ಶ್ಯಾವಿ, ಕಾರಟಗಿ
ಎಂ.ನಾಗರಾಜ್, ರಾಯಚೂರು
ಅಮರೇಶ ಕುಂಬಾರ, ಲಿಂಗಸೂಗೂರು,
ರಾಜಾ ಮದನ್‌ಗೋಪಾಲ ನಾಯಕ, ಸುರಪುರ
ಎಂ.ಮೂಲಿಮನಿ ಪಾಷಾ, ರಾಯಚೂರು
ವಿಶ್ವಾರಾಧ್ಯ ಸತ್ಯಂಪೇಟೆ, ಚನ್ನಬಸವಣ್ಣ, ಪತ್ರಕರ್ತರು, ರಾಯಚೂರು
ಕೆ. ಸತ್ಯನಾರಾಯಣ, ಪತ್ರಕರ್ತರು, ರಾಯಚೂರು

ಅತಿಥಿಗಳು
ಭೀಮನಗೌಡ ಇಟಗಿ, ಲೋಹಿಯಾ ಪ್ರತಿಷ್ಠಾನ
ಈ ಆಂಜಿನೇಯ, ಉದ್ಯಮಿಗಳು, ರಾಯಚೂರು
ರಾಜು ಭೀಮಳ್ಳಿ, ಸದಸ್ಯರು ಹೈ.ಕ.ಶಿ.ಸಂಸ್ಥೆ, ಗುಲ್ಬರ್ಗಾ
ಪದ್ಮವರ್ಧನ್, ವಕೀಲರು, ರಾಯಚೂರು
ತಾಯರಾಜ್ ಮರ್ಚೆಟ್ಹಾಳ್, ದಲಿತ ಸಾಹಿತ್ಯ ಪರಿಷತ್, ರಾಯಚೂರು
ಕಲಿಗಣನಾಥ ಗುಡದೂರು, ಕಥೆಗಾರರು, ಸಿಂಧನೂರು
ವೈ.ನರೇಂದ್ರನಾಥ, ಸಿಂಧನೂರು
ಡಾ.ಲಿಂಗಣ್ಣ ಗಾಣಧಾಳ, ತಾಲೂಕ್ ಕನ್ನಡ ಸಾಹಿತ್ಯ ಪರಿಷತ್, ರಾಯಚೂರು
ತಿಮ್ಮಾರೆಡ್ಡಿ ಕೆ.ಪಿ.ಟಿ.ಸಿ.ಎಲ್, ಎಸ್.ಸಿ./ಎಸ್.ಟಿ. ಯೂನಿಯನ್, ಶಕ್ತಿನಗರ
ಬಸವರಾಜ ಬಾದರ್ಲಿ, ಪ್ರಗತಿಪರ ಹೋರಾಟಗಾರರು, ಸಿಂಧನೂರು

ಕಾರ್ಯಕ್ರಮ ನಡೆಸಿಕೊಡುವವರು
ಕೆ.ಗಿರಿಜಾ ಮತ್ತು ಶರಣಬಸವ ಪಾಟೀಲ್

ವಿಚಾರ ಗೋಷ್ಠಿ–1 (ಮಧ್ಯಾಹ್ನ 12 ಗಂಟೆ)

ವಿಷಯ: ಪ್ರಸ್ತುತ ರಾಜಕೀಯದ ಮಗ್ಗಲುಗಳು
ಮಾತನಾಡುವವರು
ಎ.ಕೆ.ಸುಬ್ಬಯ್ಯ
ಹಿರಿಯ ಚಿಂತಕರು, ಬೆಂಗಳೂರು
ಡಾ.ಶಿವಗಂಗಾ ರುಮ್ಮಾ,
ಕೇಂದ್ರೀಯ ವಿಶ್ವವಿದ್ಯಾಲಯ, ಗುಲಬರ್ಗಾ
ಚಾಮರಸ ಮಾಲಿಪಾಟೀಲ್,
ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತಸಂಘ, ರಾಯಚೂರು
ಕೆ.ಎಲ್. ಅಶೋಕ,
ಕಾರ್ಯದರ್ಶಿಗಳು, ಕರ್ನಾಟಕ ಕೋಮುಸೌಹಾರ್ದ ವೇದಿಕೆ

ಅಧ್ಯಕ್ಷತೆ
ವಿಠ್ಠಪ್ಪ ಗೋರಂಟ್ಲಿ, ಪ್ರಗತಿಪರ ಚಿಂತಕರು, ಕೊಪ್ಪಳ

ಕಾರ್ಯಕ್ರಮ ನಡೆಸಿಕೊಡುವವರು
ಎಸ್.ದೇವೇಂದ್ರಗೌಡ, ಸಿಂಧನೂರು

ವಿಚಾರ ಗೋಷ್ಠಿ–2 (ಮಧ್ಯಾಹ್ನ: 3 ಗಂಟೆ

ವಿಷಯ: ಹೈದ್ರಾಬಾದ ಕರ್ನಾಟಕ : ವರ್ತಮಾನ–ಭವಿ
ಮಾತನಾಡುವವರು
ಚಂದ್ರಶೇಖರ ತುರವೀಹಾಳ
ಸ್ಥಾನಿಕ ಸಂಪಾದಕರು, ವಿಜಯ ಕರ್ನಾಟಕ, ಗಂಗಾವತಿ ಆವೃತ್ತಿ
ಸಿರಿಗೆರೆ ಪೊನ್ನರಾಜ್, ಪ್ರಗತಿಪರ ಹೋರಾಟಗಾರರು, ಬಳ್ಳಾರಿ
ಡಿ.ಹೆಚ್.ಕಂಬಳಿ, ಪತ್ರಕರ್ತರು, ಸಿಂಧನೂರು
ರಜಾಕ್ ಉಸ್ತಾದ್
ಹೈದ್ರಬಾದ್ ಕರ್ನಾಟಕ ಜನಾಂದೋಲನ ಸಮಿತಿ, ರಾಯಚೂರು

ಅಧ್ಯಕ್ಷತೆ
ವೀರ ಹನುಮಾನ್, ಪ್ರಗತಿಪರ ಚಿಂತಕರು, ರಾಯಚೂರು

ಪ್ರತಿಕ್ರಿಯೆ
ಕೆ. ಸರೋಜಾ ಬಳ್ಳಾರಿ
ಬಿ.ಪೀರಬಾಷಾ
ಅಂಬಣ್ಣ ಅರೋಲಿಕರ್
ಕೆ.ರಾಮಕೃಷ್ಣ
ದಸ್ತಗೀರ ಸಾಬ್ ದಿನ್ನಿ
ಜೆ.ಎಲ್ ಈರಣ್ಣ
ಅಯ್ಯಪ್ಪ ಹೂಗಾರ
ಕೈದಾಳ್ ಕೃಷ್ಣಮೂರ್ತಿ

ಕಾರ್ಯಕ್ರಮ ನಡೆಸಿಕೊಡುವವರು
ಕೊರೇನಲ್ ಮತ್ತು ಬಸವರಾಜ ಹಳ್ಳಿ

ಸಮಾರೋಪ ಸಮಾರಂಭ (ಸಂಜೆ: 6–30 ಗಂಟೆ

ಮಾತನಾಡುವವರು
ರಂಜಾನ್ ದರ್ಗಾ
ರಾಘವೇಂದ್ರ ಕುಷ್ಟಗಿ
ಆರ್. ಮಾನಸಯ್ಯ

ಉಪಸ್ಥಿತಿ
ಗೌರಿ ಲಂಕೇಶ್
ಶ್ರೀಕಾಂತ, ವಕೀಲರು
ಜಯಣ್ಣ, ಅಧ್ಯಕ್ಷರು, ಎಸ್‌ಡಿಎಂಸಿ
ಜಗದೀಶ್ ಗುಪ್ತ
ಎಸ್.ಶರಣೇಗೌಡ, ಸಿಂಧನೂರು

ಸಾಂಸ್ಕೃತಿಕ ಕಾರ್ಯಕ್ರಮಗಳು
ಡಿಂಗ್ರಿ ನರಸಪ್ಪ
ಎನ್.ಬಿ. ಲಕ್ಷ್ಮೀರೆಡ್ಡಿ
ಹಾಗೂ ಬಸವರಾಜ ಎಕ್ಕಿ ಮತ್ತು ಅಬ್ರಹಾಂ


ಅಂದು ನಮ್ಮ ಪ್ರಕಾಶನದ ಪುಸ್ತಕಗಳು ರಿಯಾಯತಿ ದರದಲ್ಲಿ ಲಭ್ಯವಿರುತ್ತವೆ

ಸಂಪರ್ಕ
ಕುಮಾರ ಸಮತಳ (ಮೊ 9880292674)
ಮಹಾಂತೇಶ ಮಸ್ಕಿ (ಮೊ 9448270359)
ಬಸವರಾಜ ಬಾದರ್ಲಿ (9980446160)
ತಾಯರಾಜ್ ಮರ್ಚೆಟ್ಹಾಳ್ (9742926390)

ಈಗ ಜಾಬ್‌ನ್ಯೂಸ್
ಹೊಸ ಸಂಚಿಕೆ ಎಲ್ಲೆಡೆ ಲಭ್ಯ



ಲಂಕೇಶ್ ಮೀಡಿಯಾದ
ಗ್ರೇಟ್ ಪ್ರಕಾಶನದ ಕೊಡುಗೆ



ಪೊಲೀಸ್ ನೇಮಕಾತಿ
ಸ್ಪರ್ಧಾತ್ಮಕ ಪರೀಕ್ಷಾ ಕೈಪಿಡಿ
ಮತ್ತು
ಪರೀಕ್ಷಾ ಪುಸ್ತಕ
ಎಲ್ಲೆಡೆ ಲಭ್ಯ
ಹೆಚ್ಚಿನ ಮಾಹಿತಿಗಾಗಿ:
080–26676427
9880302817



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com